ಮಾರ್ಚ್ 30, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1978
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-



## ನುಂಗಿ ನೀರು ಕುಡಿಯುತ್ತಿರುವ ಪ್ರಾಧಿಕಾರ!



# ಮಹದೇಶ್ವರ ಬೆಟ್ಟದಲ್ಲಿ ಭ್ರಷ್ಟಾಚಾರ!!





## ತಂದೆ-ಅಣ್ಣನಿಂದ ಕೊಲೆಯಾದ ಮಂಜ!





## ನರ್ಸ್‌ಳ ಹತ್ಯೆ ಮಾಡಿ ತುಂಗಭದ್ರ ನದಿಗೆ ಬಿಸಾಡಿದ ಹಂತಕರು!

## ಹಣಕಾಸಿನ ವಿಚಾರಕ್ಕೆ ಪುನೀತ್ ಹೆಣ ಕೆಡವಿದ ಮೇಸ್ತ್ರಿ!



# ಅಬ್ಬರಿಸಿ ಬೊಬ್ಬಿರಿದಿದ್ದ ಇಂಡಿಕೂಟ ಮಂಕಾಯ್ತು!



✍ಬಿ.ಎಂ. ಲವಕುಮಾರ್

ನೋಡ್ತಾ ಇರಿ ಎನ್‌ಡಿಎ ಸರ್ಕಾರ ಮಕಾಡೆ ಮಲಗುತ್ತೆ ನಾವು ಅಧಿಕಾರ ಹಿಡಿಯುತ್ತೇವೆ ಎಂದು ಬೊಬ್ಬಿರಿದಿದ್ದ ಐಎನ್‌ಡಿಐಎ (ಇಂಡಿಕೂಟ) ನಾಯಕರು ಲೋಕಸಭಾ ಚುನಾವಣೆ ಕಳೆದು ವರ್ಷವಾಗುತ್ತಿದ್ದಂತೆಯೇ ಒಗ್ಗಟ್ಟು ಕಳೆದುಕೊಂಡು ಮೌನಕ್ಕೆ ಜಾರಿದ್ದು, ಇದೆಲ್ಲವನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿ ಇಂಡಿಕೂಟ ಉಳಿಯುತ್ತಾ? ಛಿದ್ರವಾಗುತ್ತಾ? ಎಂಬ ಅನುಮಾನಗಳು ಹುಟ್ಟಿಕೊಳ್ಳಲು ಆರಂಭಿಸಿದೆ.



ಈಗ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿದರೆ ಇಂಡಿ ಒಕ್ಕೂಟದ ನಾಯಕರು ಒಗ್ಗಟ್ಟಾಗಿ ಸಂಘಟನೆ ಮಾಡುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಮುಂದಿನ ಲೋಕಸಭಾ ಚುನಾವಣೆ ಬರುವ ತನಕವೂ ಇವರು ತಲೆಕೆಡಿಸಿಕೊಳ್ಳುವಂತೆ ಕಾಣುತ್ತಿಲ್ಲ. ಅವರೆಲ್ಲರೂ ಚುನಾವಣೆ ಹತ್ತಿರ ಬಂದಾಗ ಒಂದಷ್ಟು ಸಮಾವೇಶ, ಪ್ರಚಾರ ಭಾಷಣ ಮಾಡಿ ಮನೆಮನೆಗೆ ಹೋಗಿ ಮತಕೇಳಿ ಬಿಟ್ಟರೆ ಸಾಕೆಂದುಕೊಂಡಿದ್ದಾರೆ. ಹೀಗಾಗಿಯೇ ತಮ್ಮಪಾಡಿಗೆ ತಾವು ಎಂಬಂತೆ ತೆಪ್ಪಗಿದ್ದಾರೆ. ಇಲ್ಲಿವರೆಗೆ ಇಂಡಿ ಮೈತ್ರಿಕೂಟದ ನಾಯಕರು ಒಂದೆಡೆ ಸೇರಿ ಮುಂದೇನು ಮಾಡಬೇಕು ಎಂಬುದರ ಬಗ್ಗೆ ಚರ್ಚೆ ನಡೆಸುವುದಿರಲಿ ಮೈತ್ರಿಕೂಟದ ಪರವಾಗಿ ಒಂದೇ ಒಂದು ಹೇಳಿಕೆ ನೀಡದೆ ಮೌನಕ್ಕೆ ಜಾರಿರುವುದನ್ನು ನೋಡಿದರೆ ಹತ್ತು ಹಲವು ಅನುಮಾನಗಳು ಮೂಡದಿರದು.

ಕಳೆದ ವರ್ಷ ಈ ವೇಳೆಗೆ ಇಂಡಿ ಕೂಟದ ಅಬ್ಬರ ದೇಶದಲ್ಲಿ ಜೋರಾಗಿತ್ತು. ನರೇಂದ್ರ ಮೋದಿಯನ್ನು ವಿರೋಧಿಸುವ ಎಲ್ಲ ರಾಜಕೀಯ ಪಕ್ಷಗಳ ನಾಯಕರು ಒಗ್ಗೂಡಿ ಎನ್‌ಡಿಎ ಮೈತ್ರಿ ಕೂಟದ ವಿರುದ್ಧ ಸಮರ ಸಾರಿದ್ದರು. ಅದರ ಫಲವಾಗಿ ಒಂದೊಳ್ಳೆಯ ಸ್ಥಾನಗಳನ್ನು ಪಡೆಯಲು ಸಾಧ್ಯವಾಗಿತ್ತು. ಆದರೆ ಚುನಾವಣೆ ಮುಗಿಯುತ್ತಿದ್ದಂತೆಯೇ ಆ ಅಬ್ಬರ, ಉತ್ಸಾಹ ಎಲ್ಲವೂ ಮುಗಿದು ಹೋಗುವುದರೊಂದಿಗೆ ತಮ್ಮ ಹಾದಿ ತಮಗೆ ಎಂಬಂತೆ ಒಂದೊಂದು ಪಕ್ಷದವರು ಒಂದೊಂದು ಹಾದಿಯನ್ನು ಹಿಡಿದು ಕೊಂಡು ಹೋಗುತ್ತಿರುವುದು ಕಾಣಿಸುತ್ತಿದೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಬಹುಶಃ ಇವರೆಲ್ಲರೂ ಒಟ್ಟಾಗಿ ಸೇರಬೇಕಾರೆ ಮತ್ತೆ ಲೋಕಸಭಾ ಚುನಾವಣೆ ಬರಬೇಕಿದೆ. ಆಗ ಮತ್ತೊಮ್ಮೆ ಎದ್ದು ಬರುವ ಸಾಧ್ಯತೆಯಿದೆ.

ಲೋಕಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಹೇಗೋ ಕಷ್ಟಪಟ್ಟು ನೂರರ ಹತ್ತಿರ ಹೋಗಿತ್ತು. ಅದೇ ದೊಡ್ಡ ಸಾಧನೆ ಎಂಬಂತೆ ಬಿಂಬಿತವಾಗಿತ್ತು. ಜತೆಗೆ ಜೆಡಿಯುನ ನಿತೀಶ್ ಕುಮಾರ್ ಮತ್ತು ಟಿಡಿಪಿಯ ಚಂದ್ರಬಾಬು ನಾಯ್ಡು ನಮಗೆ ಬೆಂಬಲ ನೀಡಿದರೆ ಸರ್ಕಾರವನ್ನೇ ರಚಿಸಿ ಬಿಡುತ್ತೇವೆ ಎಂಬ ಕನಸು ಕಂಡಿದ್ದರು. ಅಷ್ಟೇ ಅಲ್ಲದೆ ಫಲಿತಾಂಶ ಮುಗಿಯುತ್ತಿದ್ದಂತೆಯೇ ನಾವೇ ಸರ್ಕಾರ ರಚಿಸುತ್ತೇವೆ ಎಂಬಂತೆ ಪತ್ರಿಕಾಗೋಷ್ಠಿ ನಡೆಸಿ ಮಾತನ್ನಾಡಿದ್ದರು. ಅವತ್ತು ಇದ್ದ ಉತ್ಸಾಹ ಇವತ್ತು ಎಲ್ಲಿ ಹೋಯಿತು? ಎಂಬುದು ಹಲವರ ಪ್ರಶ್ನೆಯಾಗಿದೆ.





ಸುಮಾರು ಅರುವತ್ತು ವರ್ಷಕ್ಕೂ ಹೆಚ್ಚು ಕಾಲ ದೇಶವನ್ನಾಳಿದ ಕಾಂಗ್ರೆಸ್ ಇವತ್ತು ದೇಶದಲ್ಲಿ ಹೀನಾಯ ಪರಿಸ್ಥಿತಿಗೆ ಬಂದು ನಿಂತಿದೆ. ಇದಕ್ಕೆ ಕಾರಣಗಳು ಹಲವು ಇರಬಹುದಾದರೂ ಮತ್ತೆ ಎದ್ದು ನಿಲ್ಲುವ ಪ್ರಯತ್ನಗಳನ್ನು ಪಕ್ಷದ ನಾಯಕರು ಮಾಡದೆ ಇರುವುದು ವರ್ಷದಿಂದ ವರ್ಷಕ್ಕೆ ಪಕ್ಷವನ್ನು ದುರ್ಬಲ ಮಾಡುತ್ತಾ ಹೋಗುತ್ತಿದೆ. ರಾಷ್ಟ್ರೀಯ ಪಕ್ಷವೊಂದು ಇಂತಹ ಸ್ಥಿತಿಗೆ ತಲುಪಲು ಮುಖ್ಯ ಕಾರಣ ತಳಮಟ್ಟದಲ್ಲಿ ಪಕ್ಷ ಸಂಘಟನೆಯಾಗದಿರುವುದು ಹಾಗೂ ಕಾರ್ಯಕರ್ತರ ಪಡೆಯನ್ನು ಬೆಳೆಸದಿರುವುದು ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಪಕ್ಷದಲ್ಲಿ ಎಲ್ಲರೂ ನಾಯಕರೇ ಆಗಿದ್ದು ಗ್ರಾಮಮಟ್ಟದಲ್ಲಿ ಕೆಲಸ ಮಾಡಿ ಪಕ್ಷವನ್ನು ಗಟ್ಟಿಯಾಗಿಸುವ ಸಾಮರ್ಥ್ಯ ಅವರಲ್ಲಿ ಇಲ್ಲದಾಗಿದೆ.



ಇದರಿಂದಾಗಿ ದೇಶ ಮಾತ್ರವಲ್ಲ ರಾಜ್ಯಮಟ್ಟದಲ್ಲಿಯೂ ಕಾರ್ಯಕರ್ತರ ಪಡೆಯಿಲ್ಲದೆ ಅಧಿಕಾರವನ್ನು ಕಳೆದುಕೊಳ್ಳುವಂತಾಗಿದೆ. ಇದರ ಮರ್ಮವರಿತ ರಾಜ್ಯದ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ರಾಜ್ಯದಲ್ಲಿ ತಳಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವಂತೆ ಮಾಡಿದರು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಂತಹ ಕೆಲಸಗಳು ರಾಷ್ಟ್ರಮಟ್ಟದಲ್ಲಿ ನಡೆಯುದ್ದರಿಂದಲೇ ಕಾಂಗ್ರೆಸ್ ಮಂಡಿಯೂರಬೇಕಾಗಿ ಬಂದಿದೆ. ಇನ್ನು ಕಾಂಗ್ರೆಸ್ ನೇತೃತ್ವದಲ್ಲಿ ಹುಟ್ಟಿಕೊಂಡ ಐಎನ್‌ಡಿಐಎ ಒಂಥರಾ ಮಳೆಗಾಲದಲ್ಲಿ ಹುಟ್ಟಿಕೊಳ್ಳುವ ನಾಯಿಕೊಡೆಯಂತಾಗಿದೆ.





ಚುನಾವಣೆ ಬಂದಾಗ ಕೇಂದ್ರದ ವಿರುದ್ಧ ಹೋರಾಟ, ಪಾದಯಾತ್ರೆ, ಪ್ರತಿಭಟನೆ ಮಾಡಿ ಉಳಿದಂತೆ ಮೌನಕ್ಕೆ ಜಾರಿ ಬಿಡುತ್ತದೆ.

ಇಂತಹ ಗುಣಗಳಿಂದ ರಾಜಕೀಯದಲ್ಲಿ ಗಟ್ಟಿಯಾಗಿ ನೆಲೆಯೂರುವುದು ಅಸಾಧ್ಯವೇ.. ಇವತ್ತು ಕಾಂಗ್ರೆಸ್ ಪಕ್ಷಕ್ಕಿಂತಲೂ ಪ್ರಾದೇಶಿಕ ಪಕ್ಷಗಳು ಗಟ್ಟಿಯಾಗಿವೆ. ಅವು ತಾವು ಆಡಳಿತ ನಡೆಸುವ ರಾಜ್ಯಗಳಲ್ಲಿ ಪ್ರಾಬಲ್ಯ ಸಾಧಿಸಿವೆ. ಜತೆಗೆ ಕಾಂಗ್ರೆಸ್‌ನ್ನು ವಿರೋಧಿಸಿಕೊಂಡು ಬಂದು ಲೋಕಸಭಾ ಚುನಾವಣೆ ಕಾರಣಕ್ಕಾಗಿ ಮೈತ್ರಿ ಮಾಡಿಕೊಂಡಿವೆ. ಮುಂದೆ ವಿಧಾನಸಭಾ ಚುನಾವಣೆ ನಡೆದಾಗ ಅವು ಕಾಂಗ್ರೆಸ್ ಜತೆಗೆ ನಿಲ್ಲಲು ತಯಾರಿಲ್ಲದ ಪರಿಸ್ಥಿತಿಯಲ್ಲಿವೆ. ಇದಕ್ಕೆ ಉದಾಹರಣೆ ಇತ್ತೀಚೆಗೆ ನಡೆದ ದೆಹಲಿ ಚುನಾವಣೆ ಅಲ್ಲಿ ಏನೆಲ್ಲ ಬೆಳವಣಿಗೆ ಆಯಿತು. ಅದರಿಂದ ಯಾರಿಗೆ ಲಾಭವಾಯಿತು ಎನ್ನುವುದು ನಮ್ಮ ಕಣ್ಣಮುಂದೆಯೇ ಇದೆ.

ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ವಿಧಾನಸಭಾ ಚುನಾವಣೆಗಳಲ್ಲಿ ಶೂನ್ಯ ಸಾಧನೆ ಮಾಡಿದೆ. ಹೀಗಾಗಿ ಅದರ ಜತೆ ಮೈತ್ರಿ ಮುಂದುವರೆಸಿದರೆ ತಮಗೆ ಉಳಿಗಾಲವಿಲ್ಲ ಎಂಬುದು ಜತೆಗಿದ್ದ ಬಹುತೇಕ ಮೈತ್ರಿ ಪಕ್ಷಗಳಿಗೆ ಗೊತ್ತಾಗಿದೆ. ಹೀಗಾಗಿಯೇ ಅವು ಅಂತರ ಕಾಪಾಡಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಇದು ಇಂಡಿ ಒಕ್ಕೂಟದ ಮೇಲೆ ಪರಿಣಾಮ ಬೀರುತ್ತಿದೆ. ಇದೆಲ್ಲದರ ನಡುವೆ ಇಂಡಿ ಒಕ್ಕೂಟದ ಸಹಕಾರದಿಂದ ಪ್ರಧಾನಿಯಾಗುವ ರಾಹುಲ್ ಗಾಂಧಿ ಅವರ ಬಯಕೆಯೂ ಸದ್ಯದ ಮಟ್ಟಿಗೆ ನನಸಾಗುವಂತೆ ಕಾಣುತ್ತಿಲ್ಲ. ಅವರ ನಾಯಕತ್ವಕ್ಕೆ ಟಿಎಂಸಿಯ ಮಮತಾ ಬ್ಯಾನರ್ಜಿ ಮತ್ತು ಎಎಪಿಯ ಅರವಿಂದ್ ಕೇಜ್ರಿವಾಲ್ ಸುತರಾಂ ಒಪ್ಪುತ್ತಿಲ್ಲ.

ದೆಹಲಿ ಚುನಾವಣೆಯ ಸೋಲಿನ ಬಳಿಕ ಅರವಿಂದ್ ಕೇಜ್ರಿವಾಲ್ ಕಾಂಗ್ರೆಸ್‌ನಿಂದ ದೂರವಾಗಿದ್ದಾರೆ. ಅತ್ತ ಪಶ್ಚಿಮಬಂಗಾಳದ ಸಿಎಂ ಮಮತಾ ಬ್ಯಾನರ್ಜಿ ಕೂಡ ಅಂತರ ಕಾಪಾಡಿಕೊಂಡಿದ್ದಾರೆ. ಎಲ್ಲರನ್ನೂ ಒಟ್ಟಾಗಿಟ್ಟುಕೊಂಡು ನಾವು (ಇಂಡಿಕೂಟ) ಇನ್ನೂ ಕೂಡ ಒಂದಾಗಿದ್ದೇವೆ ಎನ್ನುವ ಸಂದೇಶವನ್ನು ಎನ್‌ಡಿಎಗೆ ರವಾನಿಸುವ ಕಾರ್ಯದಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸೋನಿಯಾಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ವಿಫಲರಾಗಿದ್ದಾರೆ. ಬದಲಿಗೆ ನರೇಂದ್ರಮೋದಿ ಮತ್ತು ಆರ್‌ಎಸ್‌ಎಸ್‌ನ್ನು ಟೀಕೆ ಮಾಡುವುದರಲ್ಲಿಯೇ ದಿನ ಕಳೆಯುತ್ತಿದ್ದಾರೆ. ಸದ್ಯದ ಬೆಳವಣಿಗೆಯನ್ನು ಗಮನಿಸಿದರೆ ಮುಂದಿನ 2029ರ ಲೋಕಸಭಾ ಚುನಾವಣೆ ವೇಳೆಗೆ ಇಂಡಿ ಒಕ್ಕೂಟದ ಕಥೆ ಏನಾಗಬಹುದು ಎಂಬುದು ಪ್ರಶ್ನೆಯಾಗಿ ಉಳಿಯಲಿದೆ.

ಇಂಡಿ ಒಕ್ಕೂಟದ ಸದಸ್ಯ ಪಕ್ಷಗಳ ನಾಯಕರನ್ನು ಒಂದೆಡೆ ಸೇರಿಸಿ ಸಭೆ ನಡೆಸಿ ಭಿನ್ನಾಭಿಪ್ರಾಯಗಳಿಗೆ ಮುಲಾಮು ಹಚ್ಚಿ ಆಂತರಿಕ ಕಚ್ಚಾಟವನ್ನು ಸರಿಪಡಿಸಿಕೊಂಡು ಒಕ್ಕೂಟದ ನೇತೃತ್ವವನ್ನು ವಹಿಸಿಕೊಳ್ಳುವ ಸಾಮರ್ಥ್ಯ ಹೊಂದಿದವರಿಗೆ ಜವಬ್ದಾರಿ ನೀಡಿ ಮುಂದಿನ ಲೋಕಸಭಾ ಚುನಾವಣೆಗೆ ಬೇಕಾದ ತಯಾರಿಗಳನ್ನು ಈಗಿನಿಂದಲೇ ಮಾಡಲು ಆರಂಭಿಸಿದರೆ ಎನ್‌ಡಿಎ ಎದುರು ಪ್ರಬಲ ವಿರೋಧಿ ಪಡೆಯನ್ನು ಕಟ್ಟಲು ಸಾಧ್ಯವಾಗಬಹುದೇನೋ? ಆದರೆ ಅದ್ಯಾವುದೂ ಆಗುವ ಲಕ್ಷಣಗಳು ಸದ್ಯದ ಪರಿಸ್ಥಿತಿಯಲ್ಲಿ ಕಾಣಿಸುತ್ತಿಲ್ಲ. ಹೀಗಾಗಿ ಟೀಕೆ, ಆರೋಪ ಮಾಡುವುದಕ್ಕಷ್ಟೆ ಸೀಮಿತರಾಗುತ್ತಿದ್ದಾರೆ. ಇದೆಲ್ಲದರ ಪರಿಣಾಮ ಬಿಜೆಪಿ ತ್ರಿವಿಕ್ರಮನಾಗಿ ಬೆಳೆಯುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ☯

## ಮೋದಿ ಕುಗ್ಗಲಿಲ್ಲ ರಾಹುಲ್ ಹಿಗ್ಗಲಿಲ್ಲ

ಲೋಕಸಭಾ ಚುನಾವಣೆ ಬಳಿಕ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸು ಕುಗ್ಗುತ್ತಿದೆ ನಾವು ಮುಂದಿನ ವಿಧಾನಸಭಾ ಚುನಾವಣೆಗಳೆಲ್ಲವನ್ನು ಸುಲಭವಾಗಿ ಗೆಲ್ಲಬಹುದು ಎಂಬ ಆಲೋಚನೆಗಳು ಇಂಡಿಕೂಟದ್ದಾಗಿತ್ತು. ಆದರೆ ಲೋಕಸಭಾ ಚುನಾವಣೆ ಬಳಿಕ ನಡೆದ ವಿಧಾನಸಭಾ ಚುನಾವಣೆಗಳು ಪ್ರಧಾನಿ ಮೋದಿ ವರ್ಚಸ್ಸನ್ನು ಕುಗ್ಗಿಸಿದಂತೆ ಕಾಣುತ್ತಿಲ್ಲ. ಹಾಗೆಯೇ ರಾಹುಲ್ ಗಾಂಧಿಯವರ ವರ್ಚಸ್ಸನ್ನು ಹಿಗ್ಗಿಸಲಿಲ್ಲ ಎಂಬುದು ಅಷ್ಟೇ ಸತ್ಯ.

ಲೋಕಸಭಾ ಚುನಾವಣೆ ನಂತರ ರಾಹುಲ್ ಗಾಂಧಿಯವರಿಗೆ ಯಾವುದೇ ರಾಜ್ಯವನ್ನು ಗೆಲ್ಲಿಸಿಕೊಂಡು ಬರಲು ಸಾಧ್ಯವಾಗಲೇ ಇಲ್ಲ. ಅದಕ್ಕಿಂತ ಹೆಚ್ಚಾಗಿ ತಮ್ಮ ಮಿತ್ರಕೂಟದ ಸದಸ್ಯ ಪಕ್ಷ ಎಎಪಿಯನ್ನು ಜತೆಗಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಅಷ್ಟೇ ಸತ್ಯ. ಸದ್ಯ ಇಂಡಿ ಕೂಟದ ನಾಯಕರು ಪಕ್ಷ ಸಂಘಟನೆ ಮಾಡುವುದನ್ನು ಬಿಟ್ಟು ಕೇವಲ ಟೀಕೆಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ಕೇವಲ ಆರೋಪಗಳನ್ನು ಮಾಡುವುದರಿಂದ ಸಂಘಟನೆ ಮಾಡಲು ಸಾಧ್ಯನಾ? ಹಿಂದುತ್ವ, ಆರ್‌ಎಸ್‌ಎಸ್, ಬಿಜೆಪಿಯನ್ನು ಟೀಕಿಸುವುದನ್ನು ಬಿಟ್ಟು ಪಕ್ಷ ಸಂಘಟನೆಯತ್ತ ಗಮನಹರಿಸದೆ ಹೋದರೆ ಉದ್ಧಾರವಾಗುವ ಯಾವ ಲಕ್ಷಣಗಳು ಕಾಣಿಸುತ್ತಿಲ್ಲ. ☯



# ಹಾವೇರಿ: ನರ್ಸ್ ಸ್ವಾತಿಯ ಕೊಲೆ ಮಾಡಿ ತುಂಗಭದ್ರಾ ನದಿಗೆ ಬಿಸಾಡಿದ ಹಂತಕರು!


**ಹಾವೇರಿ ಜಿಲ್ಲೆಯಲ್ಲಿ ಒಂದು ಭೀಕರ ಘಟನೆಯೊಂದು ನಡೆದಿದೆ. ಮುಸ್ಲಿಂ ಯುವಕ ಹಿಂದೂ ಯುವತಿಯೊಬ್ಬಳನ್ನು ಭೀಕರವಾಗಿ ಹತ್ಯೆಗೈದಿದ್ದಾನೆ. ಹೌದು... ಬದುಕಿ ಬಾಳಬೇಕಿದ್ದ ಯುವತಿ ತುಂಗಭದ್ರಾ ನದಿಯಲ್ಲಿ ಶವವಾಗಿ ಪತ್ತೆಯಾಗಿದ್ದಾಳೆ. ಮೊದಲಿಗೆ ಯುಡಿಆರ್ ದಾಖಲಿಸಿ ತನಿಖೆ ಆರಂಭಿಸಿದ ಪೊಲಿಸರು ಹಂತಕರ ಸುಳಿವು ಸಿಕ್ಕಿದ್ದು, ಹಾವೇರಿ ಜಿಲ್ಲೆಯಲ್ಲಿ ನಡೆದ ಸ್ವಾತಿ ಎಂಬ ಯುವತಿ ಹತ್ಯೆ ಪ್ರಕರಣ ದೊಡ್ಡ ಸಂಚಲನ ಸೃಷ್ಟಿಸಿದೆ. ಅಲ್ಲದೇ ನಯಾಜ್‌ನ ಕ್ರೌರ್ಯ ಬೆಚ್ಚಿಬೀಳಿಸುವಂತಿದೆ.**



ಆರೋಪಿ ನಯಾಜ್

ಹುಬ್ಬಳ್ಳಿ ನೇಹಾ ಹಿರೇಮಠ ಹಾಗೂ ಅಂಜಲಿ ಅಂಬಿಗೇರ ರೀತಿಯಲ್ಲೇ ಹಾವೇರಿ ಜಿಲ್ಲೆಯಲ್ಲಿ 22 ವರ್ಷದ ಯುವತಿಯ ಬರ್ಬರ ಹತ್ಯೆಯಾಗಿದೆ. ಕಳೆದ ಮಾರ್ಚ್ 6ರಂದು ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕು ಪತ್ತೆಪುರ ಬಳಿ ಅಪರಿಚಿತ ಯುವತಿ ಶವ ಪತ್ತೆಯಾಗಿತ್ತು. ಮೊದಲಿಗೆ ಯುಡಿಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಹಲಗೇರಿ ಠಾಣೆ ಪೊಲಿಸರು ಯುವತಿ ಶವದ ಮರಣೋತ್ತರ ಪರೀಕ್ಷೆ ಮಾಡಿ ಅಂತ್ಯಸಂಸ್ಕಾರ ಕೂಡಾ ಮಾಡಿಸಿದ್ದರು. ಆದರೆ ಮರಣೋತ್ತರ ಪರೀಕ್ಷೆಯಲ್ಲಿ ಯುವತಿಯನ್ನು ಯಾರೋ ಕೊಲೆ ಮಾಡಿ ತುಂಗಭದ್ರಾ ನದಿಯಲ್ಲಿ ಬಿಸಾಡಿ ಹೋಗಿರುವುದು ಗೊತ್ತಾಗಿದೆ. ಕೂಡಲೇ ತನಿಖೆ ಆರಂಭಿಸಿದ ಪೊಲೀಸರಿಗೆ ಅದು ರಟ್ಟಿಹಳ್ಳಿ ತಾಲೂಕಿನ ಮಾಸೂರು ಗ್ರಾಮದ ಸ್ವಾತಿ ಎಂಬ ಯುವತಿ ಶವ ಎನ್ನುವುದು ಗೊತ್ತಾಗಿದ್ದು, ತನಿಖೆ ತೀವ್ರಗೊಳಿಸಿದಾಗ ಸ್ವಾತಿ ಹಂತಕ ನಯಾಜ್ ಎನ್ನುವುದು ದೃಢಪಟ್ಟಿದ್ದು, ಇದೀಗ ನಯಾಜ್ ಸೇರಿದಂತೆ ಮೂವರು ಆರೋಪಿಗಳ ಹೆಡೆಮುರಿಕಟ್ಟಿದ್ದಾರೆ. ಆದರೆ, ನಯಾಜ್‌ನ ಕ್ರೌರ್ಯ ಬೆಚ್ಚಿಬೀಳಿಸಿದೆ.

ಸ್ವಾತಿ ಎಂಬ ಯುವತಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಯಾಜ್ ಹಾಗೂ ವಿನಯ್, ದುರ್ಗಾಚಾರಿ ಎಂಬ ಯುವಕರೇ ಸ್ವಾತಿ ಹತ್ಯೆ ಗೈದವರು ಎಂದು ತನಿಖೆ ವೇಳೆ ಗೊತ್ತಾಗಿದೆ. ಆರೋಪಿ ನಯಾಜ್ ಹಿರೇಕೇರೂರು ತಾಲೂಕು ಹಳೆ ವಿರಾಪುರ ಗ್ರಾಮದವನು. ಕೊಲೆಯಾದ ಸ್ವಾತಿ ಹಾಗೂ ಕೊಲೆ ಮಾಡಿದ ಮೂವರು ಆರೋಪಿಗಳು ಹೋರಿ ಬೆದರಿಸುವ ಸ್ಪರ್ಧೆ ಅಭಿಮಾನಿಗಳು. ಹೋರಿ ಬೆದರಿಸೋ ಸ್ಪರ್ಧೆ ಇದ್ದರೆ ಅಲ್ಲಿ ಹಾಜರಾಗ್ತಿದ್ದ ಸ್ವಾತಿಗೆ ಹೋರಿ ಬೆದರಿಸೋ ಸ್ಪರ್ಧೆ ಕ್ರೇಜ್ ಇತ್ತು. ಈ ವೇಳೆ ನಯಾಜ್, ವಿನಯ್, ದುರ್ಗಾಚಾರಿ ನಡುವೆ ಸ್ನೇಹ ಬೆಳೆದಿದೆ. ಬಳಿಕ ಆರೋಪಿ ನಯಾಜ್ ಹಾಗೂ ಸ್ವಾತಿ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ. ನಯಾಜ್ ಸ್ವಾತಿಯನ್ನು ಬಿಟ್ಟು ತಮ್ಮ ಧರ್ಮದ ಯುವತಿ ಜೊತೆ ಮದುವೆಯಾಗಲು ಬಯಸಿದ್ದ. ಇದರಿಂದ ರೊಚ್ಚಿಗೆದ್ದಿದ್ದ ಸ್ವಾತಿ ನನಗೆ ಮೋಸ ಮಾಡಬೇಡ ಎಂದು ಜಗಳ ಮಾಡಿದ್ದಾಳೆ.



ಎಸ್ಪಿ ಅಂಶುಕುಮಾರ್

### ಕೊಲೆಗೆ ಸ್ಕೆಚ್ ಹೇಗಿತ್ತು ಗೊತ್ತಾ?

ಬಳಿಕ ನಯಾಜ್ ಹಾಗೂ ಸ್ವಾತಿ ನಡುವೆ ಭಿನ್ನಾಭಿಪ್ರಾಯ ಮನಸ್ತಾಪ ಉಂಟಾಗಿದ್ದು, ನಂತರ ನಯಾಜ್, ವಿನಯ್ ಹಾಗೂ ದುರ್ಗಾಚಾರಿಗೂ ಈ ವಿಚಾರ ತಿಳಿಸಿದ್ದಾನೆ. ಸ್ವಾತಿ ಕಾಟ ಹೆಚ್ಚಾಗಿದೆ. ಅವಳ ಕಥೆ ಮುಗಿಸಬೇಕು ಎಂದು ಮೂವರೂ ಮಾತಾಡಿಕೊಂಡು ಆಕೆಯ ಕೊಲೆಗೆ ಸ್ಕೆಚ್ ಹಾಕಿದ್ದಾರೆ. ಸ್ಕೆಚ್‌ನಂತೆ ಆರೋಪಿಗಳು ಬಾಡಿಗೆ ಕಾರು ಮಾಡಿಕೊಂಡು ಬಂದು ಸ್ವಾತಿಯನ್ನು ರಾಣೆಬೆನ್ನೂರು ಹೊರವಲಯದ ಸುವರ್ಣ ಪಾರ್ಕ್‌ಗೆ ಕರೆದುಕೊಂಡು ಹೋಗಿದ್ದಾರೆ. ಬಳಿಕ ಕಾರಿನಲ್ಲೇ ಟವೆಲ್‌ನಿಂದ ಕುತ್ತಿಗೆಗೆ ಉರುಲು ಬಿಗಿದು ಉಸಿರುಗಟ್ಟಿಸಿ ಸ್ವಾತಿಯನ್ನು ಕೊಂದಿದ್ದಾರೆ. ನಂತರ ಕಾರಿನ ಡಿಕ್ಕಿಯಲ್ಲಿ ಶವವನ್ನು ಸಾಗಿಸಿ ತುಂಗಭದ್ರಾ ನದಿಗೆ ಬಿಸಾಡಿ ಪರಾರಿಯಾಗಿದ್ದಾರೆ. ಬಳಿಕ ರಾಣೆಬೆನ್ನೂರು ತಾಲೂಕು ಪತ್ತೆಪುರ ಬಳಿ ಸ್ವಾತಿ ಪತ್ತೆಯಾಗಿತ್ತು. ಮೊದಲು ಅಪರಿಚಿತ ಯುವತಿ ಶವ ಎಂದು ಘೋಷಿಸಿದ್ದ ಹಲಗೇರಿ ಪೊಲೀಸರು, ವಾರಸುದಾರರರು ಯಾರೂ ಇಲ್ಲದ ಹಿನ್ನಲೆಯಲ್ಲಿ, ಮರಣೋತ್ತರ ಪರೀಕ್ಷೆ ನಡೆಸಿ ಕಾನೂನು ಪ್ರಕಾರ ಸ್ವಾತಿ ಅಂತ್ಯಕ್ರಿಯೆ ಮಾಡಿ ಮುಗಿಸಿದ್ದರು. ಆದರೆ, ಮರಣೋತ್ತರ ಪರೀಕ್ಷೆ ವರದಿಯಲ್ಲಿ ಸ್ವಾತಿ ಹತ್ಯೆಯಾಗಿರುವುದು ದೃಢವಾಗಿದೆ. ಇದರ ಬೆನ್ನಲ್ಲಿಯೇ ಹಲಗೇರಿ ಪೊಲೀಸರು ತನಿಖೆ ತೀವ್ರಗೊಳಿಸಿದಾಗ ಹಂತಕರ ಸುಳಿವು ಸಿಕ್ಕಿದೆ.

### ಮಿಸ್ಸಿಂಗ್ ಕೇಸ್ ದಾಖಲಿಸಿದ್ದ ಪೋಷಕರು

ಕಳೆದ ಮಾರ್ಚ್ 3ರಂದು ಸ್ವಾತಿ ಕಾಣೆಯಾಗಿದ್ದಳು. ಈ ಕುರಿತು ಸ್ವಾತಿ ಪೋಷಕರು ಹಿರೇಕೇರೂರು ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕಂಪ್ಲೇಂಟ್ ದಾಖಲಾಗಿತ್ತು. ಬಳಿಕ ಮಾರ್ಚ್ 6ರಂದು ರಾಣೆಬೆನ್ನೂರು ತಾಲೂಕು ಪತ್ತೆಪುರ ಬಳಿ ಸ್ವಾತಿ ಶವ ಪತ್ತೆಯಾಗಿತ್ತು. ರಾಣೆಬೆನ್ನೂರೀನ ಆಸ್ಪತ್ರೆಯೊಂದರಲ್ಲಿ ಸ್ವಾತಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಳು. ಸ್ವಾತಿ ತಂದೆ ತೀರಿಕೊಂಡಿದ್ದು, ತಾಯಿ ಜೊತೆ ವಾಸವಿದ್ದಳು ಎನ್ನಲಾಗಿದೆ. ಸ್ವಾತಿ ಕೊಲೆಯಾಗಿದ್ದಾಗಿ ಪೊಲೀಸರು ಪೋಷಕರಿಗೆ ಮಾಹಿತಿ ನೀಡಿದ್ದು, ಶವದ ಚಿತ್ರವನ್ನು ಪೋಷಕರಿಗೆ ತೋರಿಸಿದ್ದಾರೆ. ಫೋಟೋದಲ್ಲಿಯೇ ಈಕೆ ತನ್ನ ಮಗಳು ಎಂದು ತಾಯಿ ತಿಳಿಸಿದ್ದಾರೆ.

### ಸಿಡಿದೆದ್ದ ಹಿಂದೂಪರ ಸಂಘಟನೆಗಳು

ಈ ನಡುವೆ ಹಿಂದೂ ಯುವತಿ ಹತ್ಯೆ ಜಸ್ಟೀಸ್ ಫಾರ್ ಸ್ವಾತಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಲಾಗಿದೆ. ಹಿಂದೂ ಸಂಘಟನೆಗಳ ಕಾರ್ಯಕರ್ತರಿಂದ ಸ್ವಾತಿ ಹಂತಕರನ್ನು ಪತ್ತೆಹಚ್ಚಿ ಆರೋಪಿಗಳಿಗೆ ಶಿಕ್ಷೆ ಕೊಡಿಸಬೇಕೆಂದು ಆಗ್ರಹ ವ್ಯಕ್ತವಾಗುತ್ತಿದೆ. ಸ್ವಾತಿ ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಸ್ವಾತಿ ಹತ್ಯೆಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿ ರಟ್ಟಿಹಳ್ಳಿ ತಾಲೂಕು ಮಾಸೂರು ಗ್ರಾಮದ ಸ್ವಾತಿ ನಿವಾಸ ಮುಂದೆ ಸ್ಥಳಿಯರು ಪ್ರತಿಭಟನೆ ನಡೆಸಿದ್ದಾರೆ.

### ಕೊಲೆಯಾಗಿರುವುದು ಸತ್ಯ ಎಂದ ಎಸ್ಪಿ

ಪ್ರಕರಣದ ಬಗ್ಗೆ ಮಾಹಿತಿ ನೀಡಿರುವ ಹಾವೇರಿ ಎಸ್ಪಿ ಅಂಶುಕುಮಾರ್, ಮಾರ್ಚ್ 6ರಂದು ನಮಗೆ ಅಪರಿಚಿತ ಶವ ಸಿಕ್ಕಿತ್ತು. ಮಾರ್ಚ್ 11ರಂದು ಅದು ಸ್ವಾತಿ ರಮೇಶ್ ಬ್ಯಾಡಗಿ ಎಂಬುವವರ ಮೃತದೇಹ ಆಗಿತ್ತು. ತನಿಖೆ ನಡೆಸಿದಾಗ ಮೂವರು ಆರೋಪಿಗಳ ಸುಳಿವು ತಿಳಿಯಿತು. ನಯಾಜ್, ವಿನಯ್, ದುರ್ಗಾಚಾರಿ ಎಂಬ ಆರೋಪಿಗಳು ಇದರಲ್ಲಿದ್ದಾರೆ. ಸ್ವಾತಿಗೆ ಮೂವರ ಪರಿಚಯ ಇತ್ತು. ಕೊಲೆಗೂ ಮುನ್ನ ರಾಣೆಬೆನ್ನೂರು ಬಳಿ ಸ್ವಾತಿ ಹತ್ತಿರ ಮಾತನ್ನಾಡಿದ್ದಾರೆ. ಕೆಲ ವಿಚಾರದಲ್ಲಿ ಇವರ ಮಧ್ಯೆ ಭಿನ್ನಾಭಿಪ್ರಾಯವಿತ್ತು. ಬಳಿಕ ಸ್ವಾತಿಯನ್ನು ಕೊಲೆ ಮಾಡಿ ಗಾಡಿಯಲ್ಲಿ ಶವಸಾಗಿಸಿ ತುಂಗಭದ್ರಾ ನದಿಯಲ್ಲಿ ಬಿಸಾಡಿದ್ದಾರೆ. ನಯಾಜ್‌ನನ್ನು ಅರೆಸ್ಟ್ ಮಾಡಿದ್ದೀವಿ. ಇನ್ನಿಬ್ಬರು ತಲೆ ಮರೆಸಿಕೊಂಡಿದ್ದಾರೆ. ಪತ್ತೆ ಮಾಡಿ ಬಂಧಿಸುತ್ತೇವೆ ಎಂದು ಮಾಹಿತಿ ನೀಡಿದರು.



ಆರೋಪಿಗಳಾದ ವಿನಯ್ ಹಾಗೂ ದುರ್ಗಾಚಾರಿ

ಹಾವೇರಿಯಲ್ಲಿ ನಡೆದ ಸ್ವಾತಿ ಕೊಲೆ ಪ್ರಕರಣ ಸದ್ಯ ಕರ್ನಾಟಕದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಓರ್ವ ಮುಸ್ಲಿಂ ಸೇರಿದಂತೆ ತಲೆಮರೆಸಿಕೊಂಡಿದ್ದ ಇಬ್ಬರು ಹಿಂದೂ ಯುವಕರನ್ನು ಪೊಲೀಸರು ಬಂಧಿಸಿದ್ದಾರೆ. ಸದ್ಯ ಸ್ವಾತಿ ಹತ್ಯೆಗೆ ಲವ್ ಜಿಹಾದ್ ಕಾರಣ ಎಂದು ಹಿಂದೂ ಪರ ಸಂಘಟನೆಗಳು ಆರೋಪಿಸುತ್ತಿದ್ದಾರೆ. ಪೊಲೀಸರ ತನಿಖೆ ಚುರುಕಾಗಿದ್ದು, ಸದ್ಯ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

ಮಾಸೂರಿನ ಯುವತಿ ಸ್ವಾತಿ ಲವ್ ಜಿಹಾದ್‌ಗೆ ಬಲಿಯಾದಳಾ? ಹೀಗಂತ ಹಿಂದೂ ಪರ ಸಂಘಟನೆಗಳು ಸೇರಿದಂತೆ ಬಿಜೆಪಿ ನಾಯಕರು ಆರೋಪಿಸಿದ್ದಾರೆ. ಸದ್ಯ ಸ್ವಾತಿ ಹತ್ಯೆ ದೊಡ್ಡ ಸಂಚಲನ ಸೃಷ್ಟಿಸುತ್ತಲೇ ಪೊಲೀಸರ ತನಿಖೆ ಮತ್ತಷ್ಟು ತೀವ್ರಗೊಂಡಿದೆ. ನಯಾಜ್ ಜೊತೆಗೆ ಕೊಲೆ ಮಾಡಿ ಬಳಿಕ ತಲೆಮರೆಸಿಕೊಂಡಿದ್ದ ಮತ್ತಿಬ್ಬರು ಹಿಂದೂ ಯುವಕರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಜಿಲ್ಲೆಯಲ್ಲಿ ನಡೆದಿರುವ ನರ್ಸ್ ಸ್ವಾತಿ ಹತ್ಯೆ ದೊಡ್ಡ ಸಂಚಲನವನ್ನೇ ಸೃಷ್ಟಿಸಿದೆ. ಮೊದ ಮೊದಲು ಅಪರಿಚಿತ ಶವ ಸಿಕ್ಕಿರುವುದಾಗಿ ತನಿಖೆ ಆರಂಭಿಸಿದ್ದ ಪೊಲೀಸರಿಗೆ ಅದು ಸ್ವಾಭಾವಿಕ ಸಾವಲ್ಲ, ಕೊಲೆ ಅಂತ ಗೊತ್ತಾಗುತ್ತೆ. ಯುಡಿಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದ ಹಲಗೇರಿ ಪೊಲೀಸ್ ಠಾಣೆ ಪೊಲೀಸರು ಒಬ್ಬ ಆರೋಪಿಯನ್ನು ಪತ್ತೆ ಮಾಡಿದ್ದರು. ನಯಾಜ್ ಎಂಬ ಮುಸ್ಲಿಂ ಯುವಕನೇ ಸ್ವಾತಿ ಹತ್ಯೆಯ ಪ್ರಮುಖ ಆರೋಪಿ.

ಸ್ವಾತಿ ಜೊತೆ ಲವ್‌ನಲ್ಲಿದ್ದ ಎನ್ನಲಾದ ನಯಾಜ್ ತನ್ನ ಮತ್ತಿಬ್ಬರು ಸ್ನೇಹಿತರ ಜೊತೆ ಸೇರಿ ಸ್ವಾತಿ ಕೊಲೆ ಮಾಡಿದ್ದಾನೆ. ಸದ್ಯ ನಯಾಜ್‌ನನ್ನು ಬಂಧಿಸಿ ತನಿಖೆ ಆರಂಭಿಸಿರುವ ಪೊಲೀಸರು, ಆತನ ಮತ್ತಿಬ್ಬರು ಸ್ನೇಹಿತರಾದ ವಿನಯ್ ಹಾಗೂ ದುರ್ಗಾಚಾರಿ ಪತ್ತೆ ಹಚ್ಚಿ ಬಂಧನ ಮಾಡುವ ಯಶಸ್ವಿಯಾಗಿದ್ದಾರೆ. ಚಿತ್ರದುರ್ಗದ ಬಳಿ ಪೊಲೀಸರು ವಿನಯ್ ಮತ್ತು ದುರ್ಗಾಚಾರಿ ವಶಕ್ಕೆ ಪಡೆದುಕೊಂಡಿದ್ದಾರೆ. ಸದ್ಯ ಪ್ರಕರಣ ಹೊಸ ಆಯಾಮ ಪಡೆದುಕೊಂಡಿದೆ.

### ಸ್ವಾತಿ ತಾಯಿ ಭೇಟಿಯಾಗಿ ಸಾಂತ್ವನ ಹೇಳಿದ ಬಿ.ಸಿ. ಪಾಟೀಲ್

ಇತ್ತ ಮಾಜಿ ಸಚಿವ ಬಿ.ಸಿ. ಪಾಟೀಲ್ ಕೂಡ ಸ್ವಾತಿ ತಾಯಿ ಭೇಟಿಯಾಗಿ ಸಾಂತ್ವನ ಹೇಳಿದ್ದಾರೆ. ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕಿನ ಮಾಸೂರು ಗ್ರಾಮದ ಸ್ವಾತಿ ನಿವಾಸಕ್ಕೆ ಭೇಟಿ ನೀಡಿ ಪ್ರಕರಣದ ಮಾಹಿತಿ ಪಡೆದಿದ್ದಾರೆ. ಪ್ರಕರಣದಲ್ಲಿ ಯಾರೇ ಭಾಗಿಯಾದರೂ ಬಂಧನ ಮಾಡಿ ಶಿಕ್ಷೆ ಕೊಡಿಸುವಂತೆ ಒತ್ತಾಯ ಮಾಡಿದ್ದಾರೆ. ☯

## ನಾಲ್ಕು ದಿನದಲ್ಲಿ ಪ್ರೀತಿಸಿದ್ದ ತರುಣಿಯೊಡನೆ ಮದುವೆಯಾಗಲಿದ್ದ

# ಕುಡುಕ ಮಂಜುನಾಥನನ್ನು ಆತನ ತಂದೆ ಹಾಗೂ ಅಣ್ಣ ಸೇರಿಕೊಂಡು ತಲೆಗೆ ಕಲ್ಲಿನಿಂದ ಜಜ್ಜಿ ಕ್ರೂರವಾಗಿ ಕೊಲೆ ಮಾಡಿಬಿಟ್ಟರು!


ಸ್ವಂತ ಮಗನನ್ನು ಕೊಲೆಗೈದ ತಂದೆ ನಾಗಪ್ಪ ಉಳ್ಳಾಗಡ್ಡಿ

**ಆತ 25 ವರ್ಷದ ಕಟ್ಟುಮಸ್ತಾದ ಯುವಕ. ಕಳೆದ ಒಂದು ವರ್ಷದ ಹಿಂದಷ್ಟೇ ಮರಾಠಾ ಕೋಮಿಗೆ ಸೇರಿದ್ದ ಸುಂದರ ಯುವತಿಯನ್ನು ಇನ್ನಿಲ್ಲದಂತೆ ಪ್ರೀತಿಸಿದ್ದನು. ಅವಳನ್ನೇ ಮದುವೆ ಮಾಡಿಕೊಳ್ಳಲು ಪಟ್ಟು ಹಿಡಿದ ಪರಿಣಾಮ ಆತನ ತಂದೆ, ತಾಯಿ, ಸೈನ್ಯದಲ್ಲಿದ್ದ ಅಣ್ಣ ಒಲ್ಲದ ಮನಸ್ಸಿನಿಂದ ನಿಶ್ಚಿತಾರ್ಥ ಮಾಡಿದ್ದರು. ಮನೆಯವರ ಕಿರಿಕಿರಿ ತಾಳಲಾರದೇ ಆತ ಕುಡಿತದ ಚಟಕ್ಕೆ ಬಿದ್ದು ಸದಾ ಜಗಳಕ್ಕಿಳಿಯುತ್ತಿದ್ದನು. ಇನ್ನೇನು ನಾಲ್ಕು ದಿನವಷ್ಟೆ ತನ್ನ ಮದುವೆಗೆ ಬಾಕಿಯಿತ್ತು. ಮದುವೆಯ ಹಣಕಾಸಿನ ವಿಚಾರ, ಮತ್ತಿತರ ಕಾರಣಗಳಿಗೆ ಅಂದು ಕುಡಿದು ಬಂದು ತಾಯಿ, ತಂದೆ, ಅಣ್ಣ, ಅಕ್ಕನ ಜತೆಗೆ ಜಗಳ ಕಾಯ್ದಿದ್ದನು. ಈತನ ಉಪಟಳ ತಾಳದ ಆತನ ತಂದೆ, ಸೈನ್ಯದಲ್ಲಿದ್ದ ಅಣ್ಣ ಸೇರಿಕೊಂಡು ಗುಂಡು ಕಲ್ಲುಗಳಿಂದ ತಲೆಗೆ ಜಜ್ಜಿ ಗಂಭೀರವಾಗಿ ಗಾಯಗೊಳಿಸಿ ಕ್ರೂರವಾಗಿ ಕೊಂದು ಹಾಕಿ ಪರಾರಿ ಆದರು. ಪ್ರಕರಣ ದಾಖಲಿಸಿಕೊಂಡು ತನಿಖೆಗಿಳಿದ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್ಐ ಪ್ರವೀಣ ಗಂಗೋಳ ಮತ್ತು ಸಿಬ್ಬಂದಿಗಳು ಡಿವೈಎಸ್ಪಿ ರವಿ ನಾಯಕ ನಿರ್ದೇಶನದಲ್ಲಿ ಹಂತಕರಾದ ತಂದೆ-ಮಗ ಇಬ್ಬರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಈ ಘಟನೆ ಬೆಳಗಾವಿ ಜಿಲ್ಲೆ ಕಿತ್ತೂರ ಪೊಲೀಸ್ ಠಾಣೆ ವ್ಯಾಪ್ತಿಯ ಚಿಕ್ಕನಂದಿಹಳ್ಳಿ ಗ್ರಾಮದಲ್ಲಿ ವರದಿಯಾಗಿದೆ.**


ತಮ್ಮನನ್ನು ನಿರ್ಧಯವಾಗಿ ಕೊಲೆಗೈದ ಸೈನಿಕ ಅಣ್ಣ ಗುರುಬಸಪ್ಪ ಉಳ್ಳಾಗಡ್ಡಿ

**ಬೆಳಗಾವಿ**
✍ ಮನ್ನಾಪೂರ

ಅಂದು ಶನಿವಾರ ದಿನಾಂಕ 08-03-2025ರಂದು ರಾತ್ರಿ ಬೆಳಗಾವಿ ಜಿಲ್ಲೆಯ ಕಿತ್ತೂರ ತಾಲ್ಲೂಕಿನ ಚಿಕ್ಕನಂದಿಹಳ್ಳಿ ಗ್ರಾಮದ ಜನರು ಅಕ್ಷರಶಃ ನಡುಗಿ ಹೋಗಿದ್ದರು. ಕಾರಣ ಎದೆಯುದ್ದ ಬೆಳೆದಿದ್ದ 25 ವರ್ಷದ ಮಂಜುನಾಥ ನಾಗಪ್ಪ ಉಳ್ಳಾಗಡ್ಡಿ ಎಂಬ ತರುಣನನ್ನು ಸ್ವತಃ ಆತನ ತಂದೆ ನಾಗಪ್ಪ ಮತ್ತು ಸೈನ್ಯದಲ್ಲಿದ್ದ ಅಣ್ಣ ಗುರುಬಸಪ್ಪ ಸೇರಿಕೊಂಡು ಕಲ್ಲು, ಇಟ್ಟಿಗೆಗಳಿಂದ ತಲೆ ಮತ್ತು ಮುಖಕ್ಕೆ ಜಜ್ಜಿ ಅತ್ಯಂತ ಕ್ರೂರವಾಗಿ ಹತ್ಯೆ ಮಾಡಿದ್ದರು. ಸ್ವಂತ ಮಗನೆಂದು ಕನಿಕರ ತೋರದೆ ನಿರ್ಧಯವಾಗಿ ಕೊಂದು ಹಾಕಿದ ತಂದೆ ನಾಗಪ್ಪ. ತನ್ನ ತಮ್ಮನಿದ್ದಾನೆ ಎಂಬುದನ್ನು ಯೋಚಿಸದ ಸೈನಿಕ ಅಣ್ಣ ಗುರುಬಸಪ್ಪನ ಕ್ರೂರ ಕೃತ್ಯಕ್ಕೆ ಕಾರಣವನ್ನು ಕೆದಕುತ್ತ ಹೋದಾಗ ತೀರಾ ಕ್ಷುಲ್ಲಕ ಕಾರಣಗಳಿಗೆ ಮತ್ತು ಕುಡಿತದ ಆವಾಂತರ, ಮತ್ತೊಂದು ತಾನು ಪ್ರೀತಿಸಿದ ಹುಡುಗಿಯನ್ನು ಮದುವೆ ಮಾಡಿಕೊಳ್ಳುವ ವಿಚಾರದಲ್ಲಿ ನಡೆದಿದ್ದ ತಂದೆ ಮಗನ ಜಗಳ ಮಂಜುನಾಥನ ಕೊಲೆಯಲ್ಲಿ ಪರ್ಯಾವಸನಗೊಂಡಿದೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ(ಕಾ.ಸು) ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ(ಕ್ರೈಂ) ರಾಮನಗೌಡ ಬಸರಗಿ

ಕೇವಲ ನಾಲ್ಕು ದಿನಗಳಲ್ಲಿ ಅಂದರೆ ದಿನಾಂಕ 12-03-2025ರಂದು ಬುಧವಾರ ದಿನ ತಾನು ಪ್ರೀತಿಸಿದ ಹುಡುಗಿಯೊಡನೆ ಮದುವೆಯಾಗಲಿದ್ದ ಮಂಜುನಾಥ ಮಸಣ ಸೇರಿದ್ದಾನೆ. ಹೆತ್ತ ಮಗನನ್ನೇ ಹತ್ಯೆ ಮಾಡಿದ ಆರೋಪದಲ್ಲಿ ತಂದೆ, ಸೈನಿಕ ಅಣ್ಣ ಜೈಲು ಸೇರಿ ತಂಗಳು ಮುರಿಯುತ್ತಿದ್ದಾರೆ. ಸದರಿ ಕೊಲೆ ಪ್ರಕರಣದ ಕುರಿತು 'ಪೊಲೀಸ್ ನ್ಯೂಸ್' ವಿಸ್ತೃತವಾದ ವರದಿಯೊಂದನ್ನು ಸಿದ್ಧಪಡಿಸಿ ಓದುಗ ಪ್ರಭುಗಳಿಗೆ ನೀಡಿದೆ.

### ಉಳ್ಳಾಗಡ್ಡಿ ಕುಟುಂಬ...

ಕಿತ್ತೂರಿನಿಂದ ಸುಮಾರು ಅಂತರದ ಮೇಲಿರುವ ಚಿಕ್ಕನಂದಿಹಳ್ಳಿ ಗ್ರಾಮ. ಇಲ್ಲಿ ಪ್ರಬಲ ಲಿಂಗಾಯತ ಕೋಮಿಗೆ ಸೇರಿದ್ದ ನಾಗಪ್ಪ ಉಳ್ಳಾಗಡ್ಡಿ ಮತ್ತು ಏಣವ್ವ ದಂಪತಿಗಳು ತಮಗಿದ್ದ ಸ್ವಲ್ಪ ಜಮೀನಿನಲ್ಲಿ ಕೃಷಿ ಮಾಡಿಕೊಂಡು ತುತ್ತಿನ ಚೀಲ ತುಂಬಿಕೊಂಡು ಸಂಸಾರದ ರಥವನ್ನು ಮುನ್ನಡೆಸಿಕೊಂಡು ಬಂದಿದ್ದರು. ಇವರಿಗೆ ಗುರುಬಸಪ್ಪ, ಮಂಜುನಾಥ, ಮಲ್ಲಮ್ಮ ಎಂಬ ಮೂರು ಮಕ್ಕಳು. ನಾಗಪ್ಪ ಉಳ್ಳಾಗಡ್ಡಿ ತನ್ನ ಜಮೀನು ಮಾಡಿಕೊಂಡು ಊರಿನಲ್ಲಿ ಸುಮಾರು ದಿನಗಳವರೆಗೆ ರಾಜು ಗಾಯಕವಾಡ ಎಂಬುವರ ಜಮೀನಿನಲ್ಲಿ ದುಡಿದು ಮಕ್ಕಳೊಂದಿಗೆ ಬದುಕು ನಡೆಸಿದ್ದನು.


ತಂದೆ ಹಾಗೂ ಅಣ್ಣನಿಂದ ಕೊಲೆಯಾದ ಮಂಜುನಾಥ

ಅಕ್ಕ ಮಲ್ಲಮ್ಮ, ಹಿರಿಯ ಮಗ ಗುರುಬಸಪ್ಪ, ಕಿರಿಯವನಾದ ಮಂಜುನಾಥನನ್ನು ತನ್ನ ಶಕ್ತಿ ಮೀರಿ ಶಾಲೆಗೆ ಕಳಿಸಿ ವಿದ್ಯಾವಂತರನ್ನಾಗಿ ಮಾಡಲು ಶ್ರಮಿಸಿದ್ದನು. ಆದರೆ ನಾಗಪ್ಪ ಮತ್ತು ಏಣವ್ವ ದಂಪತಿಗಳು ಜಿಪುಣರಾಗಿದ್ದರು ಎಂಬ ಮಾತಿದೆ. ತಮ್ಮ ಸಹೋದರ ಸಂಬಂಧಿಗಳೊಂದಿಗೆ ಹಾವು-ಮುಂಗುಸಿಯಂತಹ ಸಂಬಂಧ ಹೊಂದಿದ್ದರು. ಮೂವರು ಮಕ್ಕಳು ವಿದ್ಯಾವಂತರಾಗಿದ್ದರು. ಒಟ್ಟಿನ ಮೇಲೆ ಆರಕ್ಕೆ ಏರದೇ ಮೂರಕ್ಕೆ ಇಳಿಯದೇ ತಮ್ಮ ಸಂಸಾರ ನಡೆಸಿಕೊಂಡು ಬಂದ ದಂಪತಿಗಳು ತಮ್ಮಷ್ಟಕ್ಕೆ ತಾವಿರುತ್ತಿದ್ದರು. ಇಂತಹ ಉಳ್ಳಾಗಡ್ಡಿ ಮನೆತನದಲ್ಲಿ ಇಂದು ನಡೆಯಬಾರದ ರೀತಿಯಲ್ಲಿ ಸ್ವಂತ ಮಗನ ಕೊಲೆ ನಡೆದು ಹೋಗಿದೆ. ಅದು ಇದೀಗ ಚಿಕ್ಕನಂದಿಹಳ್ಳಿ ಊರನ್ನೇ ನಡುಗಿಸಿ ಬಿಟ್ಟಿದೆ.

### ಮಗಳ ಮದುವೆ ಮಾಡಿದ್ದನು...

ಚಿಕ್ಕನಂದಿಹಳ್ಳಿ ಗ್ರಾಮದ ನಾಗಪ್ಪ ಉಳ್ಳಾಗಡ್ಡಿ ಹಿರಿಯ ಮಗಳಾದ ಮಲ್ಲಮ್ಮಳ ಮದುವೆಯನ್ನು ಮಾಡಿದ್ದನು. ಆರಂಭದಲ್ಲಿ ಚೆನ್ನಾಗಿದ್ದ ಆಕೆಯ ಸಂಸಾರ ದಿನಕಳೆದಂತೆ ಪಟ... ಪಟನೇ ನಾಲ್ಕು ಮಕ್ಕಳಾದವು. ಅದಾಗಲೇ ಆಕೆಯ ಗಂಡ ಹಾಳಾದ ಕುಡಿತದ ಚಟಕ್ಕೆ ಗಂಟು ಬಿದ್ದನು. ದಿನವಿಡಿ ಹೆಂಡತಿ-ಮಕ್ಕಳನ್ನು ಗೋಳು ಹೊಯ್ದುಕೊಳ್ಳತೊಡಗಿದನು. ಪರಿಣಾಮ ಹೆಂಡತಿ... ಮಕ್ಕಳು ಉಪವಾಸ ನರಳಬೇಕಾಯಿತು. ಇದನ್ನು ಸಹಿಸಿಕೊಳ್ಳಲಾರದ ಮಲ್ಲಮ್ಮ ತನ್ನ ನಾಲ್ಕು ಮಕ್ಕಳೊಂದಿಗೆ ತವರುಮನೆಗೆ ಬಂದು ಬಿಡಾರ ಹೂಡಿದಳು. ಇಬ್ಬರು ತಮ್ಮಂದಿರ ಜತೆಗೆ ತಂದೆ-ತಾಯಿ ನೆರಳಲ್ಲಿ ಬಂದು ಹೇಗೋ ದಿನಗಳನ್ನು ಮುಂದೂಡತೊಡಗಿದ್ದಳು. ಗಂಡನೆಂಬ ಪ್ರಾಣಿ ತನ್ನ ಹೆಂಡತಿ-ಮಕ್ಕಳು ಬದುಕಿದ್ದಾರೋ... ಸತ್ತಿದ್ದಾರೋ ಎಂದು ಹಿಂತಿರುಗಿ ನೋಡುವ ಗೋಜಿಗೆ ಹೋಗಲಿಲ್ಲ. ನಾಗಪ್ಪ ಮತ್ತು ಏಣವ್ವ ದಂಪತಿಗಳು ಇದರಿಂದ ನೊಂದುಕೊಂಡಿದ್ದರೂ ಕೂಡಾ ಅಳಿಯನಿಗೆ ತಿದ್ದಿ-ಬುದ್ಧಿ ಹೇಳುವ ಮಟ್ಟಕ್ಕೆ ಹೋಗದಿರುವುದು ದುರಂತವೇ ಸರಿ.

### ಸೈನ್ಯಕ್ಕೆ ಸೇರಿದ್ದ ಗುರುಬಸಪ್ಪ...

ಮಗಳ ಜೀವನವಂತೂ ನರಕ ಸದೃಶ್ಯವಾಗಿತ್ತು. ತನಗಿರುವ ಗಂಡು ಮಕ್ಕಳಾದರೂ ಚೆನ್ನಾಗಿರಲಿ ಎಂಬ ಮಹದಾಸೆ ನಾಗಪ್ಪನದಾಗಿತ್ತು. ಅದಕ್ಕಾಗಿ ಇಬ್ಬರು ಮಕ್ಕಳನ್ನು ಓದಿಸುತ್ತಿದ್ದನು. ಗುರುಬಸಪ್ಪನಿಗೆ ಚಿಕ್ಕನಂದಿಹಳ್ಳಿಯ ರಾಜು ಗಾಯಕವಾಡ ಎಂಬಾತನ ಮಾರ್ಗದರ್ಶನ ದೊರಕುತ್ತಿತ್ತು. ಚಿಕ್ಕಂದಿನಿಂದಲೂ ಅವರ ಜಮೀನಿನಲ್ಲಿ ಗುರುಬಸಪ್ಪನ ತಂದೆ-ತಾಯಿ ದುಡಿಯುತ್ತಿದ್ದರು. ಇದರಿಂದ ಗುರುಬಸಪ್ಪ ಭಾರತೀಯ ಸೈನ್ಯಕ್ಕೆ ಸೇರಬೇಕೆಂಬ ಇರಾದೆ ಹೊಂದಿದ್ದನು. ಅದಕ್ಕಾಗಿ ಕಠಿಣವಾದ ದೈಹಿಕ ಕಸರತ್ತು ಮಾಡುವುದರೊಂದಿಗೆ ಪರೀಕ್ಷೆಗೆ ಓದತೊಡಗಿದನು. ಪರಿಣಾಮ ಗುರುಬಸಪ್ಪ ನಾಲ್ಕೈದು ವರ್ಷಗಳ ಹಿಂದೆ ಭಾರತೀಯ ಸೈನ್ಯದಲ್ಲಿ ಸೈನಿಕನಾಗಿ ಸೇವೆ ಆರಂಭಿಸಿದನು. ಗುರುಬಸಪ್ಪನ ಸಂಬಳದಿಂದ ಸ್ವಲ್ಪ ನಾಗಪ್ಪ ಉಳ್ಳಾಗಡ್ಡಿಯ ಆರ್ಥಿಕ ಪರಿಸ್ಥಿತಿ ಸುಧಾರಿಸತೊಡಗಿತ್ತು. ಸೈನ್ಯಕ್ಕೆ ಸೇರಿದ್ದ ಕೆಲವೇ ದಿನಗಳಲ್ಲಿ ಗುರುಬಸಪ್ಪ ಮೋಟಾರ್ ಬೈಕ್ ಒಂದನ್ನು ಖರೀದಿಸಿದ್ದನು. ಅದನ್ನು ತಮ್ಮ ಮಂಜುನಾಥನೇ ಓಡಾಡಿಸಿಕೊಂಡಿದ್ದನು.

### ಉಂಡಾಡಿ ಗುಂಡನಾಗಿದ್ದ ಮಂಜುನಾಥ...

ಕಿರಿಯ ಮಗ ಮಹಾ ಐನಾತಿ ಉಂಡಾಡಿ ಗುಂಡನಾಗಿದ್ದನು. ಮೀಸೆ-ದಾಡಿ ಬಿಟ್ಟು ರೌಡಿಯಂತೆ ವರ್ತಿಸುವ ಈತ 'ಕೆಲಸಕ್ಕೆ ಕರೆಯಬೇಡಿ ಊಟಕ್ಕೆ ಮಾತ್ರ ಮರೆಯ

☞ 5


ಡಿವೈಎಸ್ಪಿ ರವಿ ನಾಯಕ


ಸಿಪಿಐ ಶಿವಾನಂದ ಗುಡಗನಟ್ಟಿ


ಪಿಎಸ್ಐ ಪ್ರವೀಣ ಗಂಗೋಳ

4 ☜

ಬೇಡಿ' ಎನ್ನುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದನು. ಓದುವ ಹೊತ್ತಿನಲ್ಲಿ ಓದದೇ ಅಂಡಲೆಯುತ್ತಿದ್ದನು. 'ದಿನವಿಡಿ ಖಾಲಿ ಕುಳಿತು ತಿನ್ನುತ್ತಿಯಾ... ಏನಾದರೂ ಕೆಲಸ ಹುಡುಕಿಕೊಂಡು ದುಡಿಯಲು ಹೋಗು' ಎಂದು ತಂದೆ ನಾಗಪ್ಪ ಮತ್ತು ತಾಯಿ ಏಣವ್ವ ದುಂಬಾಲು ಬೀಳುತ್ತಿದ್ದರು. ಅದಾಗಲೇ ಮಂಜುನಾಥ ಬೇಲಿ ಹಾರುವ ಚಟ ಬೆಳೆಸಿಕೊಂಡಿದ್ದನು. ದುಷ್ಟ ಸ್ನೇಹಿತರ ಸಂಗವನ್ನು ಮಾಡಿಕೊಂಡು ಆಗಾಗ ಸ್ವಲ್ಪ ಗುಂಡು... ತುಂಡು... ಗುಟಕಾ ಅಭ್ಯಾಸ ಮಾಡಿಕೊಂಡಿದ್ದನು. ಒಟ್ಟಿನಲ್ಲಿ ಹೇಳುವದಾದರೆ 'ಊರಿಗೆ ಉಪಕಾರಿ ಮನೆಗೆ ಮಾರಿ' ಎಂಬಂತಿದ್ದನು.

ಇತ್ತೀಚಿಗೆ ಕಳೆದ ವರ್ಷದ ಹಿಂದೆ ಧಾರವಾಡದಲ್ಲಿ ಫ್ಲಿಪ್‌ಕಾರ್ಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು. ವಾರಕ್ಕೆ ಮೂರು ದಿನ ಪಾರ್ಸಲ್ ಕೊಡುವ ಕೆಲಸ ಮಾಡಿಕೊಂಡು, ಮೂರು ದಿನ ಊರಿನಲ್ಲಿ ಜಮೀನಿನ ಕೆಲಸ ಮಾಡಿಕೊಂಡು ಉಳಿದ ಒಂದು ದಿನ ಚೈನಿ ಹೊಡೆಯುತ್ತಲಿದ್ದನು. ಯಾವಾಗ ಧಾರವಾಡಕ್ಕೆ ಹೋದನೋ... ಆ ಸಂದರ್ಭದಲ್ಲಿ ಸಾರಾಯಿ ಚಟಕ್ಕೆ ಅಂಟಿಕೊಂಡಿದ್ದನು ಮಂಜುನಾಥ. ತಂದೆ-ತಾಯಿ, ಸಹೋದರಿ, ಸೈನಿಕ ಅಣ್ಣ ಮಂಜುನಾಥನ ನಡವಳಿಕೆಗೆ ಬೇಸತ್ತು ಜಗಳ ಕಾಯುತ್ತಿದ್ದರು.


ಕೊಲೆಯಾದ ಮಂಜುನಾಥ ಸಹೋದರಿ


### ಮರಾಠಾ ತರುಣಿಯ ಮೋಹದಲ್ಲಿ...

ಅದಾಗಲೇ ಮಂಜುನಾಥ ಉಳ್ಳಾಗಡ್ಡಿಗೆ 24 ವರ್ಷ ದಾಟಿದ್ದವು. ಆತನಲ್ಲೂ ಕಾಮ... ಪ್ರೇಮ... ವಿರಹದ ಭಾವನೆಗಳು ಪುಟಿದೇಳುತ್ತಿದ್ದವು. ಅದರಲ್ಲೂ ಅಂಡ್ರಾಯ್ಡ್ 4ಜಿ ಮೊಬೈಲ್‌ನ ಮಾಯಾಜಾಲದಲ್ಲಿ ಸಿಲುಕಿದ್ದನು. ತಮ್ಮೂರಿನ ಪಕ್ಕದೂರಾದ ಬೆಳವಡಿಯಲ್ಲಿ 22 ವರ್ಷದ ಸುರದ್ರೂಪಿ ಮರಾಠಾ ತರುಣಿಯ ಮೋಹ ಜಾಲದಲ್ಲಿ ಮಂಜುನಾಥ ತನಗರಿವಿಲ್ಲದಂತೆ ಬಿದ್ದುಬಿಟ್ಟನು. ದಿನವಿಡಿ ಅವಳೊಡನೆ ಮೆಸೇಜ್, ಚಾಟಿಂಗ್... ವ್ಯಾಟ್ಸಾಪ್ ಎಂದೆಲ್ಲ ಟೈಮ್ ಪಾಸ್ ಮಾಡುತ್ತಿದ್ದನು.

ಮರಾಠಾ ತರುಣಿಯ ಕೂಡಾ ಮಂಜುನಾಥನನ್ನು ಮೆಚ್ಚಿದ್ದಳು. ಒಬ್ಬರಿಗೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿ ಮಾಡತೊಡಗಿದ್ದರು. ಮೊದ ಮೊದಲು ಗುಟ್ಟಾಗಿದ್ದ ಅವರ ಲವ್ವಿ-ಡವ್ವಿ ಈಗ ಓಪನ್ ಆಗಿತ್ತು. ಹೇಗಾದರೂ ಸರಿ ನಿನ್ನನ್ನೇ ಮದುವೆಯಾಗುತ್ತೇನೆ ಎಂದು ಮರಾಠಾ ತರುಣಿಗೆ ಮಾತು ಕೊಟ್ಟಿದ್ದ ಮಂಜುನಾಥ. ಅದಕ್ಕಾಗಿ ಅದೊಂದು ದಿನ ತಾನು ಮರಾಠಾ ತರುಣಿಯನ್ನು ಮದುವೆ ಮಾಡಿಕೊಳ್ಳುವ ಇರಾದೆಯನ್ನು ಅದೊಂದು ದಿನ ನೇರವಾಗಿ ಹೇಳಿಬಿಟ್ಟಿದ್ದಾನೆ.

### ಮಂಜುನಾಥನ ಮದುವೆಗೆ ವಿರೋಧ...

ಯಾವಾಗ ಮಂಜುನಾಥನು ತಾನು ಬೆಳವಡಿಯ ಮರಾಠಾ ಕೋಮಿನ ತರುಣಿಯ ಜತೆಗೆ ಮದುವೆ ಮಾಡಿಕೊಳ್ಳುವ ವಿಚಾರ ಪ್ರಸ್ತಾಪಿಸಿದನೋ... ಅವಾಗಲೇ ತಂದೆ ನಾಗಪ್ಪ, ತಾಯಿ ಏಣವ್ವ, ಸಹೋದರಿ ಮಲ್ಲವ್ವ, ಅಣ್ಣ ಗುರುಬಸಪ್ಪ ಉರಿದು ಬಿದ್ದರು. 'ನಾವು ಲಿಂಗಾಯತರಿದ್ದು ಮರಾಠಾ ತರುಣಿ ನಮಗೆ ಬೇಡಾ. ಈ ಮದುವೆ ನಮಗೆ ಇಷ್ಟವಿಲ್ಲ' ಎಂದು ಕಡ್ಡಿ ಮುರಿದಂತೆ ಹೇಳಿದಾಗ ಮಂಜುನಾಥನು ಹತಾಶನಾದನು. ಹೇಗಾದರೂ ಸರಿ ತಾನು ಪ್ರೀತಿಸಿದ ತರುಣಿಯನ್ನು ಮದುವೆ ಆಗಲೇ ಬೇಕೆಂಬ ಜಿದ್ದಿಗೆ ಬಿದ್ದು ತನ್ನ ಮನೆಯವರ ಸಂಪೂರ್ಣ ವಿರೋಧವನ್ನು ಕಟ್ಟಿಕೊಂಡನು.



### ಕುಡುಕನಾಗಿಬಿಟ್ಟನು ಮಂಜುನಾಥ...

ತಾನು ವರ್ಷಗಟ್ಟಲೇ ಪ್ರೀತಿಸಿದ್ದ ಮರಾಠಾ ತರುಣಿಯನ್ನೇ ಮದುವೆ ಮಾಡಿಕೊಳ್ಳುತ್ತೇನೆ ಎಂದು ಪಟ್ಟು ಹಿಡಿದ ಮಂಜುನಾಥ. ಇದೇ ವಿಷಯಕ್ಕಾಗಿ ದಿನದಿಂದ ದಿನಕ್ಕೆ ಕುಡಿತದ ದಾಸನಾಗಿಬಿಟ್ಟನು. ಹಗಲಿರುಳು ತನ್ನ ಕೆಲವು ದುಷ್ಟ ಸ್ನೇಹಿತರೊಂದಿಗೆ ಸೇರಿಕೊಂಡ ಪರಮ ಕುಡುಕನಾಗಿಬಿಟ್ಟನು. ದಿನವಿಡಿ ಬಂದು ತಂದೆ, ತಾಯಿಗಳೊಂದಿಗೆ ಜಗಳ ಮಾಡುತ್ತಿದ್ದನು. ಮಂಜುನಾಥನಿಗೆ ಬುದ್ಧಿ ಹೇಳಲು ಬಂದ ಅಕ್ಕನನ್ನು ಬಡಿದು 'ನಮ್ಮ ಮನೆಯಲ್ಲಿ ನಿಂದೇನು ಕಾರುಬಾರು' ಎಂದು ಹಿಗ್ಗಾ-ಮುಗ್ಗಾ ಬಯ್ಯುತ್ತಿದ್ದನು. ಸೈನ್ಯದಲ್ಲಿದ್ದ ಅಣ್ಣ ಏನಾದರೂ ಹೇಳಿದರೆ ಆತನಿಗೆ ಕೂಡಾ ಹಿಗ್ಗಾಮುಗ್ಗಾ ಬೈದು ಬಿಡುತ್ತಿದ್ದನು. ಕೊನೆಗೆ ಊರಿನಲ್ಲಿ ರಾಜಿ-ಪಂಚಾಯಿತಿ ನಡೆಯಿತು. ಆಗ ಮಂಜುನಾಥನ ಮನೆಯಲ್ಲಿ ಮದುವೆಗೆ ಗ್ರೀನ್ ಸಿಗ್ನಲ್ ದೊರಕಿತ್ತು.

### ನಿಶ್ಚಿತಾರ್ಥ ಮಾಡಿದ್ದರು...

ಒಟ್ಟಿನ ಮೇಲೆ ತಾನು ಪ್ರೀತಿಸಿದ ಮರಾಠಾ ತರುಣಿಯನ್ನು ನನಗೆ ಮದುವೆ ಮಾಡಲೇಬೇಕು ಇಲ್ಲದಿದ್ರೆ ನಿಮ್ಮ ಪರಿಸ್ಥಿತಿ ನೆಟ್ಟಗಿರಲಾರದು ಎಂದು ಬೆದರಿಕೆ ಹಾಕಿದಾಗ ವಿಧಿಯಿಲ್ಲದೇ ಮಂಜುನಾಥನ ತಂದೆ-ತಾಯಿ ಅಣ್ಣ ಒಪ್ಪಿದರು. ಅತ್ತ ಮರಾಠಾ ತರುಣಿಯ ಮನೆಯಲ್ಲಿ ಕೂಡಾ ಹೇಗೋ ಒಪ್ಪಿಗೆ ದೊರೆಯಿತು. ಈತನ ಅಣ್ಣ ಸೈನ್ಯದಲ್ಲಿದ್ದ ಗುರುಬಸಪ್ಪನಿಗೆ ಇತ್ತೀಚಿಗಷ್ಟೇ ಮದುವೆ ಆಗಿತ್ತು. ಮಂಜುನಾಥ ಮತ್ತು ಮಾರಾಠಾ ತರುಣಿಯ ನಿಶ್ಚಿತಾರ್ಥವನ್ನು ಈಗ ಒಂದು ವರ್ಷದ ಮೊದಲೇ ಮಾಡಿದ್ದರು. ಆದರೆ ಮದುವೆ ದಿನಾಂಕ ನಿಗದಿಪಡಿಸುವುದಕ್ಕೆ ಮೀನಮೇಷ ಎಣಿಸುತ್ತಲಿದ್ದರು. ಮದುವೆ ಕಾಲಕ್ಕೆ 3 ತೊಲಿಯ ಗಂಟನ್ ಕೊಡಬೇಕೆಂಬ ಬೇಡಿಕೆಗೆ ಮಂಜುನಾಥನ ಮನೆಯವರು ಒಪ್ಪಿದ್ದರು. ಇತ್ತೀಚಿಗೆ ಕಳೆದ ಒಂದು ವರ್ಷದಿಂದ ಮದುವೆ ವಿಳಂಬವಾದಾಗ ಮಂಜುನಾಥ ಕುಡಿತಕ್ಕೆ ಬಿದ್ದನು.


ಮಂಜುನಾಥನ ಕೊಲೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿರುವ ಚಿಕ್ಕಪ್ಪ

### ಮದುವೆಗಾಗಿ ದಿನನಿತ್ಯ ಜಗಳ...

ಮದುವೆ ನಿಶ್ಚಿತಾರ್ಥವಾಗಿ ಒಂದು ವರ್ಷವಾದರೂ ಕೂಡಾ ತಂದೆ, ತಾಯಿ, ಸೈನಿಕ ಅಣ್ಣ ತನ್ನ ಮದುವೆ ಮಾಡುತ್ತಿಲ್ಲವೆಂದು ಮಂಜುನಾಥ ಕುಡಿದು ಬಂದು ತಂದೆ-ತಾಯಿ, ಅಕ್ಕನಿಗೆ ವಿನಾಕಾರಣ ಥಳಿಸುತ್ತಿದ್ದನು. ಹಣ ಬೇಕೆಂದು ದಿನಾಲು ಜಗಳ ಆರಂಭಿಸಿದ್ದನು. ಸೈನಿಕ ಅಣ್ಣ ತಂದಿದ್ದ ಹೊಚ್ಚ-ಹೊಸ ಮೋಟಾರ್ ಬೈಕ್‌ನ್ನು ಕೆಲವೇ ದಿನಗಳಲ್ಲಿ ಗುಜರಿಗೆ ಹಾಕುವಂತೆ ಮಾಡಿ ಮೂಲೆಗೆ ಸೇರಿಸಿದ್ದನು. ಊರಿನ ಹಿರಿಯರು ಇದಕ್ಕಾಗಿ ಮಂಜುನಾಥನ ತಂದೆ-ತಾಯಿ, ಅಣ್ಣನಿಗೆ ತಿಳಿಸಿ ಹೇಳಿ 'ಮಂಜುನಾಥನಿಗೊಂದು ಮದುವೆ ಮಾಡಿಬಿಡಿರಿ... ಆತ ಸುಧಾರಿಸುತ್ತಾನೆ' ಎಂದಿದ್ದರು. ಮಂಜುನಾಥ ಇತ್ತೀಚಿಗೆ ತೀರಾ ವ್ಯಗ್ರನಾಗಿ ತನ್ನ ತಂದೆ ನಾಗಪ್ಪನ ಮೇಲೆ ಹಲ್ಲೆ ಮಾಡಿ ಕೈ ಮುರಿದು ಹಾಕಿದ್ದನು. ಏನಾದರೂ ಆಗಲಿ ಆತನಿಗೆ ನಿಶ್ಚಿತಾರ್ಥವಾದ ತರುಣಿ ಜತೆಗೆ ಮದುವೆ ಮಾಡಲು ನಿರ್ಧರಿಸಿಬಿಟ್ಟರು.

### ಮಾರ್ಚ್ 12ರಂದು ಮದುವೆಯಿತ್ತು...

ಆದದ್ದು ಆಗಿದೆ. ಮಂಜುನಾಥನಿಗೊಂದು ಮದುವೆ ಮಾಡಿಬಿಡಬೇಕು ಎಂದು ಮುಹೂರ್ತ ಹುಡುಕಿ ದಿ. 12-03-2025ರಂದು ಬುಧವಾರ ಫಿಕ್ಸ್ ಮಾಡಲಾಗಿತ್ತು. ತನ್ನ ಮದುವೆ ಖುಷಿಯಲ್ಲಿದ್ದ ಮಂಜುನಾಥ ತನ್ನ ಸ್ನೇಹಿತರಿಗೆ ಬಂಧು-ಬಾಂಧವರಿಗೆಲ್ಲ ತಿಳಿಸಿದ್ದನು. ಅದರಂತೆ ಮನೆಯಲ್ಲಿ ತಂದೆ-ತಾಯಿಗಳು ಕೂಡಾ ಸಿದ್ಧತೆ ನಡೆಸಿದ್ದರು. ಇದಕ್ಕಾಗಿಯೇ ಸೈನ್ಯದಲ್ಲಿದ್ದ ಅಣ್ಣ ಗುರುಬಸಪ್ಪ ಉಳ್ಳಾಗಡ್ಡಿ ಮಾರ್ಚ್ ಮೊದಲ ವಾರದಲ್ಲಿ ಚಿಕ್ಕನಂದಿಹಳ್ಳಿಗೆ ಬಂದಿದ್ದನು. ದುರಂತವೆಂದರೆ ಮಂಜುನಾಥ ಮದುವೆ ಸಮೀಪಿಸುತ್ತಿದ್ದಂತೆ ಕುಡಿತ ಮತ್ತು ಜಗಳವನ್ನು ವಿಪರೀತವಾಗಿರಿಸಿಕೊಂಡನು.


ಕುಡಿದು ಬಂದು ಕಿರಿಕ್ ಮಾಡುತ್ತಿದ್ದ ಮಂಜುನಾಥನನ್ನು ಕ್ರೂರವಾಗಿ ಕೊಂದರು

### ಕುಡಿದು ಬಂದು ಎಲ್ಲರನ್ನು ಥಳಿಸಿದ್ದನು...

ಇನ್ನೇನು ಕೇವಲ ಮದುವೆಗೆ ನಾಲ್ಕು ದಿನ ಮಾತ್ರ ಬಾಕಿಯಿತ್ತು. ಅಂದು ದಿನಾಂಕ 08-03-2025ರಂದು ಮದುವೆಗೆ ಬಟ್ಟೆ ತರಲು ಎಂದು ಈ ಮೊದಲೇ ಮನೆಯಲ್ಲಿ ಐದು ಸಾವಿರ ರೂ.ಗಳನ್ನು ಪಡೆದುಕೊಂಡಿದ್ದನು ಮಂಜುನಾಥ. ಆತ ಅದ್ಯಾವ ಬಟ್ಟೆ ಕೂಡ ತರದೇ ತನ್ನ ಸ್ನೇಹಿತರನ್ನು ಕರೆದುಕೊಂಡು ಐದು ಸಾವಿರ ರೂ.ಗಳನ್ನು ಸಾರಾಯಿ ಕುಡಿದು ತೂರಾಡಿ ಹಾಳು ಮಾಡಿದ್ದನು. ಮತ್ತೆ ಹಣಕ್ಕಾಗಿ ಜಗಳ ಕಾಯ್ದಾಗ ತಂದೆ-ತಾಯಿ, ಅಣ್ಣ, ಅಕ್ಕ ಹಿಗ್ಗಾಮುಗ್ಗಾ ಬೈಯ್ದುಬಿಟ್ಟರು. ಅದೇ ದಿವಸ ತಾಯಿ ಏಣವ್ವ, ತಂದೆ ನಾಗಪ್ಪರನ್ನು ಥಳಿಸಿಬಿಟ್ಟನು. ಈ ಕುರಿತು ಏಣವ್ವ ಕಿತ್ತೂರ ಪೊಲೀಸ್ ಠಾಣೆಗೆ ಅರ್ಜಿ ಕೂಡಾ ಸಲ್ಲಿಸಿದ್ದಳು. ಸೈನ್ಯದಲ್ಲಿದ್ದ ಅಣ್ಣನಿಗೆ ಮೈ ಹುಷಾರಿಲ್ಲದೇ ಮನೆಯಲ್ಲಿ ಮಲಗಿದ್ದನು. ಅಕ್ಕ ಮಲ್ಲವ್ವ, ಅಣ್ಣನ ಹೆಂಡತಿಗೂ ಥಳಿಸಿದ್ದನು. ಅಂದು ಮಂಜುನಾಥನ ಗ್ರಹಚಾರ ತುಂಬಾ ವಕ್ರವಾಗಿತ್ತು. ಯಾಕೋ... ಏನೋ... ತೀರಾ ಅತಿಯಾಗಿ ಹುಂಬತನಕ್ಕೆ ಇಳಿದಿದ್ದನು.

### ತಲೆಗೆ ಕಲ್ಲು-ಇಟ್ಟಿಗೆಯಿಂದ ಜಜ್ಜಿ ಕೊಲೆ...

ದಿನಾಂಕ 08-03-2025ರಂದು ಮುಂಜಾನೆಯಿಂದ ಸಾಯಂಕಾಲದವರೆಗೆ ಮಂಜುನಾಥನ ಕಾಟವನ್ನು ತಡೆಯದ ತಂದೆ ನಾಗಪ್ಪ ಮತ್ತು ಅಣ್ಣ ಗುರಪ್ಪ 'ಏಲೆ ಮಂಜು ನೀ ಸುಮ್ಮನೆ ಹೋಗು' ಎಂದು ಬುದ್ಧಿ ಹೇಳಲು ಮುಂದಾಗಿದ್ದಾರೆ. ಅಷ್ಟರಲ್ಲಿ ಆಕ್ರೋಶಗೊಂಡ ಮಂಜುನಾಥ ತನ್ನ ತಂದೆ ನಾಗಪ್ಪನ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಇದನ್ನು ಗಮನಿಸಿದ ಸೈನಿಕ ಅಣ್ಣ 'ಯಾಕೋ ಬಹಳ ಆಗಿದೆ ತಡಿಲೇ ಮಂಜ್ಯಾ' ಎಂದವನೇ ಕೆಳಗೆ ನೂಕಿ ತಲೆಗೆ ಅಲ್ಲೇ ಬಿದ್ದಿದ್ದ ಕಲ್ಲು ಎತ್ತಿಕೊಂಡು ಜಜ್ಜಿದ್ದಾನೆ. ಆಗ ನಾಗಪ್ಪ ಬಂದವನೇ ಇಟ್ಟಿಗೆಯಿಂದ ಎರಡು-ಮೂರು ಹೊಡೆತ ಹಾಕಿದ್ದಾನೆ. ಏನಾಯಿತು ಬಿಡ್ರಿ ಎಂದು ಓಣಿಯಲ್ಲಿದ್ದ ಜನ ಬಂದು ನೋಡುವುದರೊಳಗೆ ಮಂಜುನಾಥ ವಿಪರೀತ ರಕ್ತಸ್ರಾವದಿಂದ ವಿಲ... ವಿಲನೇ ಒದ್ದಾಡಿ ಪ್ರಾಣ ಕಳೆದುಕೊಂಡಿದ್ದಾನೆ. ಯಾವಾಗ ಮಂಜುನಾಥ ಸತ್ತು ಬಿದ್ದನೋ ಆವಾಗ ತಂದೆ-ಅಣ್ಣ ಅಲ್ಲಿಂದ ಪರಾರಿ ಆಗಿಬಿಟ್ಟರು. ಒಂದು ವೇಳೆ ಮಂಜುನಾಥ ಶಾಂತವಾಗಿದ್ದರೆ ಇಂದು ಮದುವೆ ಮಾಡಿಕೊಂಡು ತನ್ನ ಹೆಂಡತಿಯೊಡನೆ ಸಂಸಾರ ಮಾಡುತ್ತಿದ್ದನು. ಆದರೆ ವಿಧಿಯ ವಿಚಿತ್ರ ಆಟ ಬೇರೆ ಆಗಿತ್ತು. ಮಗನ ಕೊಲೆಯನ್ನು ಕಣ್ಣಾರೆ ಕಂಡು ತಾಯಿಯ ದುಃಖದ ಕಟ್ಟೆ ಒಡೆದಿತ್ತು. ಅದಾಗಲೇ ಹೊತ್ತು ಮುಳುಗಿ ಕತ್ತಲಾಗಿತ್ತು.

### ಪೊಲೀಸರಿಗೆ ದೂರು...

ಮಂಜುನಾಥ ಉಳ್ಳಾಗಡ್ಡಿಯ ಅಕ್ಕ ಮಲ್ಲವ್ವ ಕಿತ್ತೂರ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ಪ್ರವೀಣ ಗಂಗೋಳರನ್ನು ಕಂಡು ನಡೆದ ಘಟನೆಯ ಬಗ್ಗೆ ಸಂಪೂರ್ಣ ವಿವರವನ್ನು ತಿಳಿಸಿ ಮಂಜುನಾಥನನ್ನು ಆತನ ತಂದೆ ನಾಗಪ್ಪ, ಅಣ್ಣ ಗುರುಬಸಪ್ಪ ಕೊಲೆ ಮಾಡಿದ್ದಾರೆ ಎಂದು ದೂರು ನೀಡಿದಳು. ತಕ್ಷಣ ವಿಷಯದ ಗಂಭೀರತೆಯನ್ನು ಅರಿತುಕೊಂಡ ಪಿಎಸ್‌ಐ ಪ್ರವೀಣ ಗಂಗೋಳ ಅವರು ಕಿತ್ತೂರು ಸಿಪಿಐ ಶಿವಾನಂದ ಗುಡಗನಟ್ಟಿ ಬೈಲಹೊಂಗಲದ ಡಿವೈಎಸ್ಪಿ ರವಿ ನಾಯಕ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಕಿತ್ತೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತಮ್ಮ ಸಿಬ್ಬಂದಿಗಳೊಡನೆ ಚಿಕ್ಕನಂದಿಹಳ್ಳಿ ಘಟನಾ ಸ್ಥಳಕ್ಕೆ ತೆರಳಿದರು. ಅಷ್ಟರಲ್ಲಿ ಸಿಪಿಐ ಶಿವಾನಂದ ಗುಡಗನಟ್ಟಿ ಬೈಲಹೊಂಗಲದಿಂದ ಡಿವೈಎಸ್ಪಿ ರವಿ ನಾಯಕ ಅವರುಗಳು ಘಟನಾ ಸ್ಥಳಕ್ಕೆ ಆಗಮಿಸಿದ್ದರು. ಕೊಲೆಯಾದ ಮಂಜುನಾಥ ಉಳ್ಳಾಗಡ್ಡಿಯ ಶವವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡುವುದಲ್ಲದೇ ಸಂಬಂಧಿಕರ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ಪಡೆದುಕೊಂಡು ಸಿಪಿಐ ಶಿವಾನಂದ ಅವರು ವಿವರವಾದ ಪಂಚನಾಮೆ ಮಾಡಿದರು.

### ಹಿರಿಯ ಅಧಿಕಾರಿಗಳ ನಿರ್ದೇಶನ...

ತನಿಖಾಧಿಕಾರಿಯಾಗಿದ್ದ ಶಿವಾನಂದ ಗುಡಗನಟ್ಟಿ ಅವರು ಮಂಜುನಾಥ ಉಳ್ಳಾಗಡ್ಡಿ ಕೊಲೆ ಪ್ರಕರಣದ ಕುರಿತು ಬೈಲಹೊಂಗಲ ಡಿವೈಎಸ್ಪಿ ರವಿ ನಾಯಕ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡೈನಾಮಿಕ್ ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ವಿವರವಾಗಿ ಸಮಾಲೋಚಿಸಿ ಅವರಿಂದ ಅಗತ್ಯ ನಿರ್ದೇಶನಗಳನ್ನು ಪಡೆದುಕೊಂಡರು. ಮಂಜುನಾಥನ ಶವದ ಮರಣೋತ್ತರ ಪರೀಕ್ಷೆಯನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಯಲ್ಲಿ ಮಾಡಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಿದರು.


ಮಂಜುನಾಥನ ಕೊಲೆಯನ್ನು ಖಂಡಿಸುತ್ತಿರುವ ರಾಜು ಗಾಯಕವಾಡ

### ಹಂತಕ ತಂದೆ-ಮಗನ ಬಂಧನ...

ಮಂಜುನಾಥ ಉಳ್ಳಾಗಡ್ಡಿಯನ್ನು ಬರ್ಬರವಾಗಿ ಕೊಲೆ ಮಾಡಿದ ಆತನ ತಂದೆ ನಾಗಪ್ಪ ಉಳ್ಳಾಗಡ್ಡಿ, ಸೈನಿಕ ಅಣ್ಣ ಗುರುಬಸಪ್ಪ ಉಳ್ಳಾಗಡ್ಡಿ ಅದಾಗಲೇ ತಲೆಮರೆಸಿಕೊಂಡಿದ್ದರು. ಸಿಪಿಐ ಶಿವಾನಂದ ಗುಡಗನಟ್ಟಿ ನಿರ್ದೇಶನದಂತೆ ಪಿಎಸ್‌ಐ ಪ್ರವೀಣ ಗಂಗೋಳ ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ತಂದೆ, ಮಗ ಸೇರಿದಂತೆ ಇಬ್ಬರನ್ನು ವಶಕ್ಕೆ ತೆಗೆದುಕೊಂಡು 24 ಗಂಟೆಯೊಳಗೆ ಸಿಪಿಐ ಗುಡಗನಟ್ಟಿ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ತಮ್ಮ ಕೃತ್ಯವನ್ನು ಆರೋಪಿಗಳು ಒಪ್ಪಿಕೊಂಡಿದ್ದಾರೆ. ಅವರೀಗ ಜೈಲಿನಲ್ಲಿ ತಂಗಲು ಮುರಿಯುತ್ತ ಕಂಬಿ ಎಣಿಸುತ್ತಿದ್ದಾರೆ.

ಕ್ರೈಂ ಪ್ರಪಂಚ

# ಕಿಲ್ಲಿಂಗ್ ಕಬಾಬ್

ಇದೊಂದು ವಿಚಿತ್ರವಾದ ಮತ್ತು ಊಹೆ ಮಾಡಿರದ ರೀತಿ ತಿರುವನ್ನು ಪಡೆಯುತ್ತಾ ಸಾಗುವ ಕ್ರೈಂ ಸಸ್ಪೆನ್ಸ್ ಥ್ರಿಲ್ಲರ್ ಸ್ಟೋರಿ!

●●●

ಅವನ ಹೆಸರು ಸೂರ್ಯಪ್ರಕಾಶ್. ಪ್ರಾಯ ಇಪ್ಪತ್ತೈದು. ನಗರದಲ್ಲಿ ಜಿಮ್ ಕೋಚಿಂಗ್ ಸೆಂಟರ್‌ನಲ್ಲಿ ಕೋಚ್ ಆಗಿ ಕೆಲಸ ಮಾಡುತ್ತಿದ್ದಾನೆ. ಸಂಬಳ ತುಂಬಾ ಕಡಿಮೆ! ಅವನಿಗೊಂದು ಮಹದಾಸೆ ಇದೆ. ಬೇಗ... ತುಂಬಾ ಬೇಗ ಲಕ್ಷ, ಲಕ್ಷಗಳನ್ನು ಸಂಪಾದನೆ ಮಾಡಿ ಶ್ರೀಮಂತ ಆಗಬೇಕು, ಮನೆ ಕಟ್ಟಬೇಕು, ಕಾರು, ಬೈಕು ತೆಗೆದುಕೊಳ್ಳಬೇಕು. ತುಂಬಾ ರಾಯಲ್ ಬದುಕಬೇಕು. ಶ್ರೀಮಂತಿಕೆ ಇದ್ದರೆ ಬಲು ಸುಂದರ ಯುವತಿಯರು ಮದುವೆ ಆಗಲು ಒಪ್ಪುತ್ತಾರೆ.

ಆದರೆ ಹೇಗೆ ಸಾಧ್ಯ? ನನಗೆ ಬಿಜಿನೆಸ್ ಬಗ್ಗೆ ಗೊತ್ತಿಲ್ಲ, ನಾನು ಬಲಾಢ್ಯ, ಶರೀರದ, ಬಲು ಆಕರ್ಷಕ ರೂಪಿನ, ಹೀರೋ ಅಪಿಯರೆನ್ಸ್ ಇರುವಂತಹ ಮನ್ಮಥ!

ಬಟ್ ಪ್ರಯೋಜನ ಆಗಿಲ್ಲ.

ಸಿನಿಮಾ ಸೇರಿ ಹೆಸರು, ಹಣ ಮಾಡಬೇಕು ಅಂತ ನನಗೆ ಆಸೆ ಇದ್ದ ಕಾರಣದಿಂದ ಟ್ರೈ ಮಾಡಿದ್ದೆ. ಆದರೆ ಬೆಂಗಳೂರಿನ ಗಾಂಧಿನಗರದಲ್ಲಿ ಅವಕಾಶ ಸಿಗಲಿಲ್ಲ. ಹಲವಾರು ಪ್ರೊಡ್ಯೂಸರ್, ಡೈರೆಕ್ಟರ್‌ಗಳ ಸೇವೆ ಮಾಡಿದರೂ ಅವಕಾಶ ಕೊಡಲಿಲ್ಲ.

ಕೆಲವೇ ಸಾವಿರ ಸಂಬಳದಲ್ಲಿ ಎಷ್ಟು ದಿವಸ ಅಂತ ಬದುಕಲಿ? ಬೇರೆ ಏನಾದರೂ ಮಾಡಬೇಕು. ಏನು ಮಾಡಲಿ?

●●●

ಜಿಮ್ ಕೆಲಸ ಮುಗಿದ ಮೇಲೆ ಹೊರಗೆ ಬಂದು ಮನೆಯ ಕಡೆ ಹೊರಟನು. ಸಾಲ ಮಾಡಿ ಟೂ ವೀಲರ್ ತೆಗೆದುಕೊಂಡಿದ್ದಾನೆ.

ಫೋನ್ ಕಾಲ್ ಬಂದಿತು.

ಯಾವುದೋ ಅನ್‌ನೋನ್ ನಂಬರ್!

ಜಿಮ್ ಕ್ಲಾಸ್ ಬಗ್ಗೆ ಕೇಳಲು ಆಗಾಗ ಫೋನ್ ಮಾಡುತ್ತಿರುತ್ತಾರೆ ಎಂದುಕೊಂಡು, ಬೈಕ್ ಓಡಿಸುತ್ತಲೇ ಅಟೆಂಡ್ ಮಾಡಿದನು.

ಗೊಗ್ಗರು ಧ್ವನಿ ಕೇಳಿಬಂದಿತು.

"ನೀವು ಸೂರ್ಯಪ್ರಕಾಶ್ ಜಿಮ್‌ನಲ್ಲಿ ಕೋಚ್ ಆಗಿ ಕೆಲಸ ಮಾಡುತ್ತಿದ್ದೀರ ಅಲ್ವ?"

"ಹೌದು... ನೀವ್ಯಾರು?"

"ನನ್ನ ಹೆಸರು ಆಮೇಲೆ ಹೇಳ್ತೀನಿ. ರಾತ್ರಿ ಏಳು ಗಂಟೆಗೆ, ಮೆಜೆಸ್ಟಿಕ್‌ನಲ್ಲಿ ಇರುವ ನರ್ತಕಿ ಬಾರ್‌ನಲ್ಲಿ ಮೀಟ್ ಮಾಡಲು ಸಾಧ್ಯವೆ?"

"ವಾಟ್... ಬಾರ್‌ನಲ್ಲಿ ಮೀಟ್ ಮಾಡ್ಬೇಕಾ?"

"ಇದೇನು ನಿಮ್ಮಂತ ಯುವಕರು ಇಷ್ಟೊಂದು ಗಾಬರಿಯಿಂದ ಕೇಳುತ್ತಿದ್ದೀರ. ಯಾಕೆ ಈ ಕಾಲದ ಯುವಕರಾಗಿರೋ ನಿಮಗೆ ಗುಂಡು ಹಾಕುವ ಅಭ್ಯಾಸ ಇಲ್ವ?"

ಸೂರ್ಯಪ್ರಕಾಶ ಗಂಭೀರವಾಗಿ "ನನ್ನ ಅಭ್ಯಾಸಗಳ ಬಗ್ಗೆ ಚರ್ಚೆ ಬೇಡ. ನೀವ್ಯಾರು? ನಾನು ಯಾಕೆ ಬಾರ್‌ನಲ್ಲಿ ಮೀಟ್ ಮಾಡ್ಬೇಕು ಅಂತ ಡೈರೆಕ್ಟ್ ಆಗಿ ಹೇಳಿ" ಎಂದನು.

"ವ್ಯವಹಾರದ ದೃಷ್ಟಿಯಿಂದ ಮತ್ತು ನಿಮಗೆ ಕೆಲವು ಲಕ್ಷಗಳು ಲಾಭವಾಗಲಿ ಅಂತ ಕರೆಯುತ್ತಿದ್ದೀನಿ."

ರೋಮಾಂಚನ ಉಂಟಾಯಿತು.

ಕೆಲವು ಲಕ್ಷಗಳ ವ್ಯವಹಾರ.

ಮೈಗಾಡ್... ಈಗ ನನ್ನ ಕನಸು ನನಸಾಗುವ ಅದೃಷ್ಟ ಕೂಡಿ ಬರುತ್ತಿದೆ ಎಂದುಕೊಂಡು "ಸಾರ್... ನನ್ನಂತ ಅಪರಿಚಿತನ ಜೊತೆ ನೀವು ಲಕ್ಷಗಳ ವ್ಯವಹಾರ ಮಾಡುತ್ತಿರೋದು ಸ್ವಲ್ಪ ಗಾಬರಿಯಾಗಿದೆ" ಎಂದನು.

"ಮಿಸ್ಟರ್ ಸೂರ್ಯಪಕಾಶ್..."

"ಹೇಳಿ ಸಾರ್."

"ದಿಢೀರ್ ಅಂತ ಈ ವ್ಯವಹಾರಕ್ಕೆ ನಿಮ್ಮನ್ನು ಸೆಲೆಕ್ಟ್ ಮಾಡಿಲ್ಲ. ನಿಮ್ಮ ಬಗ್ಗೆ ಎಲ್ಲಾ ಮಾಹಿತಿ ತಿಳಿದುಕೊಂಡು ತೀರ್ಮಾನ ಮಾಡಿದ್ದೀನಿ. ನೀವು ಕರಾಟೆ ಪಟು. ಅಪಾಯ ಎದುರಾದರೆ ಫೈಟ್ ಮಾಡಿ ತಪ್ಪಿಸಿಕೊಳ್ಳುತ್ತೀರ ಅನ್ನೋದನ್ನ ನಾನು ಕನ್‌ಫರ್ಮ್ ಮಾಡಿಕೊಂಡಿದ್ದೀನಿ. ನೀವು ಬಾರ್‌ಗೆ ಬಂದರೆ ನಿಮ್ಮ ಡೀಲಿಂಗ್ ಏನು ಅಂತ ಹೇಳಿ ಎರಡು ಲಕ್ಷ ಅಡ್ವಾನ್ಸ್ ಕೊಡ್ತೀನಿ" ಎಂದಾಗ ಮತ್ತೊಮ್ಮೆ ಮೈ ಝುಂ ಎಂದಿತು.

ಎರಡು ಲಕ್ಷ ರೂಪಾಯಿ...!

ತಿಂಗಳ ಪೂರ್ತಿ ದುಡಿದರೂ ಕೇವಲ ಕೆಲವೇ ಸಾವಿರ ಸಂಬಳ ಪಡೆಯುತ್ತಿದ್ದವನಿಗೆ ಎರಡು ಲಕ್ಷದ ಇಡೀ ಗಂಟು ಸಿಗಲಿದೆ ಎಂದರೆ ಬಿಡಲು ಸಾಧ್ಯವೆ?

ಆ ಕ್ಷಣ ತೀರ್ಮಾನ ಮಾಡಿದನು.

"ಓಕೆ ಸಾರ್ ಬಾರ್‌ಗೆ ಬರ್‍ತೀನಿ."

"ರಾತ್ರಿ ಏಳು ಗಂಟೆಗೆ ಬನ್ನಿ."

"ಆದರೆ ಸಾರ್ ನಾನು ನಿಮ್ಮನ್ನು ನೋಡಿಲ್ಲ."

"ನರ್ತಕಿ ಬಾರ್‌ನಲ್ಲಿ ಪ್ರೈವೇಟ್ ಕ್ಯಾಬೀನ್ ಇದೆ. ನಾನು ಹನ್ನೆರಡನೆ ನಂಬರ್ ಕ್ಯಾಬಿನ್ ರಿಸರ್ವ್ ಮಾಡಿದ್ದೇನೆ. ಕಾಲು ಗಂಟೆ ಮೊದಲೇ ಅಲ್ಲಿರುತ್ತೇನೆ."

"ನೀವು ನನ್ನನ್ನು ನೋಡಿದ್ದೀರ. ಟೈಂಗೆ ಸರಿಯಾಗಿ ಹನ್ನೆರಡನೆ ಕ್ಯಾಬಿನ್ ಹತ್ತಿರ ಬರ್‍ತೀನಿ. ನೀವೇ ನನ್ನನ್ನು ವೆಲ್‌ಕಮ್ ಮಾಡಬೇಕು."

"ಶ್ಯೂರ್... ಆಗಲಿ ಬನ್ನಿ."

●●●

ರಾತ್ರಿ ಏಳು ಗಂಟೆ.

ನರ್ತಕಿ ಡಿಲಕ್ಸ್ ಬಾರ್!

ಇಬ್ಬರು ಎದುರು ಬದರಾಗಿ ಕೂರುವ ರೀತಿ ಟೇಬಲ್ ಮತ್ತು ಆಸನಗಳ ವ್ಯವಸ್ಥೆ ಮಾಡಲಾಗಿದೆ.

ಮಂಕು ದೀಪ ಬೆಳಗುತ್ತಿದೆ.

ಸೂರ್ಯಪ್ರಕಾಶನಿಗೆ ಆಶ್ಚರ್ಯ ಆಗಿದೆ. ಸುಮಾರು ಮುವತ್ತರ ಪ್ರಾಯದ, ಬಲಾಢ್ಯ ಶರೀರದ ಮತ್ತು ಶ್ರೀಮಂತಿಕೆಯ ಲಕ್ಷಣಗಳಿರುವ ವ್ಯಕ್ತಿಯ ಎದುರು ಕುಳಿತಿದ್ದಾನೆ.

ಟೇಬಲ್ ಬಲಭಾಗದಲ್ಲಿರುವ ಕುರ್ಚಿಯ ಮೇಲೆ ಸೂಟ್‌ಕೇಸ್ ಇದೆ.

"ಮಿಸ್ಟರ್ ಸೂರ್ಯ ಏನು ತಗೋತೀರ?"

ಸ್ಟ್ರಾಂಗ್ ಕೋಲ್ಡ್ ಬಿಯರ್

ಚಿಕನ್ 65

ಅವರಿಬ್ಬರು ಚಿಯರ್ಸ್ ಹೇಳಿ ಕುಡಿಯಲು ಪ್ರಾರಂಭ ಮಾಡಿದರು.

ಆ ರೂಮಿನಲ್ಲಿ ಸೌಂಡ್ ಪ್ರೂವ್ ಅಳವಡಿಸಲಾಗಿದೆ. ಇವರ ಸಂಭಾಷಣೆ ಹೊರಗೆ ಕೇಳುವುದಿಲ್ಲ. ಸ್ಟಾರ್ ರೂಮಿನ ಅನುಕೂಲ ಇರುವ ಈ ಕ್ಯಾಬಿನ್‌ಗೆ ಗಂಟೆಗೆ ಇಷ್ಟು ಅಂತ ಚಾರ್ಜ್ ಮಾಡುತ್ತಾರೆ. ಯುವಕ, ಯುವತಿಯರು ಅಥವಾ ಲವರ್ಸ್ ರೋಮಾನ್ಸ್ ಮಾಡುತ್ತಾ ಗುಂಡು ಹಾಕಲು ಇಂತಹ ದುಬಾರಿ ಕ್ಯಾಬಿನ್‌ಗಳನ್ನು ಬುಕ್ ಮಾಡುತ್ತಾರೆ. ಏನಾದರೂ ಆರ್ಡರ್ ಮಾಡಬೇಕಾದರೆ, ಬೆಲ್ ಮಾಡಿದರೆ ಬೇರರ್ ಬಂದು ಆರ್ಡರ್ ತೆಗೆದುಕೊಳ್ಳುತ್ತಾನೆ.

ಬಿಯರ್ ಕುಡಿಯುತ್ತಿರುವಾಗಲೇ ಆ ಶ್ರೀಮಂತ "ನನ್ನ ಹೆಸರು ರಾಜೇಂದ್ರ ಕಲ್ಮಾಡಿ. ನಾನೊಬ್ಬ ಶ್ರೀಮಂತ ಉದ್ಯಮಿ. ನಮ್ಮಂತ ಶ್ರೀಮಂತರಿಗೆ ಶತ್ರುಗಳು ಜಾಸ್ತಿ. ಮೂರು ಮಂದಿ ನನ್ನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಅವರ ಕಾಟ ತಡೆಯಲಾಗುತ್ತಿಲ್ಲ. ವಿಪರೀತ ಅಂದರೆ, ಕೋಟಿಗಳ ಲೆಕ್ಕದಲ್ಲಿ ಡಿಮ್ಯಾಂಡ್ ಮಾಡುತ್ತಿದ್ದಾರೆ. ನಿಮ್ಮಿಂದ ಹೆಲ್ಪ್ ಆಗಬೇಕು."

"ನಾನೇನು ಮಾಡಬೇಕು?"

"ಕೊಲೆ... ಕೊಲೆ ಮಾಡ್ಬೇಕು."

ಸೂರ್ಯಪ್ರಕಾಶ ಏನು ಗಾಬರಿಯಾಗಲಿಲ್ಲ. ಲಕ್ಷಗಳ ವ್ಯವಹಾರ ಅಂದ ಮೇಲೆ ಇಂತಹ ಶ್ರೀಮಂತರು ನನ್ನಂತವರಿಂದ ಕ್ರೈಂ ಮಾಡಿಸುತ್ತಾರೆ ಎಂದು ಅವನಿಗೆ ಗೊತ್ತಿದೆ.

"ಏನು... ಒಪ್ಪಿದೇನ?"

"ಉಳಿದ ವಿವರ ಹೇಳಿ ಆಮೇಲೆ ನನ್ನ ತೀರ್ಮಾನ ಹೇಳ್ತೀನಿ."

ಅವರೀಗ ಕೋಟ್ ಜೇಬಿನಿಂದ ಮೊಬೈಲ್ ತೆಗೆದು ಫೋಟೋ ಗ್ಯಾಲರಿ ಓಪನ್ ಮಾಡಿ ಅವನ ಮುಂದೆ ಹಿಡಿದರು.

ಮೈ ಝುಂ ಎಂದಿತು.

ಆಕರ್ಷಕ ರೂಪವತಿ ಈ ಕೋಟಾದಲ್ಲಿ ತುಂಬಾ ಸೆಕ್ಸಿಯಾಗಿ ಪೋಸ್ ಕೊಡುತ್ತಿದ್ದಾಳೆ. ಎಂತಹ ಗಂಡಸೇ ಆದರೂ ಸಹ ಚಂಚಲಗೊಳ್ಳುತ್ತಾರೆ.

"ಇವಳು ಶುಭಶ್ರೀ ಅಂತ. ನನ್ನ ಕಂಪನಿ ಆಫೀಸ್‌ನಲ್ಲಿ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದಾಳೆ. ಇನ್ನು ಎರಡು ದಿನಗಳಲ್ಲಿ ಇವಳನ್ನು ಕಿಡ್ನಾಪ್ ಮಾಡಿ, ರೇಪ್ ಮಾಡಿ ಕೊಲೆ ಮಾಡ್ಬೇಕು."

ಅವನು ಗಾಬರಿ, ಮುಜುಗರದಿಂದ "ರೇಪ್ ಯಾಕೆ ಮಾಡ್ಬೇಕು. ಅವಕಾಶ ದೊರೆತ ಕೂಡಲೇ ಕೊಲೆ ಮಾಡಿದರೆ ಆಗೋಲ್ವ? ರೇಪ್ ಅಂದರೆ ರಿಸ್ಕ್ ಜಾಸ್ತಿ."

"ಮಿಸ್ಟರ್... ಯಾರೋ ಬೀದಿ ಕಾಮುಕ ಈ ಚೆಲುವೆನ ನೋಡಿ ಕಿಡ್ನಾಪ್ ಮಾಡಿ ರೇಪ್ ಮಾಡಿ, ರಹಸ್ಯ ಕಾಪಾಡಲು ಕೊಲೆ ಮಾಡಿದ್ದಾನೆ ಅಂತ ಅಂದುಕೊಳ್ತಾರೆ. ಇನ್‌ಫ್ಯಾಕ್ಟ್... ಈ ಚೆಲುವೆನ ಹತ್ತಿರದಿಂದ ನೋಡಿದರೆ ನಿಮಗೆ ಆಸೆ ಬರುತ್ತೆ. ರೇಪ್ ಮಾಡಿ ಕೊಲೆ ಮಾಡ್ತೀರ."

ಅವನು ಕೂಡಲೇ ಮಾತಾಡಲಿಲ್ಲ.

"ಯಾಕೆ... ಭಯ ಆಗುತ್ತಿದ್ಯ?"

"ಭಯ ಆಗುತ್ತಿಲ್ಲ, ಹೇಗೆ, ಏನು, ಎಲ್ಲಿ, ಯಾವ ರೀತಿ ಅಂತ ಚಿಂತಿಸುತ್ತಿದ್ದೀನಿ."

"ನಾಳೆ ಸಂಜೆ ಅವಳ ಪ್ರೋಗ್ರಾಂ ಬಗ್ಗೆ ನಾನು ಮೊದಲೇ ಫೋನ್ ಮಾಡಿ ಹೇಳ್ತೀನಿ. ನೀನು ಅಲ್ಲಿಗೆ ಹೋಗಿ ಸುಳಿವು ಸಿಗದಂತೆ ಕೊಲೆ ಮಾಡಬೇಕು."

"ಸಾರ್... ಇಲ್ಲಿ ಬೇರೊಂದು ಸಮಸ್ಯೆ ಇದೆ. ಅದನ್ನು ಹೇಳಿ ನನಗೆ ಬಂದಿರುವ ಬೇರೆ ಆಲೋಚನೆ ಹೇಳ್ತೀನಿ."

"ಓಕೆ ಕ್ಯಾರಿ ಆನ್."

"ಸಾರ್ ರೇಪ್ ಅಂಡ್ ಮರ್ಡರ್ ಮಾಡಿ ಡೆಡ್ ಬಾಡಿನ ಅಲ್ಲೇ ಬಿಟ್ರೆ ಪೊಲೀಸರು ತನಿಖೆ ಮಾಡಿ ಸುಳಿವನ್ನು ಹಿಡಿದು ಪತ್ತೆ ಮಾಡುತ್ತಾರೆ. ಅದರ ಬದಲು ಹೀಗೆ ಮಾಡಿದರೆ ಹೇಗೆ?"

"ನಿನ್ನ ಪ್ಲಾನ್ ಏನು?"

"ರೇಪ್ ಅಂಡ್ ಮರ್ಡರ್ ನಂತರ ಡೆಡ್‌ಬಾಡಿನ ಅಲ್ಲಿ ಬಿಡೋದು ಬೇಡ. ಕಾರಲ್ಲಿ ಹಾಕೊಂಡು ಹೋಗಿ ನಿರ್ಜನ ಪ್ರದೇಶದಲ್ಲಿ ಪೆಟ್ರೋಲ್ ಸುರಿದು ಸುಟ್ಟುಹಾಕಿದರೆ ಪ್ರಾಬ್ಲಂ ಇರೋಲ್ಲ."

"ಆದರೆ ಅವಳು ಸತ್ತಿದ್ದಾಳೆ ಅಂತ ನನಗೆ ಹೇಗೆ ಖಾತ್ರಿ ಆಗುತ್ತೆ?"

"ಶುಭಶ್ರೀ ರೇಪ್ ಮಾಡಿ, ಕೊಲೆ ಮಾಡುವ ದೃಶ್ಯಗಳ ಫೋಟೋ ತೆಗೆದು ಕಳುಹಿಸ್ತೀನಿ."

"ಬಟ್ ಬೀ ಕೇರ್‌ಫುಲ್. ನನ್ನ ಆಫೀಸ್‌ನಲ್ಲಿ ಕೆಲಸ ಮಾಡುತ್ತಿರುವ ಶುಭಶ್ರೀ ತುಂಬಾ ಕಿಲಾಡಿ. ನೀನು ಸ್ವಲ್ಪ ಎಡವಟ್ಟು ಮಾಡಿದರೂ ನಿಂಗೆ ಏಳು ಕೆರೆ ನೀರು ಕುಡಿಸುತ್ತಾಳೆ. ನಾನು ನಾಳೆ ಮಧ್ಯಾಹ್ನ ಎರಡು ಗಂಟೆ ಒಳಗೆ ಶುಭಶ್ರೀ ನಾಳೆ ಎಲ್ಲಿಗೆ ಹೋಗ್ತಾಳೆ? ಅವಳ ಜೊತೆ ಯಾರು ಇರ್ತಾರೆ ಅನ್ನೋದರ ಬಗ್ಗೆ ಮಾಹಿತಿ ಕೊಡ್ತೀನಿ."

"ಓಕೆ ಸಾರ್."

"ಅವಳ ಫೋಟೋ ಮತ್ತು ಫೋನ್ ನಂಬರ್‌ನ ನಿನಗೆ ವಾಟ್ಸಾಪ್ ಮಾಡ್ತೀನಿ."

"ಆ್ಯಸ್ ಯೂ ಪ್ಲೀಸ್ ಸಾರ್."

ಬಲಭಾಗದಲ್ಲಿದ್ದ ಕುರ್ಚಿಯ ಮೇಲೆ ಇದ್ದ ಸೂಟ್‌ಕೇಸ್ ಎತ್ತಿಕೊಡುತ್ತಾ "ಇದರಲ್ಲಿ ಎರಡು ಲಕ್ಷ ಇದೆ. ಕೆಲಸ ಮುಗಿದ ಮೇಲೆ ಮೂರು ಲಕ್ಷ ಕೊಡ್ತೀನಿ. ಅವರ ಜೊತೆ, ಮತ್ತೊಂದು ಕೊಲೆ ಮಾಡಲು ಆಫರ್ ಕೊಡ್ತೀನಿ. ಅದಕ್ಕೂ ಸಹ ಅಡ್ವಾನ್ಸ್ ಕೊಡ್ತೀನಿ."

ಅದೃಷ್ಟ ಅಂದರೆ ಇದೇ ಇರಬೇಕು. ಒಂದೇ ಸಮನೆ ಈ ರೀತಿ ಗುದ್ದಿಕೊಂಡು ಬರುತ್ತೆ. ನಾಳೆ ರಾತ್ರಿ ಕೆಲಸ ಮುಗಿಯುತ್ತೆ. ನಾಡಿದ್ದು ಇದೇ ಟೈಂಗೆ ಒಟ್ಟು ಐದು ಲಕ್ಷ ಕ್ಯಾಶ್ ಸಿಗುತ್ತೆ.

ಅವನು ಬಾರ್‌ನಿಂದ ಹೊರಗೆ ಬಂದು ಆಟೋದಲ್ಲಿ ಮನೆಯ ಕಡೆ ಹೋಗುತ್ತಿದ್ದಾನೆ. ಮೊಬೈಲ್ ತೆಗೆದು ರಾಜೇಂದ್ರ ಕಲ್ಮಾಡಿ ಕಳಿಸಿದ್ದ ಫೋಟೋ ನೋಡಿದನು. ಎಂತಹವರನ್ನೇ ಆಗಲಿ ಚಂಚಲಗೊಳಿಸುವಂತ ಮಾದಕ ಸೌಂದರ್ಯ.

ನಾಳೆ ಇವಳನ್ನು ರೇಪ್ ಮಾಡಿ ಕೊಲೆ ಮಾಡಬೇಕು.

ಅದರ ಬಗ್ಗೆ ಚಿಂತಿಸುತ್ತಿದ್ದಾನೆ.

ಬೇರೊಂದು ಆಲೋಚನೆ ಬಂದಿತು.

ಕೂಡಲೇ ತನ್ನ ದೂರದ ಸಂಬಂಧಿಕರಲ್ಲಿ ಒಬ್ಬರಾಗಿದ್ದ ಮತ್ತು ಆತ್ಮೀಯ ಗೆಳೆಯರಾಗಿದ್ದ ಅವನಿಗೆ ಫೋನ್ ಮಾಡಿ ಎರಡು ದಿನಗಳ ಮಟ್ಟಿಗೆ ಕೇಳಲು ಫೋನ್ ಮಾಡಿದನು.

ಆ ಗೆಳೆಯ "ಏ ಸೂರ್ಯಪಾರಕಾಶ... ನಾನೇ ನಿನಗೆ ಫೋನ್ ಮಾಡ್ಬೇಕು ಅಂತ ಅನ್ಕೊಂಡಿದ್ದೆ."

"ಹೌದಾ... ಏನು ವಿಶೇಷ?"

"ನಾನು ಫ್ಯಾಮಿಲಿ ಸಮೇತ ಹತ್ತು ದಿನಗಳ ಕಾಲ ಟೂರ್ ಹೋಗ್ತಾ ಇದ್ದೀನಿ. ಇತ್ತೀಚೆಗೆ ಕಳ್ಳತನ ಜಾಸ್ತಿ ಆಗಿದೆ. ನೀನು ನಾವು ಬರುವತನಕ ಅಲ್ಲೇ ಮಲಗಬೇಕು. ಕಾರಿಗೆ ಫುಲ್ ಟ್ಯಾಂಕ್ ಪೆಟ್ರೋಲ್ ಹಾಕಿಸಿದ್ದೀನಿ. ನಿನಗೆ ಮನೆ ಕೀ ಮತ್ತು ಕಾರಿನ ಕೀ ತಲುಪಿಸುತ್ತೀನಿ. ನಾಳೆ ಬೆಳಿಗ್ಗೆ ಮನೆ ಹತ್ತಿರ ಬಾ."

ಸಕ್ಸಸ್... ಗ್ರಾಂಡ್ ಸಕ್ಸಸ್!

ಇವನು ಮಾಡಿದ್ದ ಆಸ್ಟರ್ ಪ್ಲಾನ್‌ಗೆ ಕಾರು ಮತ್ತು ಮನೆ ಎರಡೂ ಬೇಕಾಗಿತ್ತು. ಇವನು ನಿರೀಕ್ಷೆ ಮಾಡಿರದಿದ್ದರೂ ಸಹ ಇವೆರಡೂ ತಾನಾಗಿಯೇ ಸಿಗುವಂತೆ ಆಗಿದೆ.

ಇವನ ಉತ್ಸಾಹ ಜಾಸ್ತಿ ಆಯಿತು!

ಶುಕ್ರವಾರ ಸಂಜೆ ಆರು ಗಂಟೆ!

ರಾಜೇಂದ್ರ ಕಲ್ಮಾಡಿ ತಿಳಿಸಿರುವಂತೆ ಸೂರ್ಯ ಈಗ ಸ್ಕೈ ಲೈನ್ ಮಾಲ್ ಎದುರಿಗೆ ಇರುವ ಕಾರು ಪಾರ್ಕಿಂಗ್ ಹತ್ತಿರ ನಿಂತಿದ್ದಾನೆ. ಆಗಾಗ ಟೈಂ ನೋಡಿಕೊಳ್ಳುತ್ತಿದ್ದಾನೆ. ಎಲ್ಲಾ ರೀತಿಯಿಂದ ರೆಡಿಯಾಗಿ ಬಂದಿದ್ದಾನೆ.

ಅವನ ಕಾರು ಮಾಲ್‌ನಿಂದ ಸ್ವಲ್ಪ ದೂರದಲ್ಲಿದೆ. ಈಗಾಗಲೇ ಅವಳ ಕಾರನ್ನು ನೋಡಿದ್ದನು. ಆ ಕಾರಲ್ಲಿ ಡ್ರೈವರ್ ಕುಳಿತಿದ್ದಾನೆ.

ಅವಳು... ಆ ಶುಭಶ್ರೀ ಮಾಲ್ ಒಳಗೆ ಹೋಗಿದ್ದಾಳೆ. ವಳು ಪರ್ಚೇಸಿಂಗ್ ಮುಗಿಸಿಕೊಂಡು ಬರುವತನಕ ಕಾಯಲೇಬೇಕು.

ರಾತ್ರಿ ಏಳು ಗಂಟೆ!

ಅವಳು ಮಾಲ್‌ನಿಂದ ಹೊರಗೆ ಬಂದಳು. ಅಷ್ಟರಲ್ಲಿ ಸೂರ್ಯಕಾಶ ತನ್ನ ಕೆಲಸ ಮಾಡಿದ್ದಾನೆ.

ಶುಭಶ್ರೀ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಳೆ. ಆದರೆ ಅವಳ ಶ್ರೀಮಂತಿಕೆಯ ವೈಭವ ಬೆರಗಾಗುವ ರೀತಿ ಇದೆ.

ಅವಳಿಗೆ ಮದುವೆ ಆಗಿಲ್ಲ.

ಅವಳು ಧರಿಸುವ ಡ್ರೆಸ್‌ಗಳು, ಚಿನ್ನದ ಆಭರಣಗಳು ಮತ್ತು ಫಾರಿನ್‌ನಿಂದ ತರಿಸುವ ಮೇಕಪ್ ಮತ್ತು ಇನ್ನಿತರ ವಸ್ತುಗಳು. ಎಲ್ಲವೂ ಸಹ ದುಬಾರಿಯಾಗಿದೆ.

ಅವಳೀಗ ಕಾರಿನ ಡೋರ್ ತೆಗೆಯುತ್ತಾ "ಡ್ರೈವರ್... ಗ್ರೀನ್ ಲ್ಯಾಂಡ್ ಫಾರಂ ಹೌಸ್‌ಗೆ ಹೋಗು" ಎಂದು ಹೇಳುತ್ತಾ, ತಾನು ತಂದಿದ್ದ ಬೆಲೆಬಾಳುವ ವಸ್ತುಗಳನ್ನು ಹಿಂಭಾಗದ ಸೀಟಲ್ಲಿ ಹಾಕುತ್ತಾ ಡೋರ್ ಕ್ಲೋಸ್ ಮಾಡಿದಳು.

☞10

# ಹಣಕಾಸಿನ ವಿಚಾರಕ್ಕೆ ಕುಡಿದ ಮತ್ತಿನಲ್ಲಿ ಪುನೀತ್ ಹೆಣ ಕೆಡವಿದ ಗಾರೆ ಕೆಲಸದ ಮೇಸ್ತ್ರಿ!

**ಆತ ತನ್ನ ಹೆಂಡತಿ, ಮಕ್ಕಳು, ಬಂಧು ಬಳಗ ಎಲ್ಲವನ್ನು ತೊರೆದು ಕೂಲಿ ಕೆಲಸ ಹರಸಿ ಬೆಂಗಳೂರಿನಿಂದ ಕೊಳ್ಳೇಗಾಲಕ್ಕೆ ಬಂದಿದ್ದ. ಇಲ್ಲಿ ಗಾರೆ (ಕಟ್ಟಡ ಕಾಮಗಾರಿ) ಕೆಲಸ ಮಾಡಿಕೊಂಡು ಯಾರದೇ ತಂಟೆ ತಕರಾರು ಇಲ್ಲವೇ ಪಟ್ಟಣದ ಲಾಡ್ಜ್‌ವೊಂದರಲ್ಲಿ ಉಳಿದುಕೊಂಡಿದ್ದ. ಕೂಲಿ ಕೆಲಸಕ್ಕೆ ಕರೆಯಲು ಬಂದ ಗಾರೆ ಕೆಲಸದ ಮೇಸ್ತ್ರಿಯೋರ್ವ ಹಣಕಾಸಿನ ವಿಚಾರಕ್ಕೆ ಕುಡಿದ ಮತ್ತಿನಲ್ಲಿ ಚಾಕುವಿನಿಂದ ಆತನನ್ನು ಇರಿದು ಕೊಲೆಗೈದಿದ್ದಾನೆ. ಕೊಲೆ ಆರೋಪಿಯನ್ನು ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ.**





**ಕೊಳ್ಳೇಗಾಲ**

✍ ಎಸ್. ಸ್ವಾಮಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಉತ್ತರಹಳ್ಳಿ ತಾಲೂಕು, ಸುಬ್ರಹ್ಮಣ್ಯಪುರ ಪೋಸ್ಟ್, ಅರೇಹಳ್ಳಿ ಗ್ರಾಮದ ಲಿಂಗಾಯಿತ ಜನಾಂಗದ ಚಿಕ್ಕಶಾಂತಪ್ಪ ಎಂಬುವರ ಒಬ್ಬನೇ ಮಗ ಪುನೀತ್ (48) ಮೃತ ದುರ್ದೇವಿ.

ಈತನ ತಂದೆ ತಾಯಿಗಳು ಕಳೆದ 20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಈತನ ಚಿಕ್ಕಪ್ಪ ಶಿವರುದ್ರಪ್ಪ ಹಾಗೂ ಅತ್ತೆ ಇದ್ದಾರೆ. ಆದರೆ ಅದಾಗಲೇ ತಂದೆ ತಾಯಿ ಇಬ್ಬರು ತೀರಿಕೊಂಡ ಮೇಲೆ ತನ್ನ ಸಂಬಂಧಿಕರನ್ನು ತೊರೆದು ಹುಟ್ಟಿದ ಊರು ಬಿಟ್ಟು ರಾಮನಗರಕ್ಕೆ ಬಂದು ನೆಲೆಸಿದ್ದ. ಅಲ್ಲಿ ಸುಮಾರು 15 ವರ್ಷಗಳು ಕೂಲಿ ಕೆಲಸ ಮಾಡಿಕೊಂಡಿದ್ದ. ಇಲ್ಲಿ ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿದ್ದ. ಈ ವೇಳೆ ರಾಮನಗರದ ಶೋಭಾ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಸುಮಾರು 6 ವರ್ಷಗಳ ಕಾಲ ಗಂಡ ಹೆಂಡತಿ ಅನ್ಯೋನ್ಯವಾಗಿದ್ದರು. ಅದರ ಫಲವಾಗಿ ರೋಹಿತ್ ಎಂಬ 15 ವರ್ಷದ ಮಗನಿದ್ದಾನೆ. ಈತ ದಿನಾಲೂ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಹಾಗೂ ಇನ್ನಿತರ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ಆಗಿ ಗಂಡ ಹೆಂಡರ ನಡುವೆ ಮನಸ್ತಾಪವಾಗಿ ದೂರಾಗಿದ್ದಾರೆ. ಆದರೆ ಹೆಂಡತಿ ಮಕ್ಕಳು ಎಲ್ಲಿದ್ದಾರೆ ಎಂದು ಇದುವರೆಗೂ ತಿಳಿದಿಲ್ಲ.

ಈತ ಹೊರಗಡೆ ಕೂಲಿ ಕೆಲಸಕ್ಕೆ ಹೋದರೆ ಅಲ್ಲೇ ಉಳಿದುಕೊಳ್ಳುತ್ತಿದ್ದ. ಅದೇ ರೀತಿ ಕಳೆದ ಒಂದೂವರೆ - ಎರಡು ವರ್ಷಗಳ ಹಿಂದೆ ರಾಮನಗರ ತೊರೆದು ಕೊಳ್ಳೇಗಾಲಕ್ಕೆ ಬಂದಿದ್ದಾನೆ. ಇಲ್ಲಿನ ಫೀಸ್ ಪಾರ್ಕ್ ಬಳಿಯ ಚೆನ್ನಮ್ಮ ಲಾಡ್ಜ್‌ನಲ್ಲಿ ರೂಮ್ ಬಾಡಿಗೆ ಪ್ರತಿ ದಿನಕ್ಕೆ 200 ರೂ. ನಂತೆ ಮಾತನಾಡಿಕೊಂಡು ಉಳಿದುಕೊಂಡಿದ್ದ. ಕಟ್ಟಡ ಕಟ್ಟುವ ಮೇಷನ್ ಕೆಲಸ ಕಲಿತಿದ್ದರಿಂದ ಇಲ್ಲಿ ಯಾರಾದರು ಮೇಸ್ತ್ರಿಗಳು ಕಟ್ಟಡ ಕಾಮಗಾರಿ ಕೆಲಸಕ್ಕೆ ಕರೆದರೆ ಹೋಗಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಮ.ಮ. ಬೆಟ್ಟ, ಮಳವಳ್ಳಿ ಹೀಗೆ ಸುತ್ತಮುತ್ತಲಿನ ಕಡೆ ಗಾರೆ ಕೆಲಸ ಮಾಡಿಕೊಂಡಿದ್ದ. ತನ್ನ ಸಂಬಂಧಿಕರನ್ನು ತೊರೆದು ಬಂದಿದ್ದನು. ದುಡಿದ ಹಣದಲ್ಲಿ ಕುಡಿದು ತನ್ನ ಪಾಡಿಗೆ ತಾನು ಕಾಲ ಕಳೆಯುತ್ತಿದ್ದ ಪುನೀತ್‌ನ ಜೀವನದಲ್ಲಿ ಗಾರೆ ಕೆಲಸದ ಮೇಸ್ತ್ರಿ ಮಂಜುನಾಥ್ ಎಂಬಾತ ಮೃತ್ಯುವಾಗಿ ಬಂದ.

**ಆತ ಮಂಜುನಾಥ್ ಅಲಿಯಾಸ್ ಮಣಿಕಂಠ ಮಣಿ**

ಮೈಸೂರಿನ ಶ್ರೀರಾಂಪುರ ಎರಡನೇ ಹಂತದ ದೇವಯ್ಯನ ಹುಂಡಿ ಒಕ್ಕಲಿಗ ಜನಾಂಗದ ಮಂಜುನಾಥ್ ಅಲಿಯಾಸ್ ಮಣಿಕಂಠ ಅಲಿಯಾಸ್ ಮಣಿ ಎಂಬಾತ ಅಲ್ಲಿ ಇಲ್ಲಿ ಕಟ್ಟಡಗಳನ್ನು ಕಟ್ಟಿಸುವ ಕಾಮಗಾರಿಗಳ ಗುತ್ತಿಗೆ ಪಡೆದು ಕೂಲಿ ಆಳುಗಳನ್ನು ಕರೆದುಕೊಂಡು ಹೋಗಿ ದುಡಿಸುವ ಕೆಲಸ ಮಾಡಿಕೊಂಡಿದ್ದು ಅದೇ ರೀತಿ ಕನಕಪುರ ತಾಲೂಕಿನ ಕೋಡಿಹಳ್ಳಿಯಲ್ಲಿ ಮನೆಯ ಕಟ್ಟಡದ ಕಾಮಗಾರಿಗೆ ಕೂಲಿ ಆಳುಗಳ ಜವಾಬ್ದಾರಿ ತೆಗೆದುಕೊಂಡಿದ್ದನು.


ಆ ಕೆಲಸಕ್ಕಾಗಿ ಘಟನೆ ನಡೆಯುವ ಒಂದು ವಾರದ ಹಿಂದೆ ಕೂಲಿ ಆಳುಗಳನ್ನು ಹುಡುಕಿಕೊಂಡು ಕೊಳ್ಳೇಗಾಲಕ್ಕೆ ಬಂದಿದ್ದ ಮಂಜುನಾಥ್ ಮೃತ ಪುನೀತ್ ಹಾಗೂ ಯಳಂದೂರು ತಾಲೂಕಿನ ಅಗರ - ಮಾಂಬಳ್ಳಿ ಗ್ರಾಮದ ಮಹೇಶ್ ಸೇರಿದಂತೆ ನಾಲ್ಕೈದು ಮಂದಿ ಕೂಲಿ ಆಳುಗಳನ್ನು ಕರೆದುಕೊಂಡು ಹೋಗಿದ್ದ. ಅಲ್ಲಿ ನಾಲ್ಕೈದು ದಿನ ಕೆಲಸ ಮಾಡಿದ ಇವರು ಕೆಲಸವನ್ನು ಸ್ಥಗಿತಗೊಳಿಸಿ ವಾಪಸ್ ಬಂದಿದ್ದರು. ಮಂಜುನಾಥ್ ಕೂಲಿ ಆಳುಗಳಿಗೆ ಸರಿಯಾಗಿ ಕೂಲಿ ಹಣ ಕೊಡದಿದ್ದರಿಂದ ಈ ಎಲ್ಲರೂ ಕೆಲಸ ಬಿಟ್ಟು ಬಂದಿದ್ದರು ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬರುತ್ತದೆ.


ಎಸ್ಪಿ ಡಾ. ಬಿ.ಟಿ. ಕವಿತಾ


ಡಿವೈಎಸ್ಪಿ ಧರ್ಮೇಂದ್ರ

ಕಟ್ಟಡದ ಕೆಲಸ ನಿಲ್ಲಿಸಿದ್ದರಿಂದ ಮನೆಯ ಮಾಲೀಕರು ಬೇಗ ಕಾಮಗಾರಿ ಮುಗಿಸುವಂತೆ ಮೇಸ್ತ್ರಿ ಮಂಜುನಾಥ್ ಮೇಲೆ ಒತ್ತಡ ಹಾಕುತ್ತಿದ್ದರು. ಇದರಿಂದಾಗಿ ಮೇಸ್ತ್ರಿ ಮಂಜುನಾಥ್ ಗಾರೆ ಕೆಲಸದ ಮೇಷನ್‌ಗಳಾದ ಪುನೀತ್ ಹಾಗೂ ಮಹೇಶ್‌ರವರನ್ನು ಮತ್ತೆ ಕರೆದುಕೊಂಡು ಹೋಗಲು ಮಾರ್ಚ್ 4ರಂದು ಮಂಗಳವಾರ ಮೈಸೂರು ತಾಲೂಕು, ವರುಣ ಹೋಬಳಿಯ ಮಂಡಕಹಳ್ಳಿ ಸಮೀಪದ ಹೊಸಹಳ್ಳಿ ಗ್ರಾಮದ ರವಿ ಎಂಬಾತನನ್ನು ಜೊತೆಗೆ ಕರೆದುಕೊಂಡು ಕೊಳ್ಳೇಗಾಲಕ್ಕೆ ಬೈಕ್‌ನಲ್ಲಿ ಬಂದಿದ್ದನು. ಬರುವ ಮೊದಲೇ ಮಹೇಶ್ ಹಾಗೂ ಪುನೀತ್ ರವರಿಗೆ ಕರೆ ಮಾಡಿ ಬಂದಿದ್ದ. ಮಹೇಶ್ ಊರಿಂದ ಬರುವವರೆಗೆ ಮಂಜುನಾಥ್ ಹಾಗೂ ರವಿ ಇಬ್ಬರು ಪುನೀತ್ ಇದ್ದ ಚೆನ್ನಮ್ಮ ಲಾಡ್ಜ್‌ನ ರೂಮ್‌ನ ಒಳಹೊಕ್ಕಿದ್ದರು.

ಮಧ್ಯಾಹ್ನ 1:00 ಗಂಟೆ ಸಮಯದಲ್ಲಿ ಪುನೀತ್ ನ ಕೊಠಡಿಗೆ ಬಂದ ಮಂಜುನಾಥ್ ಇಬ್ಬರು ಸೇರಿ ಅಲ್ಲಿ ಕುಳಿತು ಎಣ್ಣೆ ಹಾಕಿದ್ದಾರೆ. ಈ ವೇಳೆ ಮಂಜುನಾಥ್ ಮತ್ತೆ ಕೆಲಸಕ್ಕೆ ಬರುವಂತೆ ಪುನೀತ್‌ನನ್ನು ಕರೆದಿದ್ದಾನೆ. ಮೊದಲೇ ಕುಡಿದಿದ್ದ ಪುನೀತ್ ನೀನು ಸರಿಯಾಗಿ ಕೂಲಿ ಕೊಡುವುದಿಲ್ಲ ಹಾಗಾಗಿ ನಾನು ಕೆಲಸಕ್ಕೆ ಬರುವುದಿಲ್ಲ ಎಂದು ಹೇಳಿದ್ದಾನೆ. ಇದರಿಂದ ಕುಪಿತಗೊಂಡ ಮಂಜುನಾಥ್ ಪುನೀತ್ ವಿರುದ್ಧ ತಿರುಗಿ ಬಿದ್ದಿದ್ದಾನೆ. ಈ ವೇಳೆ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಈ ವೇಳೆ ಮಂಜುನಾಥ್ ಚಾಕುವಿನಿಂದ ಪುನೀತ್ ಹೊಟ್ಟೆಗೆ ಹಿರಿದಿದ್ದಾನೆ. ಇದನ್ನು ನೋಡಿದ ಜೊತೆಯಲ್ಲಿ ಬಂದಿದ್ದ ರವಿ ಎಂಬಾತ ಯಾಕೆ ಆತನಿಗೆ ಚಾಕುವಿನಿಂದ ಇರದಿದ್ದೀಯ ಎಂದು ಪ್ರಶ್ನೆಸಿದ್ದಾನೆ. ಇದರಿಂದ ಮತ್ತಷ್ಟು ಉದ್ರಿಕ್ತನಾದ ಮಂಜುನಾಥ್ ಬೆದರಿಸಿ ರವಿಯ ಬಾಯಿ ಮುಚ್ಚಿಸಿ ಅಲ್ಲಿಂದ ಪರಾರಿಯಾಗಿದ್ದಾನೆ. ಅಷ್ಟೊತ್ತಿಗೆ ಮಹೇಶ್ ಕೂಡ ಅಲ್ಲಿಗೆ ಬಂದಿದ್ದಾನೆ ಆದರೆ ಆತ ಬರುವವರಿಗೆ ಮಂಜುನಾಥ್ ಪುನೀತ್‌ನ ಹೊಟ್ಟೆಗೆ ಚಾಕು ಹಾಕಿಬಿಟ್ಟಿದ್ದನು.


ಸಿಪಿಐ ಶಿವಮಾದಯ್ಯ


ಪಿಎಸ್‌ಐ ಬಿ.ವಿ. ವರ್ಷ



ಮೇಸ್ತ್ರಿ ಮಂಜುನಾಥ್‌ನಿಂದ ಚಾಕುವಿನ ಇರಿತಕೊಳ್ಳಗಾಗಿ ಪುನೀತ್ ರಕ್ತದ ಮಡುವಿನಲ್ಲಿ ಬಿದ್ದಿರುವ ವಿಷಯ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ವರ್ಷ ಹಾಗೂ ಸಿಬ್ಬಂದಿಗಳು ಗಾಯಾಳು ಪುನೀತ್‌ನನ್ನು ಪಟ್ಟಣದ ಉಪವಿಭಾಗ ಆಸ್ಪತ್ರೆಗೆ ಸಾಗಿಸಿ ಅಲ್ಲಿನ ವೈದ್ಯೆ ಡಾ. ಲೋಕೇಶ್ವರಿಯವರಿಂದ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರು ಕೆ.ಆರ್. ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮಾರ್ಚ್ 5 ರಂದು ಬುಧವಾರ ಬೆಳಿಗ್ಗೆ ಸುಮಾರು 7 ಗಂಟೆಯಲ್ಲಿ ಮೃತಪಟ್ಟಿದ್ದಾನೆ.

ಈ ಸಂಬಂಧ ಲಾಡ್ಜ್ ಮ್ಯಾನೆಜರವ ಪುಟ್ಟರಾಜು ರವರು ನೀಡಿರುವ ದೂರಿನ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 43/2025 ಕಲಂ 103 ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೊಳ್ಳುವ ಕೊಳ್ಳೇಗಾಲ ಪಟ್ಟಣ ಠಾಣೆ ಪಿಎಸ್‌ಐ ವರ್ಷರವರು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾರವರ ಮಾರ್ಗದರ್ಶನದಲ್ಲಿ ಡಿವೈಸ್ಪಿ ಧರ್ಮೇಂದ್ರರವರ ನೇತೃತ್ವದಲ್ಲಿ ಅದೇ ದಿನ ಮಾರ್ಚ್ 5ರಂದು ಸಂಜೆ ಮೈಸೂರಿನ ಉತ್ತನಳ್ಳಿ ಶ್ರೀ ಶನೇಶ್ವರ ದೇವಸ್ಥಾನದ ಬಳಿ ಆರೋಪಿಯನ್ನು ಕಾಯ್ದು ಕುಳಿತು ಬಂಧಿಸಿ ಕರೆ ತಂದ ವೃತ್ತ ನಿರೀಕ್ಷಕ ಶಿವಮಾದಯ್ಯರವರ ಮುಂದೆ ನಿಲ್ಲಿಸಿದ್ದಾರೆ. ನಂತರ ಆರೋಪಿ ವಿಚಾರಣೆ ನಡೆಸಿದ ಶಿವಮಾದಯ್ಯರವರು ಷರಾ ಬರೆದುಕೊಂಡು ಜೈಲಿಗೆ ಬಿಟ್ಟು ಬಂದು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇತ್ತ ಇತ್ತ ಮೃತ ಪುನೀತ್‌ನ ವಾರಸುದಾರರು ಪತ್ತೆಯಾಗದ ಕಾರಣ ಪೊಲೀಸರಿಗೆ ಅಂತ್ಯ ಸಂಸ್ಕಾರ ನಡೆಸಲು ತೊಡಕಾಯಿತು. ಆದರೆ ಆತ ಸಾಯುವ ವೇಳೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಉತ್ತರಹಳ್ಳಿ ತಾಲೂಕು, ಸುಬ್ರಹ್ಮಣ್ಯಪುರ ಪೋಸ್ಟ್ ಅರೇಹಳ್ಳಿ ಗ್ರಾಮದ ಲಿಂಗಾಯಿತ ಜನಾಂಗದ ಚಿಕ್ಕಶಾಂತಪ್ಪ ಎಂಬುವರ ಮಗ ಎಂದು ತನ್ನ ವಿಳಾಸ ತಿಳಿಸಿ ಮೃತಪಟ್ಟಿದ್ದರಿಂದ ಪೊಲೀಸರು ಇವರ ವಾರಸುದಾರರು ಅಥವಾ ಸಂಬಂಧಿಕರ ವಿಳಾಸ ಪತ್ತೆ ಆಗಿರುವುದಿಲ್ಲ. ಇವರ ವಿಳಾಸ ಮಾಹಿತಿಯನ್ನು ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ -08224 252368, -9480804653, 8310954515ಗೆ ತಿಳಿಸಬೇಕಾಗಿ ಮನವಿ ಮಾಡಿದ್ದರು.

ವಿಷಯ ತಿಳಿದ ಈತನ ಚಿಕ್ಕಪ್ಪ ಶಿವರುದ್ರಪ್ಪ ಹಾಗೂ ಅತ್ತೆ ಇಬ್ಬರು ಬಂದು ಮೈಸೂರಿನ ಶವಗಾರದಲ್ಲಿ ಶವವನ್ನು ಗುರುತಿಸಿ ಈತ ನಮ್ಮ ಪುನೀತ್ ಎಂದು ದೃಢಪಡಿಸಿದ ನಂತರ ಮೈಸೂರಿನಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು.





ಶ್ರೀಮಲೆ ಮಹದೇಶ್ವರ ಬೆಟ್ಟ ದೇವಾಲಯ

# ಮಲೆ ಮಹದೇಶ್ವರ ಬೆಟ್ಟದಲ್ಲಿ ಭಾರೀ ಅವ್ಯವಸ್ಥೆ-ಭ್ರಷ್ಟಾಚಾರ! ನುಂಗಿ ನೀರು ಕುಡಿಯುತ್ತಿರುವ ಪ್ರಾಧಿಕಾರ...!!

✍ ಶಾಂತರಾಜು ಜಿ. ಕಲ್ಲಹಳ್ಳಿ



ಮುಖ್ಯಮಂತ್ರಿ ಸಿದ್ದರಾಮಯ್ಯರವರು

ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಭಾರತ ದೇಶದಲ್ಲಿಯೇ ವಿಶೇಷ ಛಾಪು ಮೂಡಿಸಿ ತನ್ನದೇ ಆದ ಭಕ್ತ ಸಮೂಹ ಹೊಂದಿರುವಂಥದ್ದು ಮಲೆಮಹದೇಶ್ವರ ಕ್ಷೇತ್ರ. ಕರ್ನಾಟಕ-ತಮಿಳುನಾಡು ಗಡಿಯ ಚಾಮರಾಜನಗರ ಜಿಲ್ಲೆಯಲ್ಲಿರುವ ಈ ಕ್ಷೇತ್ರಕ್ಕೆ ಕೊಳ್ಳೇಗಾಲದ ಮೂಲಕ, ಅತ್ತ ಮೆಟ್ಟೂರು ಮೂಲಕ ರಸ್ತೆ ಮಾರ್ಗವಿದೆ. ಈ ರಸ್ತೆಯಲ್ಲಿರುವಷ್ಟು ಹಳ್ಳ ಗುಂಡಿಗಳು ಬೇರೆಲ್ಲೂ ಇಲ್ಲ! ಆದರೆ ಇತ್ತೀಚೆಗೆ ಈ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ಸಂಪುಟದ ಅಧಿವೇಶನ ನಡೆಯುತ್ತದೆ ಎಂಬ ಕಾರಣಕ್ಕೆ ರಸ್ತೆ ಗುಂಡಿಗಳಿಗೆ ತ್ಯಾಪೆ ಹಾಕಿದ್ದಾರೆ ಮತ್ತು ತಾಳುಬೆಟ್ಟದಿಂದ ಮಾದಪ್ಪನ ಬೆಟ್ಟದವರೆಗೆ ಜೆಸಿಬಿ ಯಂತ್ರಗಳ ಮೂಲಕ ರಸ್ತೆ ಅಕ್ಕಪಕ್ಕ ಕ್ಲೀನಿಂಗ್, ರಸ್ತೆ ರಿಪೇರಿ ಮಾಡಲಾಗಿದೆ.

ಈ ರಸ್ತೆಯಲ್ಲಿ ಬೈಕು, ಕಾರು, ಬಸ್ಸು... ಯಾವುದರಲ್ಲೇ ಓಡಾಡಿದರೂ ಬೆನ್ನು ನೋವು ತಪ್ಪಿದ್ದಲ್ಲ! ಇದು ರಸ್ತೆಯ ದುರವಸ್ಥೆ ಮಾತಾಯಿತು. ಇನ್ನು ಮಲೆ ಮಾದಪ್ಪನ ಸನ್ನಿಧಿಯಾದರೂ ಹೇಗಿದೆ...?

ವಸತಿಗೃಹದ ಒಡೆದ ಕಿಟಕಿ, ಗಾಜಿಗೆ ರಟ್ಟುಗಳ ಮರೆ, ಅಲ್ಲಲ್ಲಿ ಮುರಿದು ಹೋದ ಕಿಟಕಿಗಳು, ಕಾಲಿಲ್ಲದ ಕುರ್ಚಿಗಳು, ಕೆಟ್ಟು ಹೋದ ಗೀಸರ್, ಕಿತ್ತು ಹೋದ ಹಾಸಿಗೆಗಳು, ತೊಳೆಯದೆ ಅದೆಷ್ಟೋ ದಿನವಾದ ಬೆಡ್ ಶೀಟ್‌ಗಳು, ಕಟ್ಟಿಕೊಂಡ ಟಾಯ್ಲೆಟ್ ರೂಮ್, ಮೊದಲೇ ಕಾಯ್ದಿರಿಸಿ ಬಂದರೂ ಸಿಕ್ಕದ ರೂಮುಗಳು, ರಸ್ತೆಯಲ್ಲಿ, ಎಲ್ಲೆಂದರಲ್ಲಿ ಬಿದ್ದಿರುವ ಕಸದ ರಾಶಿ, ಖಾಸಗಿ ವಸತಿ ಗೃಹಗಳಲ್ಲಿ ನಡೆಯುವ ಸುಲಿಗೆ... ಹೇಳತೀರದು!

ಲಕ್ಷಾಂತರ ಕುಟುಂಬಗಳ ಕುಲದೇವರಾಗಿರುವ ಮಲೆ ಮಹದೇಶ್ವರನ ಸನ್ನಿಧಾನಕ್ಕೆ ಹೋದರೆ ಮಹದೇಶ್ವರ ಸ್ವಾಮಿಯ ದರ್ಶನ ಕೊಡುವ ಮುಂಚೆ, ಈ ಅವ್ಯವಸ್ಥೆ, ಅಕ್ರಮ ಮತ್ತು ಅನಾಚಾರಗಳು ಭಕ್ತಾದಿಗಳನ್ನು ಅಟ್ಟಾಡಿಸಿ ಬಿಡುತ್ತವೆ!

ದುರಂತವೇನೆಂದರೆ... ಈ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ!! ಇವರೊಂದಿಗೆ ಇಬ್ಬಿಬ್ಬರು ಸಚಿವರು, ಶಾಸಕರು, ಜಿಲ್ಲಾಧಿಕಾರಿ, ಸಿಇಓಗಳೆಲ್ಲ ಪ್ರಾಧಿಕಾರದಲ್ಲಿದ್ದರೂ ಮಹದೇಶ್ವರ ಸ್ವಾಮಿಯ ಸನ್ನಿಧಾನವೇಕೆ ಹೀಗಿದೆ ಎನ್ನುವುದು ಇಲ್ಲಿಗೆ ಬರುವ ಭಕ್ತಾದಿಗಳ ಪ್ರಶ್ನೆ.

ಏಳು ಬೆಟ್ಟದ, ಎಪ್ಪತ್ತೇಳು ಮಲೆ ಒಡೆಯ ಮಲೆ ಮಹದೇಶ್ವರ ಜಗತ್ ಪ್ರಸಿದ್ಧ. ಕಲಿಯುಗ ದೈವ ಮಹದೇಶ್ವರ ಸ್ವಾಮಿಯನ್ನು ಮನೆ ದೇವರಾಗಿ ಪೂಜಿಸುವ ಕೋಟ್ಯಾಂತರ ಕುಟುಂಬಗಳಿವೆ. ಕಲಿಯುಗ ದೈವ ಎಂಬ ಕಾರಣಕ್ಕೆ ರಾಜ್ಯದ ಮೂಲೆ ಮೂಲೆಗಳಿಂದಲೂ ಭಕ್ತರು ಆಗಮಿಸುತ್ತಾರೆ. ಅಮಾವಾಸ್ಯೆ, ಹಬ್ಬ ಹರಿದಿನಗಳಲ್ಲಿ ಕಾಲಿಕ್ಕಲು ಜಾಗವಿರಲ್ಲ. ಒಟ್ಟಾರೆ ವರ್ಷಕ್ಕೆ ನೂರು ಅಥವಾ ಇನ್ನೂರು ಕೋಟಿಗೂ ಹೆಚ್ಚು ಆದಾಯವನ್ನು ತಂದು ಕೊಡುತ್ತಾನೆ ಮುದ್ದು ಮಾದಪ್ಪ. ಈ ಕೋಟಿ ಕೋಟಿ ಆದಾಯದ ಮೂಲವೇ ಭಕ್ತರೇ ಆಗಿರುವಾಗ ಇಲ್ಲಿಗೆ ಬಂದ ಭಕ್ತಾದಿಗಳಿಗೆ ನೆಮ್ಮದಿಯಿಂದಯಿದ್ದು ಹೋಗಲು ಬಕಾದ ಮೂಲ ಸೌಕರ್ಯವನ್ನು ಒದಗಿಸಲು ಪ್ರಾಧಿಕಾರಕ್ಕೇನು ದಾಡಿ...?! ಹೌದು, ಸಿದ್ದರಾಮಯ್ಯನವರೇನು ಕೈಯಿಂದ ಕೊಡಬೇಕಾಗಿಲ್ಲ, ಸರ್ಕಾರದ ಖಜಾನೆಯಿಂದಲೂ ಬಿಚ್ಚಬೇಕಿಲ್ಲ.



ಅಂತರಗಂಗೆ ಹತ್ತಿರ ಸ್ನಾನ ಮಾಡುವ ಸ್ಥಳ ಸ್ವಚ್ಛತೆ ಇಲ್ಲ



ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು

ಪ್ರಾಧಿಕಾರದಲ್ಲಿರುವ ದುಡ್ಡನ್ನೇ ಸದ್ಬಳಕೆ ಮಾಡಿಕೊಂಡರೆ ಭಕ್ತಾದಿಗಳು ಇದೇ ಸರ್ಕಾರಕ್ಕೆ ಋಣಿಯಾಗಿರುತ್ತಾರಲ್ಲವೇ. ಆದರೆ ಸಿದ್ದು ಸರ್ಕಾರ ಯಾಕೋ ಮನಸ್ಸೇ ಮಾಡುತ್ತಿಲ್ಲ. ಇನ್ನೂ ದುರಂತವೇನೆಂದರೆ ಮುಜರಾಯಿ ಇಲಾಖೆಯಿಂದ ಮುಕ್ತಿ ಪಡೆದು, 2013/2014ರಲ್ಲಿ ರಚಿಸಲ್ಪಟ್ಟ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿಎಂ ಅಧ್ಯಕ್ಷರಾದರೆ, ಮುಜರಾಯಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು, ಉಪಾಧ್ಯಕ್ಷರು, ಸಾಲೂರು ಮಠದ ಪೀಠಾಧಿಪತಿಗಳು, ಸಂಸತ್ ಸದಸ್ಯರು, ಶಾಸಕರು, ಎಂಎಲ್‌ಸಿಗಳು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಓ, ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು, ಪುರಾತತ್ವ ಇಲಾಖೆ ನಿರ್ದೇಶಕರು, ದೇವಸ್ಥಾನದ ಪ್ರಧಾನ ಅರ್ಚಕರು ಸೇರಿದಂತೆ ಒಟ್ಟು 22 ಸದಸ್ಯರಿದ್ದಾರೆ. ಇವರಲ್ಲಿ ಒಬ್ಬರು ಮನಸ್ಸು ಮಾಡಿ ಸಭೆಯಲ್ಲಿ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಪ್ರಸ್ತಾಪಿಸಿದರೂ ಮಲೆ ಮಹದೇಶ್ವರನ ಕ್ಷೇತ್ರದಲ್ಲಿ ಇಷ್ಟೊಂದು ಅವ್ಯವಸ್ಥೆ ತಾಂಡವವಾಡುತ್ತಿರಲಿಲ್ಲವೇನೋ! ಬರೀ ನುಂಗಣ್ಣಗಳೇ ತುಂಬಿರುವ ಅಲ್ಲಿ ಸಾಕ್ಷಾತ್ ಮಾದೇಶ್ವರನೇ ಬಂದು ಬುದ್ಧಿ ಕಲಿಸಬೇಕೇನೋ! ಅಲ್ಲಿಗೆ ಬರುವ ಭಕ್ತಾದಿಗಳಿಗೆ ಮುಖ್ಯವಾಗಿ ಬೇಕಿರುವುದು ವಸತಿ ಗೃಹಗಲು. ಪ್ರಾಧಿಕಾರದ ಅಧೀನದಲ್ಲಿ ಸೂರ್ಯದರ್ಶಿನಿ, ಶಿವದರ್ಶಿನಿ, ಮಹದೇಶ್ವರ ಭವನ, ಶ್ರೀಶೈಲ ಭವನ, ಗಿರಿದರ್ಶಿನಿ, ಗುರುದರ್ಶಿನಿ, ನಾಗಮಲೆ ಭವನ, ಜೇನುಮಲೆ ಭವನ, ಕಾಟೇಜ್, ವಿಐಪಿ ರೂಮು ಸೇರಿ ಒಟ್ಟು 500ಕ್ಕೂ ಹೆಚ್ಚು ರೂಮುಗಳಿವೆ. 200 ರೂಪಾಯಿಯಿಂದ 900 ರೂಪಾಯಿಗಳವರೆಗೆ ಬಾಡಿಗೆ ವಿಧಿಸಲಾಗುತ್ತಿದೆಯಂತೆ ಎನ್ನಲಾಗಿದ್ದು, ಇಷ್ಟು ದುಡ್ಡು ತೆಗೆದುಕೊಂಡು ಸರಿಯಾದ ವ್ಯವಸ್ಥೆ ಮಾಡಿದ್ದಾರಾ ಎಂದರೆ ಅದನ್ನು ಕೇಳಲೇಬೇಡಿ. ಮುಖ್ಯವಾಗಿ ಬಹುತೇಕ ರೂಮುಗಳಲ್ಲಿ ಟಾಯ್ಲೆಟ್ ಕೊಳೆ ಕಟ್ಟಿರುವುದು ಗಬ್ಬುನಾರುತ್ತಿರುತ್ತದೆ. ಒಡೆದ ಕಿಟಕಿ ಗಾಜುಗಳನ್ನು ಬದಲಾಯಿಸುವ ಬದಲು ಅದಕ್ಕೆ ರಟ್ಟಿನಿಂದ ಮರೆ ಮಾಡಲಾಗಿರುತ್ತದೆ. ಇನ್ನು ಮಂಚ, ಅದರ ಮೇಲಿರುವ ಹಾಸಿಗೆ, ಬೆಡ್‌ಶೀಟ್‌ಗಳ ಸ್ವಚ್ಛತೆ ಬಗ್ಗೆ ಮಾತನಾಡದೇ ಇರುವುದು ಒಳ್ಳೆಯದು. ಕೆಲವು ರೂಮುಗಳಲ್ಲಿ ಕೆಟ್ಟು ಹೋದ ಗೀಜರ್, ಸರಿ ಇದ್ದ ಗೀಸರ್‌ಗಳಲ್ಲಿ ಸೀಮಿತ ಅವಧಿಯವರೆಗೆ ಸಣ್ಣಗೆ ಬರುವ ಬಿಸಿ ನೀರು ಬರುತ್ತೆ, ತಿಕ ಮಕ ತೊಳೆಯುವಷ್ಟರಲ್ಲಿ ಅದೂ ನಿಂತು ಹೋಗಿ ಭಕ್ತರ ಸಂಕಟ ಮಾದಪ್ಪನಿಗೆ ಅರಿವಾಗಬೇಕು!









ತಾಳುಬೆಟ್ಟ

ನಿಮಗೆ ರೂಮು ಕೊಡುವುದೇ ಹೆಚ್ಚು, ಇನ್ನೂ ಇವೆಲ್ಲಾ ಸರಿ ಇರಬೇಕಾ ಎನ್ನುವ ಪ್ರಶ್ನೆ ಪ್ರಾಧಿಕಾರದ ಅಧಿಕಾರಿಗಳದ್ದು! ಇಲ್ಲಿ ಸರಿ ಇಲ್ಲ ಎಂದು ಖಾಸಗಿಯವರು ನಡೆಸುವ ವಸತಿ ಗೃಹಗಳಿಗೆ ಹೋದರೆ ವಾರದ ಕೊನೆಯಲ್ಲಿ ಎರಡು ಸಾವಿರಕ್ಕೂ ಅಧಿಕ ರೇಟಿನ ಬ್ಲೇಡು. ನಿಮ್ಮನ್ನು ಗೀಸಲು ತಯಾರಾಗಿರುತ್ತದೆ. ನಿಜವಾಗಿ ನೋಡಿದರೆ ಎರಡು ಸಾವಿರಕ್ಕೂ ಅಧಿಕ ರೂಮುಗಳನ್ನು ಮಾಡಿದರೂ ಸಾಕಾಗುವುದಿಲ್ಲ ಎನ್ನುವಷ್ಟು ಭಕ್ತಾದಿಗಳ ದಂಡು ಇಲ್ಲಿಗೆ ಹರಿದು ಬರುತ್ತದೆ. ಇದರ ಮಧ್ಯೆ ಪ್ರಾಧಿಕಾರ 300 ರೂಮುಗಳ ಒಂದು ವಸತಿ ಗೃಹ ಕಟ್ಟಲು ಮುಂದಾಗಿದೆ. ಇದು ಪೂರ್ಣಗೊಂಡು ಆಗಸ್ಟ್ ತಿಂಗಳಿಗೇ ಭಕ್ತರ ಬಳಕೆಗೆ ಲಭ್ಯವಾಗಬೇಕಿತ್ತು. ಆದರೆ ಐದು ವರ್ಷ ಕಳೆದರೂ ಈ ವಸತಿ ಗೃಹ ಇನ್ನೂ ಪೂರ್ಣಗೊಂಡಿಲ್ಲ. ಆರಂಭದಲ್ಲಿ ಅಂದಾಜು ವೆಚ್ಚ 38 ಕೋಟಿ ರೂಪಾಯಿ ಇದ್ದದ್ದು ಈಗ 60 ಕೋಟಿಯನ್ನೂ ಮೀರಿದೆ. ಈಗಾಗಲೇ ಎರಡನೇ ಕಂಟ್ರಾಕ್ಟರ್‌ಗೆ ಕಾಮಗಾರಿ ಕೈ ಬದಲಾಗಿದೆ. ಅವನ್ಯಾರು, ಅವನು ಯಾವ ಸ್ಪೀಡಿನಲ್ಲಿ ಕೆಲಸ ಮಾಡಿಸುತ್ತಿದ್ದಾನೆ ಎನ್ನುವ ಬಗ್ಗೆ ಪ್ರಾಧಿಕಾರದ ಸಿಬ್ಬಂತಿ ಬಾಯಿ ಬಿಡುವುದಿಲ್ಲ. ಅಗತ್ಯವಿರುವ ವಸತಿ ಗೃಹದ ಕಾಮಗಾರಿ ಈ ಪರಿ ಮಂದ ಗತಿಯಲ್ಲಿ ಸಾಗಿರುವುದು ನೋಡಿದರೆ ಮುಖ್ಯಮಂತ್ರಿಗಳಿಗೆ ಮಹದೇಶ್ವರನ ಬಗ್ಗೆ ಅದೆಷ್ಟು ಭಕ್ತಿ, ಗಮನವಿದೆ ಎನ್ನುವುದು ತಿಳಿಯುತ್ತದೆ.



ಇನ್ನು ಅಂತರಗಂಗೆಯಲ್ಲಿ ಸ್ನಾನ ಮಾಡಿದರೆ ಉಚಿತವಾಗಿ ಹಲವು ಕಾಯಿಲೆ ಕಸಾಲೆಗಳು ನಿಮಗೆ ಸಿಗುತ್ತವೆ ಎನ್ನುವ ಸ್ಥಿತಿಯಿದೆ. ಬಹು ಲಕ್ಷ ರೂಪಾಯಿ ಸುರಿದು ಒಂದು ಕೊಳವನ್ನೂ ನಿರ್ಮಿಸಲಾಗಿದೆ. ಈ ಕೊಳ ಕೊಳಕಾಗಿದೆ, ಇದನ್ನು ಉಪಯೋಗಕ್ಕೆ ಬಿಟ್ಟು ಕೊಟ್ಟ ಇತ್ತೀಚೆಗೆ ಪ್ರಾಧಿಕಾರದ ಸಿಬ್ಬಂದಿಗಳಿಂದ ಮೈಕ್ ಅನೌನ್ಸ್ ಮಾಡಿಸಿ ಭಕ್ತಾದಿಗಳು ಸೋಪು, ಶಾಂಪುಗಳನ್ನು ಉಪಯೋಗಿಸಬೇಡಿ, ಸ್ವಚ್ಛತೆ ಕಾಪಾಡಿ ಇನ್ನು ಮುಂದೆ ಇದನ್ನು ನಿಷೇಧಿಸಲಾಗಿದೆ ಎಂದು ಹೇಳುತ್ತಿದ್ದರು. ಇನ್ನೊಂದು ರಾಷ್ಟ್ರಪತಿ ಭವನ ಇದೆ. ಇದು ಯಾರಿಗಾಗಿ ಮಾಡಿದ್ದು, ಇದರ ನಿರ್ವಹಣೆ ಏನು, ಕೊನೆಗೆ ಇದರ ಉಪಯೋಗವೇನು ಎನ್ನುವುದು ಇವತ್ತಿನವರೆಗೂ ಯಾರಿಗೂ ತಿಳಿದಿಲ್ಲ. ಭಕ್ತಾದಿಗಳಿಗೆ ಸಾಮೂಹಿಕವಾಗಿ ಉಳಿದುಕೊಳ್ಳುವ 'ಡಿ' ಮಾದರಿ ಕುಟೀರ ಮತ್ತು ಸಂಕಮ್ಮ ವಿಭಾಗ ನಿಲಯಗಳಲ್ಲಿ 200 ರೂಮುಗಳು ಇವೆಯಾದರೂ ಅವುಗಳ ಶುಚಿತ್ವದ ಬಗ್ಗೆ ಕೇಳುವಂತೆಯೇ ಇಲ್ಲ. ಅಕ್ಷರಶಃ ಶವಾಗಾರಕ್ಕೆ ಹೋದಂತಹ ಸ್ಥಿತಿ ಇಲ್ಲಿ. ಮನುಷ್ಯರು ಇಲ್ಲಿ ಮಲಗಲು, ಒಂದು ರಾತ್ರಿ ಕಳೆಯಲು ಸಾಧ್ಯವಾ ಎಂದು ಯಾರಿಗೇ ಆದಜರೂ ಅನ್ನಿಸುತ್ತದೆ. ಆದರೆ ಸಿದ್ದರಾಮಯ್ಯನ ಸರ್ಕಾರ ಮತ್ತವರ ಅಧಿಕಾರಿ ವರ್ಗಕ್ಕೆ ಮಾತ್ರ ಏನೂ ಅನ್ನಿಸುತ್ತಿಲ್ಲ.





ಕಲ್ಯಾಣಿಯಲ್ಲಿ ಸೋಪು ಶಾಂಪೂ ನಿಷೇಧ ಹರಿವು ಮೂಡಿಸುತ್ತಿರುವ ಪ್ರಾಧಿಕಾರ ಸಿಬ್ಬಂದಿ

ದೇವಸ್ಥಾನದಲ್ಲಿ ಇರುವ ಖಾಯಂ ನೌಕರರು, ಹೊರಗುತ್ತಿಗೆ ನೌಕರರು ದೊಡ್ಡ ಸಂಖ್ಯೆಯಲ್ಲಿದ್ದಾರೆ ಅನ್ನಿಸಬಹುದಾದರೂ, ಇಲ್ಲಿರುವ ಕೆಲಸಕ್ಕೆ ಈ ಸಂಖ್ಯೆ ಸಾಲುತ್ತಿಲ್ಲ. ದಾಸೋಹ, ಲಾಡು, ಹಣ್ಣು ಕಾಯಿ, ಶುಚಿತ್ವ ವಿಭಾಗ ಸೇರಿ ಎಲ್ಲೆಡೆಯು ಬಹುತೇಕ ನೌಕರರು ಸಮಯದ ಮಿತಿಯಿಲ್ಲದೆ ಕೆಲಸ ಮಾಡುತ್ತಲೇ ಇರುತ್ತಾರೆ. ಆದರೂ ಸಾಕಾಗುವುದಿಲ್ಲ ಎನ್ನುವ ಸ್ಥಿತಿಯಿದೆ. ಇನ್ನು ಹೊರಗುತ್ತಿಗೆ ನೌಕರರಿಗೆ ಕೊಡುವ ಸಂಬಳದಲ್ಲಿಯೂ ಟೆಂಡರ್‌ದಾರರು ಸುಲಿಗೆ ಮಾಡುತ್ತಾರೆ. ಒಟ್ಟಾರೆ ಇಂತಹ ನೌಕರರಿಗೆ ಉಳಿದುಕೊಳ್ಳಲು ಪ್ರಾಧಿಕಾರ ಉತ್ತಮ ಕೊಠಡಿಗಳನ್ನು ಕಲ್ಪಿಸಿಕೊಟ್ಟಿಲ್ಲ. ಅಂತಹದಲ್ಲಿ ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಇನ್ನೇನು ಸೌಲಭ್ಯ ಕೊಡಲು ಸಾಧ್ಯ ಎಂಬುದು ದೊಡ್ಡ ಪ್ರಶ್ನೆ? ಪ್ರಾಧಿಕಾರಕ್ಕೆ ನೂರಾರು ಕೋಟಿ ಆದಾಯ ಇದ್ದರೂ ಅಭಿವೃದ್ಧಿ ಮಾತ್ರ ಇಲ್ಲಿ ಖೋತಾ ಆಗಿದೆ. 110 ಅಡಿ ಎತ್ತರದ ಮಹದೇಶ್ವರ ಪ್ರತಿಮೆ ತಂಬಡಗೇರಿ ಬೀದಿ ರಸ್ತೆ ಮತ್ತು ಹೆಲಿಪ್ಯಾಡ್ ರಸ್ತೆ ಉತ್ತಮವಾಗಿದೆ ಬಿಟ್ಟರೆ ಇನ್ನೆಲ್ಲಾ ರಸ್ತೆಗಳು ಕಡೆಯೂ ಹರೋಹರ. ಇನ್ನಿತರ ನೂರೆಂಟು ನೆಪ ಮಾಡಿಕೊಂಡು ಮತ್ತೆ ಮತ್ತೆ ರಿಪೇರಿ

☞ 12





ಸಿಸ್ಟೆನ್ ಹತ್ತಿರ ಕಸ ಗಬ್ಬು ನಾರುತ್ತಿರುವುದು

## ಪ್ರಾಧಿಕಾರದ ವಿರುದ್ಧ ಭಕ್ತಾದಿಗಳ ಆಕ್ರೋಶ

ಮಾದಪ್ಪನ ಸೇವೆಗೆಂದು ಭಕ್ತಾದಿಗಳು ಕೋಟಿಗಟ್ಟಲೇ ಹಣ ಕೊಡುತ್ತಿದ್ದರೂ ಕೆಲವರಿಗೆ ಆ ದಾಹ ಹಿಂಗುತ್ತಿಲ್ಲ ಅನುಸ್ತೆ. ಇಲ್ಲಿ ಕೆಲವು ಇನ್ಸಿಡೆಂಟ್ ಗಳಲ್ಲಿ ಮುಡಿ ವಿಚಾರ, ಮುಡಿ ಕೊಡಲು ಹೋದವರಿಗೆ ಟೋಕನ್ ರೂಪದಲ್ಲಿ 80 ರೂಪಾಯಿ ಪಡೆದು, ಮುಡಿ ಕೊಟ್ಟ ನಂತರ, ಮುಡಿ ತೆಗೆದವರಿಗೆ 50 ರೂಪಾಯಿ ಕೊಡಬೇಕಾಗುತ್ತೆ. ಮತ್ತೆ ಇದಕ್ಕೆ ರಶೀದಿ ಇರೋಲ್ಲ. ಜೊತೆಗೆ ಆ ಕೂದಲು ಹರಾಜು ಮಾಡಿ ಹಣ ಪಡೆಯುತ್ತಾರೆ. ನಾವುಗಳು 300/400 ರೂ. ಕೊಟ್ಟು ಪೂಜೆ ಸಾಮಾನು ತೆಗೆದುಕೊಂಡು ಹೋದರೆ ಅಲ್ಲಿ ಮಾದಪ್ಪನಿಗೆ ಅರ್ಪಿಸದೇ ಒಂದೆಡೆ ಗುಡ್ಡೆ ಹಾಕಿಕೊಳ್ಳುತ್ತಾರೆ. ಜೊತೆಗೆ 20 ರೂಪಾಯಿ ದಕ್ಷಿಣೆ ಪಡೆಯುತ್ತಾರೆ. ಕೇಳಿದರೆ ಟೆಂಡರ್ ಪಡೆದಿದ್ದೇವೆ ಎನ್ನುತ್ತಾರೆ. ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತುಕೊಂಡರೆ ಆ ಮಧ್ಯೆ ಏನಾದರೂ ಸಮಸ್ಯೆ ಉಂಟಾದರೆ ಕೇಳುವ ಸಿಬ್ಬಂದಿಗಳ ಇರೋದಿಲ್ಲ. ಅಲ್ಲಿ ದಾಹ ಆದರೂ ನೀರೂ ಕೂಡ ಸಿಗೋದಿಲ್ಲ. ಪ್ರತಿಯೊಂದು ವಿಚಾರಕ್ಕೂ ಇಲ್ಲಿ ದುಡ್ಡು... ದುಡ್ಡು ಅನ್ನೋದು ಬಿಟ್ಟರೆ ಸ್ವಚ್ಛತೆ ಮತ್ತು ಅಭಿವೃದ್ಧಿ ಕಡೆ ಗಮನವೇ ಕೊಡದ ಪ್ರಾಧಿಕಾರವನ್ನು ಹೇಳೋರು, ಕೇಳೋರು ಯಾರು ಇಲ್ಲವೇ ಎಂದು ಭಕ್ತಾದಿಗಳು ಪ್ರಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾರೆ. ☯





ಮುಡಿ ಟಿಕೆಟ್ ಕೊಡುವ ಸ್ಥಳ



ಮುಡಿ ಕೊಡುತ್ತಿರುವ ದೃಶ್ಯ



ದರ್ಶನಕ್ಕೆ ಹೋಗುವ ಸಾಲಿನಲ್ಲಿ ಕುಡಿಯುವ ನೀರು ಇಲ್ಲ

## ಕೋಟಿಗಟ್ಟಲೆ ಟೆಂಡರ್ ಹಣ ಪಡೆದರೂ ಕಂದಾಯ ಕಟ್ಟದ ಪ್ರಾಧಿಕಾರ!



ಬೆಟ್ಟದಲ್ಲಿರುವ ಗ್ರಾಮ ಪಂಚಾಯಿತಿ ಕಚೇರಿ



ಪ್ರಾಧಿಕಾರದ ವಸತಿ ಗೃಹಗಳು

2013-2014ರಲ್ಲಿ ಪ್ರಾರಂಭವಾದ ಶ್ರೀಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಈ ಕ್ಷೇತ್ರದಲ್ಲಿ ವಾಣಿಜ್ಯ ಚಟುವಟಿಕೆಗಳಲ್ಲಿರುವ ಸುಮಾರು 273 ಅಂಗಡಿ ಮಳಿಗೆಗಳಿದ್ದು, ಹನ್ನೊಂದು ತಿಂಗಳಿಗೆ ಒಂದು ಅಂಗಡಿ ಮಳಿಗೆಗೆ 61 ಲಕ್ಷಕ್ಕೆ ಟೆಂಡರ್ ಪಡೆದಿದ್ದಾರೆ. ಈ ರೀತಿ 273 ಅಂಗಡಿಗಳಿಗೆ ಎಷ್ಟಾಯಿತು? ಈ ಕ್ಷೇತ್ರದಲ್ಲಿ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ಕಾರ್ಯಾಲಯವಿದ್ದು, ಇಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವ ಅಂಗಡಿ ಮಳಿಗೆಗಳಿಂದ ಯಾವುದೇ ರೀತಿ ಕಂದಾಯ ಕಟ್ಟುತ್ತಿಲ್ಲ. ಜನರಲ್ ಲೈಸನ್ಸ್ ಪಡೆದುಕೊಂಡೇ ಇಲ್ಲ. ಇಲ್ಲಿ ಏನಾದರೂ ಅನಾಹುತಗಳಾದರೆ ಪರಿಹಾರಕ್ಕಾಗಿ ಗ್ರಾಮ ಪಂಚಾಯಿತಿ ಮೊರೆ ಹೋಗುತ್ತಾರೆ. ಮತ್ತೆ ಪ್ರಾಧಿಕಾರಕ್ಕೆ ಸಂಬಂಧಪಟ್ಟ ವಸತಿ ಗೃಹಗಳಾದ ಜೇನುಮಲೆ, ನಾಗಮಲೆ ಈ ರೀತಿ ಸುಮಾರು ವಸತಿ ಗೃಹಗಳು ಇದ್ದರೂ ಸಹ ಈ ಕಟ್ಟಡಗಳಿಗೆ ಗ್ರಾಮ ಪಂಚಾಯಿತಿಯಿಂದ ಯಾವುದೇ ರೀತಿ ಜನರಲ್ ಲೈಸನ್ಸ್ ಪಡೆದಿಲ್ಲವಂತೆ, ಇದಕ್ಕೆ ಸಂಬಂಧಿಸಿದ ಕಂದಾಯದ ಹಣವನ್ನು ಪಾವತಿಸಿಲ್ಲವಂತೆ. ಈ ಪ್ರಾಧಿಕಾರಕ್ಕೆ ಗ್ರಾಮ ಪಂಚಾಯಿತಿ ಲೆಕ್ಕಕ್ಕೇ ಇಲ್ಲ ಎಂಬುದು ಕೆಲವರು ಪ್ರಶ್ನೆ? ಬೆಟ್ಟಕ್ಕೆ ಎಂಟ್ರಿ ಕೊಡುವ ಮೊದಲು ಒಂದು ಚೆಕ್‌ಪೋಸ್ಟ್ ಇದೆ. ಈ ಚೆಕ್‌ಪೋಸ್ಟ್ ಟೆಂಡರ್ ಮೊದಲು ಗ್ರಾಮ ಪಂಚಾಯಿತಿ ಕರೆದು 5/6 ಲಕ್ಷಗಳಲ್ಲಿ 11 ತಿಂಗಳಿಗೆ ಕೊಡುತ್ತಿತ್ತಂತೆ. ಈಗ ಪ್ರಾಧಿಕಾರ ಅಂದರೆ 2024/25ರಲ್ಲಿ 1 ಕೋಟಿ 35 ಲಕ್ಷಕ್ಕೆ ಟೆಂಡರ್ ಮಾಡಿದೆಯಂತೆ ಎಂಬುದು ಸಾರ್ವಜನಿಕರ ಮಾತಾಗಿದೆ. ಮತ್ತೊಂದೆಡೆ ದಾನಿಗಳು ಹಾಗೂ ದೇವಾಲಯದಿಂದ 'ಡಿ ಟೈಪ್' ಹಳೇ ಕಟ್ಟಡದ ಕೊಠಡಿಗಳು ಸುಮಾರು 1074 ಇದ್ದು, ಈ ಕೊಠಡಿಗಳಲ್ಲಿ ಪ್ರಾಧಿಕಾರದ ನೌಕರರು ವಾಸಿಸುತ್ತಿದ್ದು, ಇನ್ನು ಕೆಲವು ಕೊಠಡಿಗಳನ್ನು ವಾಣಿಜ್ಯ ಚಟುವಟಿಕೆಗಳಿಗೆ ಮತ್ತು ಭಕ್ತಾದಿಗಳಿಗೆ ಬಾಡಿಗೆಗೆ 600 ರೂಪಾಯಿಗೆ ಕೊಡುತ್ತಿದ್ದಾರಂತೆ. ಆದರೂ ಸಹ ಈ ಕೊಠಡಿಗಳಿಗೆ ಯಾವುದೇ ರೀತಿ ಗ್ರಾಮ ಪಂಚಾಯಿತಿಗೆ ಕಂದಾಯ ಕಟ್ಟದೇ ಇರುವುದು ದುರಂತವೇ ಸರಿ. ಈ ಮೊದಲು ಗ್ರಾಮ ಪಂಚಾಯಿತಿಯಿಂದ ಟೀ ಅಂಗಡಿ ಒಂದಕ್ಕೆ ವರ್ಷಕ್ಕೆ ಒಂದು ಸಾವಿರ ರೂಪಾಯಿ, ಮಿಠಾಯಿ ಅಂಗಡಿಗೆ ಮೂರು ಸಾವಿರ ರೂಪಾಯಿ ಮತ್ತು ಹೋಟೆಲ್‌ಗಳಿಗೆ ಐದು ಸಾವಿರ ರೂಪಾಯಿ ಕಂದಾಯ ಪಡೆಯುತ್ತಿತ್ತು. ಈಗ ಪ್ರಾಧಿಕಾರ ಲೆಕ್ಕವಿಲ್ಲದಷ್ಟು ದುಬಾರಿ ಹಣ ಪಡೆಯುತ್ತಿದ್ದರೂ ಗ್ರಾಮ ಪಂಚಾಯಿತಿಗೆ ಕಾನೂನಿನ ರೀತಿ ಕಂದಾಯ ಕಟ್ಟದೇ ಮತ್ತು ಜನರಲ್ ಲೈಸನ್ಸ್ ಪಡೆಯದೇ ಇರುವುದು ಯಾವ ನ್ಯಾಯ. ಒಂದು ವೇಳೆ ಈ ಪ್ರಾಧಿಕಾರದಿಂದ ಕಂದಾಯವನ್ನು ಸರಿಯಾಗಿ ಗ್ರಾಮ ಪಂಚಾಯಿತಿಗೆ ಪಾವತಿಸಿದ್ದರೆ, ಗ್ರಾಮ ಪಂಚಾಯಿತಿಯಿಂದ ಸ್ವಚ್ಛತೆಯ ವಿಚಾರದಲ್ಲಿ ಅನುಕೂಲವಾಗುತ್ತಿತ್ತು. ಜೊತೆಗೆ ಈ ಗ್ರಾಮ ಪಂಚಾಯಿತಿಗೆ 32 ಗ್ರಾಮ ಪಂಚಾಯಿತಿ ಸದಸ್ಯರಿದ್ದು, ಕೆಲವು ಗ್ರಾಮಗಳಿಗೆ ಅಭಿವೃದ್ಧಿ ಎನ್ನುವುದೇ ಮರೆತು ಹೋಗಿದೆ. ಪ್ರಾಧಿಕಾರದಿಂದ ಕೆಲವು ಕಂದಾಯ ವಸೂಲಿ ಆಗಿದ್ದರೆ ಅಭಿವೃದ್ಧಿ ಮಾಡುವುದರಲ್ಲಿ ಸಂಶಯವಿರಲಿಲ್ಲ ಎಂಬುದು ಕೆಲವರ ಅಭಿಪ್ರಾಯವಾಗಿದೆ! ☯





ಪ್ರಾಧಿಕಾರದಿಂದ ಟೆಂಡರ್ ಪಡೆದ ಅಂಗಡಿಗಳು



ಸ್ವಚ್ಛತೆ ಹೇಗಿದೆ ನೋಡಿ...



ಕಸ ಗಬ್ಬು ನಾರುತ್ತಿರುವುದು





ಶೌಚಾಲಯದ ಸ್ಥಿತಿ



ಸ್ನಾನದ ಗೃಹಗಳಿಗೆ ಬೀಗ ಹಾಕಿರುವುದು



ಶೌಚಾಲಕ್ಕೆ ಬೀಗ ಹಾಕಿರುವುದು

6 ☜

ಕಾರು ಚಲಿಸಿತು. ಆಕಸ್ಮಿಕವಾಗಿ ಆ ದೃಶ್ಯ ಕಂಡಿತು. ಇವಳ ಕಾರಿನ ಡ್ರೈವರ್ ಓಡಿ ಬರುತ್ತಿದ್ದಾನೆ. ಅವಳು ಗಾಬರಿಯಿಂದ ಡ್ರೈವಿಂಗ್ ಮಾಡುತ್ತಿರುವ ವ್ಯಕ್ತಿಯ ಕಡೆ ನೋಡಿದಳು.

'ಏ... ಯಾರು ನೀನು?''

ಕಾರು ಗಕ್ಕನೆ ನಿಂತಿತು. ಸೂರ್ಯ ಆಕ್ಷಣಗಳಲ್ಲಿ ಹಿಂತಿರುಗಿ, ಮೊದಲೇ ರೆಡಿ ಮಾಡಿಕೊಂಡು ತಂದಿದ್ದ ಕ್ಲೋರೋ ಸ್ಪ್ರೇಯರ್ ಕೊಳವೆಯಿಂದ ಅವಳ ಮುಖದ ಮೇಲೆ ಸ್ಪ್ರೇ ಮಾಡಿದನು.

ರಾಸಾಯನಿಕ ಘಾಟು ವಾಸನೆ ದ್ರಾವಣದ ಕಾರಣದಿಂದ ಪ್ರಜ್ಞಾಶೂನ್ಯಳಾದಳು.

ಕಾರು ರಸ್ತೆ ಬದಲಿಸಿತು.

●●●

ಬಂಗಲೆಯ ಬೆಡ್‌ರೂಮಲ್ಲಿ ಅವರು ತುಂಬಾ ಟೆನ್‌ಷನ್ ಮಾಡಿಕೊಂಡು ನೋಡುತ್ತಿದ್ದಾರೆ. ವಾಟ್ಸಾಪ್ ಮೆಸೇಜ್ ಬಂದಿತು. ಜೊತೆಗೆ ಫೋಟೋಗಳಿವೆ!

ಶುಭಶ್ರೀಯನ್ನು ಕಾರಿನಿಂದ ಇಳಿಸಿ ಎತ್ತಿಕೊಂಡು ಹೋಗುತ್ತಿರುವ ದೃಶ್ಯದ ವೀಡಿಯೋ ಕವರೇಜ್ ಮಾಡಿದ್ದಾನೆ.

ರಾಜೇಂದ್ರ ಕಲ್ಮಾಡಿ ಅವರಿಗೆ ಸಮಾಧಾನ ಆಯಿತು.

ಮೆಸೇಜ್ ಬಂದಿದೆ! ಇನ್ನು ಒಂದು ಗಂಟೆ ಕಳೆದ ಮೇಲೆ ಮತ್ತೊಂದು ದೃಶ್ಯದ ವೀಡಿಯೋ ಕ್ಲಿಪ್ ಕಳಿಸುತ್ತೀನಿ ಎಂದು ಮೆಸೇಜ್ ಮಾಡಿದ್ದಾನೆ.

●●●

ಅವಳನ್ನು ಬೆಡ್‌ರೂಮಿನ ಮಂಚದ ಮೇಲೆ ಮಲಗಿಸಿದನು. ಅವನಿಗೆ ಖಾತ್ರಿಯಾಗಿದೆ.

ಇನ್ನು ಒಂದು ಗಂಟೆ ಅವಳಿಗೆ ಪ್ರಜ್ಞೆ ಬರೋಲ್ಲ ಅಂತ. ಹಾಗಾಗಿ ಈಗ ಶುಭಶ್ರೀ ಕಾರಲ್ಲಿ ಪ್ರಯಾಣ ಮಾಡಿದನು.

ಆ ಕಾರನ್ನು ಶುಬಶಿರೀ ಹೋಗಿದ್ದ ಮಾಲ್ ಎದುರಿಗೆ ಕಾಲಿ ಇದ್ದ ಜಾಗದಲ್ಲಿ ಪಾರ್ಕ್ ಮಾಡಿದನು. ಹ್ಯಾಂಡ್ ಗ್ಲೌಸ್‌ಗಳನ್ನು ಧರಿಸಿರೋದ್ರಿಂದ ಬೆರಳು ಗುರುತುಗಳು ಬೀಳುತ್ತದೆ ಎಂಬ ಆತಂಕ ಇರಲಿಲ್ಲ. ಸಂಜೆ ಇಲ್ಲಿಗೆ ಗೆಳೆಯನ ಕಾರಲ್ಲಿ ಬಂದಿದ್ದನು. ಅದನ್ನು ಮಾಲ್‌ನಿಂದ ಸ್ವಲ್ಪ ದೂರದಲ್ಲಿ ಪಾರ್ಕ್ ಮಾಡಿದ್ದನು. ಈಗ ಗೆಳೆಯ ಕಾರಲ್ಲಿ ಆ ಮನೆಗೆ ಹೋದನು.

ಅದು ಗೆಳೆಯನ ಮನೆ. ಫ್ಯಾಮಿಲಿ ಸಮೇತ ಉತ್ತರ ಭಾರತದ ಕಡೆ ಪ್ರವಾಸ ಹೋಗಿರುವುದರಿಂದ, ಮನೆಯಲ್ಲಿ ಮಲಗಲು ಹೇಳಿ ಆ ಕಾರನ್ನು ಸಹ ಕೊಟ್ಟಿದ್ದಾನೆ.

ನಿರ್ಜನ ಪ್ರದೇಶದಲ್ಲಿರುವ ಒಂಟಿಮನೆ. ಅದು ಹೊಸ ಬಡಾವಣೆ ಆಗಿರೋದ್ರಿಂದ ಮನೆಗಳು ಜಾಸ್ತಿ ಇರಲಿಲ್ಲ. ಹಾಗಾಗಿ ಜನಗಳ ಮತ್ತು ವಾಹನಗಳ ಸಂಚಾರ ತುಂಬಾ ಕಡಿಮೆಯಾಗಿದೆ.

ಅವನು ಫ್ರಂಟ್ ಡೋರ್ ಲಾಕ್ ಓಪನ್ ಮಾಡಿ ಒಳಗೆ ಬಂದನು.

ಬೆಡ್‌ರೂಮಲ್ಲಿ ಮಲಗಿದ್ದಾಳೆ.

ಅವಳಿಗೆ ಪ್ರಜ್ಞೆ ಬಂದಿಲ್ಲ.

ಅವನೀಗ ಮಂಚದ ಹತ್ತಿರ ಬಂದು ಪ್ರಾರಂಭ ಮಾಡಿದನು.

●●●

ಮೊಬೈಲ್ ಲೈಟ್ ಬ್ಲಿಂಕ್ ಆಯಿತು. ರಾಜೇಂದ್ರ ಕಲ್ಮಾಡಿ ಓಪನ್ ಮಾಡಿ ಸೂರ್ಯಪ್ರಕಾಶ ಕಳಿಸಿದ್ದ ವೀಡಿಯೋ ದೃಶ್ಯ ನೋಡುತ್ತಿದ್ದಾನೆ,

ಅವಳು ಅರೆಬೆತ್ತಲಾಗಿದ್ದಾಳೆ! ಸೂರ್ಯಪ್ರಕಾಶ ಅವಳನ್ನು ತಬ್ಬಿಕೊಂಡು ಚುಂಬಿಸುತ್ತಿರುವ ದೃಶ್ಯವಿದೆ. ಕೇವಲ ಎರಡು ನಿಮಿಷಗಳ ವೀಡಿಯೋ ದೃಶ್ಯವಾಗಿದೆ!

ರೇಪ್ ಮಾಡುತ್ತಿದ್ದಾನೆ!

ಡೆಡ್‌ಬಾಡಿನ ಪೆಟ್ರೋಲ್ ಹಾಕಿ ಸುಡುತ್ತಾನೆ. ಇದು ಸೂರ್ಯನ ಪ್ಲಾನ್. ಅಂದ ಮೇಲೆ ರೇಪ್ ಮಾಡುವ ಅಗತ್ಯ ಇಲ್ಲ. ಆದರೆ ಪ್ರಾಯದ ಯುವಕ. ಶುಭಶ್ರೀಯಂತಹ ಚೆಲುವೆಯನ್ನು ಏಕಾಂತದಲ್ಲಿ ನೋಡಿ ಕಾಮಪ್ರಚೋದಿತನಾಗಿ ಸುಖ ಅನುಭವಿಸುತ್ತಿದ್ದಾನೆ. ಓಕೆ ಎಂಜಾಯ್ ಮಾಡಲಿ!

●●●

ಮೊಬೈಲ್ ಕ್ಯಾಮರ ಆನ್ ಮಾಡಿ ಆ ದೃಶ್ಯ ಕವರ್ ಆಗುವ ರೀತಿ ಕ್ಲಾಂಪ್ ಮಾಡಿದ್ದಾನೆ.

ಉದ್ದವಾದ ಚಾಕು ಹಿಡಿದು ಅವಳ ಹತ್ತಿರ ಬರುತ್ತಿದ್ದಾನೆ. ಮಂಚದತ್ತ ಬಾಗಿದನು. ಚಾಕು ಮೇಲೆತ್ತಿ ರಭಸದಿಂದ ತಿವಿದಾಗ ರಕ್ತ ಜಿಲ್ಲನೆ ಸಿಡಿಯಿತು!

●●●

ಬೆಡ್‌ರೂಮಲ್ಲಿ ವಿಸ್ಕಿ ಕುಡಿಯುತ್ತಾ ಕುಳಿತಿರುವ ರಾಜೇಂದ್ರ ಕಲ್ಮಾಡಿಯ ಕೊಲೆಯ ದೃಶ್ಯ ನೋಡಿದರು.

ಅವರು ವಿಲಕ್ಷಣವಾಗಿ ನಗುತ್ತಿದ್ದಾರೆ.

''ಏ ಶುಭಶ್ರೀ... ಒಂದು ಕೋಟಿ ರೂಪಾಯಿ ಬೇಕು ಅಂತ ನನ್ನನ್ನು ಬ್ಲಾಕ್‌ಮೇಲ್ ಮಾಡಿ ಹೆದರಿಸುತ್ತಿದ್ದೆ. ಈಗ ಆ ಹಣವನ್ನು ಯಮಲೋಕದಲ್ಲಿ ಯಮದೇವ ಕೊಡುತ್ತಾನೆ.

ವಿಸ್ಕಿಯ ಅಮಲೇರುತ್ತಿದೆ.

ಪೈಶಾಚಿಕ ಆನಂದವಾಗುತ್ತಿದೆ.

ಗಹಿಗಹಿ ನಗುತ್ತಿದ್ದಾನೆ.

●●●

ಬೆಳಗಿನ ಎಂಟು ಗಂಟೆ! ಕಾರಲ್ಲಿ ಸಮೀಪದ ನಗರಕ್ಕೆ ಹೋಗಿದ್ದ ಸೂರ್ಯಪ್ರಕಾಶ ಫ್ಲಾಸ್ಕಲ್ಲಿ ಟೀ, ತಿಂಡಿ ಮತ್ತು ಅಗತ್ಯಕ್ಕೆ ಉಪಯೋಗಿಸುವ ಬಟ್ಟೆಗಳನ್ನು ತಂದಿದ್ದಾನೆ.

ಡೋರ್ ಓಪನ್ ಮಾಡಿ ಒಳಗೆ ಬಂದನು.

ಫೋನ್ ಕಾಲ್ ಬಂದಿತು.

ರಾಜೇಂದ್ರ ಕಲ್ಮಾಡಿ ಮಾಡಿದ್ದಾನೆ.

''ಏ... ನೀನು ಅವಳ ಡೆಡ್‌ಬಾಡಿ ಸುಡೋದನ್ನ ಕಳಿಸಿಲ್ಲ.''

''ಸಾರಿ... ಮರೆತಿದ್ದೆ. ಈಗ ಕಳಿಸುತ್ತೀನಿ'' ಎಂದು ವಾಟ್ಸಾಪ್ ಮೆಸೇಜ್ ಮಾಡಿದನು.

ರಾಜೇಂದ್ರ ಕಲ್ಮಾಡಿ ನೋಡುತ್ತಿದ್ದಾನೆ.

ಬೆಂಕಿ ದಗದಗನೆ ಉರಿಯುತ್ತಿದೆ.

ದೂರದಲ್ಲಿ ಸೂರ್ಯ ನಿಂತಿದ್ದಾನೆ.

ಅಲ್ಲಿ ಪೆಟ್ರೋಲ್ ಕ್ಯಾನ್ ಇದೆ.

●●●

ಕಾರಿನ ಡ್ರೈವರ್ ಮತ್ತು ಶುಭಶ್ರೀ ಮನೆಯವರು ಪೊಲೀಸ್ ಸ್ಟೇಷನ್‌ಗೆ ಬಂದು ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟರು.

ಡ್ರೈವರ್ ಹೇಳಿಕೆ ಏನು?

''ನಾನು ನೇಚರ್ ಕಾಲ್‌ಗೆ ಅಂತ ಹೋಗಿದ್ದೆ. ಯಾರೋ ಒಬ್ಬ ನನ್ನ ಜಾಗದಲ್ಲಿ ಕುಳಿತು ಕಾರನ್ನು ವೇಗವಾಗಿ ಓಡಿಸಿಕೊಂಡು ಹೋದ. ಆಗತಾನೇ ಮಾಲ್‌ನಿಂದ ಪರ್ಚೇಸಿಂಗ್ ಮುಗಿಸಿಕೊಂಡು ಬಂದಿದ್ದ ಮೇಡಂ ಕುಳಿತಿದ್ದರು ಸಾರ್.''

ಪೊಲೀಸ್ ಅಧಿಕಾರಿ ''ನೀನು ಕಾರಿನಿಂದ ಇಳಿದು ಹೋಗುವಾಗ ಡೋರ್‌ಲಾಕ್ ಮಾಡಿರಲಿಲ್ವ?''

ಅವನು ಗಾಬರಿಯಿಂದ ಚಡಪಡಿಸುತ್ತಾ ''ಮರೆತುಬಿಟ್ಟಿದ್ದೆ ಸಾರ್'' ಎಂದನು.

ಆ ಕೂಡಲೇ ಪೊಲೀಸ್ ಅಧಿಕಾರಿಯ ಕೈ ಡ್ರೈವರ್ ಕೆನ್ನೆಗೆ ಅಪ್ಪಳಿಸಿತು. ''ಯೂ ಫೂಲ್, ನಿನ್ನ ನೆಗ್ಲೆಜೆನ್ಸ್‌ನಿಂದ ಎಂತಹ ಅನಾಹುತ ಆಗಿದೆ ನೋಡು. ಆ ಕಾರಿನ ನಂಬರ್ ನೋಡಿದ್ಯ?''

''ನಾನು ಓಡಿ ಬರುವುದರಲ್ಲಿ ಕಾರು ತುಂಬಾ ದೂರ ಹೊರಟು ಹೋಗಿತ್ತು. ಹಾಗಾಗಿ ಗಮನಿಸಲು ಆಗಲಿಲ್ಲ.''

ಶುಭಶ್ರೀ ಮನೆಯವರು ಡ್ರೈವರ್‌ನ ಚೆನ್ನಾಗಿ ಬೈದರು ಮತ್ತು ಕೆಲಸಕ್ಕೆ ಇನ್ನು ಮುಂದೆ ಬರಬೇಡ ಅಂತ ಹೇಳಿದ್ರು. ನಂತರ ಪೊಲೀಸ್ ಕಂಪ್ಲೇಂಟ್ ಕೊಟ್ಟರು. ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ತನಿಖೆ ಪ್ರಾರಂಭವಾಯಿತು.

ಪೊಲೀಸರ ಶೋಧನೆಯಿಂದ ಶುಭಶ್ರೀ ಉಪಯೋಗಿಸಿದ್ದ ಕಾರು 'ಮಾಲ್' ಬಳಿ ನಿಂತಿರೋದು ಕಂಡು ಬಂದಿತು.

ಕಾರಿನ ಡೋರ್ ಲಾಕ್ ಓಪನ್ ಮಾಡಿ, ಏನಾದರೂ ಸುಳಿವು ಇರುವುದೇನೋ ಎಂಬುದನ್ನು ಗಮನಿಸಿದರು. ಫಿಂಗರ್ ಪ್ರಿಂಟ್‌ನವರು ತಮ್ಮ ಕೆಲಸ ಮಾಡಿದರು.

ಡ್ರೈವರ್ ಮತ್ತು ಶುಭಶ್ರೀಯ ಬೆರಳು ಗುರುತುಗಳು ಮಾತ್ರ ಮೂಡಿರೋದು ಸುದೀರ್ಘ ಪರಿಶೀಲನೆಯಿಂದ ತಿಳಿಯಿತು. ಡ್ರೈವರ್ ಬೆರಳು ಗುರುತನ್ನು ಮೊದಲೇ ಪಡೆದಿದ್ದರು ಮತ್ತು ಶುಭಶ್ರೀಯ ಬೆರಳು ಗುರುತುಗಳನ್ನು ಅವಳ ಮನೆಯಲ್ಲಿ ಉಪಯೋಗಿಸುವ ಅತ್ಯಗತ್ಯವಾದ ವಸ್ತುಗಳ ಮೇಲಿದ್ದ ಬೆರಳು ಗುರುತುಗಳನ್ನು ಪಡೆದುಕೊಂಡಿದ್ದರು.

●●●

ನರ್ತಕಿ ಬಾರ್ ಅಂಡ್ ರೆಸ್ಟೋರೆಂಟ್‌ನ ಪ್ರೈವೇಟ್ ಕ್ಯಾಬಿನ್‌ನಲ್ಲಿ ಅವರಿಬ್ಬರು ಎದುರು-ಬದರಾಗಿ ಕುಳಿತಿದ್ದಾರೆ. ಬಿಯರ್ ಕುಡಿಯುತ್ತಿದ್ದಾರೆ.

ಈಗ ರಾಜೇಂದ್ರ ಕಲ್ಮಾಡಿ ಮೊಬೈಲ್ ಫೋಟೋ ಗ್ಯಾಲರಿ ಓಪನ್ ಮಾಡಿ ಅವನ ಮುಂದೆ ಹಿಡಿದರು.

ಮತ್ತೊಬ್ಬಳು ಆಕರ್ಷಕ ರೂಪವತಿ!

ಅವಳು ರೂಪ ಕಲಾದಂತ್ರಿ! ಪ್ರಾಯ ಹತ್ತೊಂಭತ್ತು. ನಗರದ ಕಾಲೇಜ್‌ನಲ್ಲಿ ಸೆಕೆಂಡ್ ಈಯರ್ ಡಿಗ್ರಿ ಓದುತ್ತಿದ್ದಾಳೆ. ಅವಳು ಕಾಲೇಜ್ ಕ್ವೀನ್. 'ಮಿಸ್ ಬೆಂಗಳೂರು' ಸೌಂದರ ಸ್ಪರ್ಧೆಯಲ್ಲಿ ಗೆದ್ದಿದ್ದಾಳೆ. ಟೀನೇಜ್ ಬ್ಯುಟಿಕ್ವೀನ್. ರೂಪಕಲಾದಂತ್ರಿ ಎಂ.ಜಿ. ರೋಡ್‌ನಲ್ಲಿ ಇರುವ 'ಪಬ್ ಬಾರ್‌ಗೆ' ಆಗಾಗ ಹೋಗುತ್ತಾಳೆ. ಅವಳು ಡ್ರಗ್ ಅಡಿಕ್ಟ್! ಬಡಕುಟುಂಬದ ಅವಳಿಗೆ ಶ್ರೀಮಂತಿಕೆಯ ಕೆಟ್ಟ ಅಭ್ಯಾಸಗಳಿವೆ. ಅದಕ್ಕೆಲ್ಲಾ ಹಣ ಬೇಕು! ಅದಕ್ಕಾಗಿ ಅವಳು ಕೇಳಿದಷ್ಟು ಹಣ ಸೇಡುವ ಶ್ರೀಮಂತರು ಯಾರೇ ಆಗಿರಲಿ ಅವರ ಜೊತೆ ಹನಿಮೂನ್‌ಗೆ ಹೋಗುತ್ತಾಳೆ.

ಅರ್ಥವಾಗಿದೆ ತಾನೆ?

ಸೂರ್ಯಪ್ರಕಾಶ ತಲೆಯಾಡಿಸಿದನು.

ರಾಜೇಂದ್ರ ಕಲ್ಮಾಡಿ ''ಇವಳಿಗೆ ತನ್ನ ಚಟ ಚಪಲ ತೀರಿಸಿಕೊಳ್ಳಲು, ಮಜಾ ಮಾಡಲು ತುಂಬಾ ಹಣ ಬೇಕು. ಮುಖ್ಯವಾಗಿ ಡ್ರಗ್ಸ್‌ಗೆ ವಿಪರೀತ ತುಂಬಾ ಹಣ ಬೇಕು. ಅದಕ್ಕಾಗಿ ನನ್ನಂತಹವರ ಜೊತೆ ಮೋಸದ ಆಟ ಆಡಿ ಬ್ಲಾಕ್ ಮೇಲ್ ಮಾಡಿ ಎಂಭತ್ತು ಲಕ್ಷಕ್ಕೆ ಡಿಮ್ಯಾಂಡ್ ಮಾಡುತ್ತಿದ್ದಾಳೆ.''

ಸೂರ್ಯಪ್ರಕಾಶ ''ಅಂದರೆ... ನಿಮ್ಮ ಜೊತೆ ಆಕೆಗೆ ಸೆಕ್ಸ್ ಲಿಂಕ್ ಇತ್ತು. ಆ ಮಿಲನದ ದೃಶ್ಯವನ್ನು ವೀಡಿಯೋ ಕವರೇಜ್ ಮಾಡಿ ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ ಅಲ್ವ? ಶುಭಶ್ರೀ ಸಹ ಅದೇ ರೀತಿ ಮಾಡಿರಬೇಕು. ನೀವು ಮುವತ್ತೈದರ ಪ್ರಾಯ ದಾಟಿದ್ದರು, ಶ್ರೀಮಂತಿಕೆ ಬೇಕಾದಷ್ಟು ಇದ್ದರೂ ಸಹ ನೀವು ಯಾಕೋ ಮದುವೆ ಆಗಿಲ್ಲ. ಆದರೂ ಬಲು ಅಪರೂಪದ ಚೆಲುವೆಯರನ್ನು ಸೆಲೆಕ್ಟ್ ಮಾಡಿಕೊಂಡು ಆಸೆ ತೀರಿಸಿಕೊಳ್ಳುತ್ತಿದ್ದೀರ. ನಿಮ್ಮಿಂದ ಹಣ ಕೀಳಲು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ'' ಎಂದು ಹೇಳಿ ಅವರ ಕೈ ಅದುಮುತ್ತಾ ''ಸಾರ್... ಈಗ ನೀವು ಹೇಳಿರುವಂತೆ ರೂಪಕಲಾ ದಂತ್ರಿನ ಕೊಲೆ ಮಾಡ್ತೀನಿ. ಆದರೆ ಇನ್ನು ಮುಂದೆ ಕಾಲ್‌ಗರ್ಲ್‌ಗಳ ರೀತಿ ಬದುಕ್ತಿರೋ ಇಂತಹ ಅಪಾಯಕಾರಿ ಚೆಲುವೆಯರ ಸಹವಾಸ ಮಾಡಬೇಡಿ.''

ರಾಜೇಂದ್ರ ಕಲ್ಮಾಡಿ ಅವನ ಕಡೆ ಒಂದು ಸಲ ನೋಡಿ ಗಾಢವಾಗಿ ನಿಟ್ಟುಸಿರುಬಿಟ್ಟರು.

ಸೂರ್ಯಪ್ರಕಾಶ ''ಸಾರ್... ನೀವು ಬೇಗ ನಿಮ್ಮ ಅಭಿರುಚಿಗೆ ಪೂರಕವಾಗಿರುವ ಚೆಲುವೆನ ಮದುವೆ ಮಾಡಿಕೊಳ್ಳಿ'' ಎಂದನು.

ಅವರಿಂದ ಪ್ರತಿಕ್ರಿಯೆ ಬರಲಿಲ್ಲ.

''ಸಾರಿ ಸಾರ್. ನಿಮ್ಮ ಪರ್ಸನಲ್ ವಿಚಾರದಲ್ಲಿ ಮಾತಾಡಿದೆ. ಬೇಜಾರಾಗಿದ್ದರೆ ಕ್ಷಮಿಸಿ.''

ಅವರು ಗಂಭೀರವಾಗಿ ''ನನ್ನ ಪರ್ಸನಲ್ ವಿಚಾರ ಇರಲಿ. ನಾನು ಹೇಳಿದ್ದನ್ನು ಗಮನ ಇಟ್ಟು ಕೇಳು'' ಎಂದು ರೂಪಕಲಾ ದಂತ್ರಿಯ ಪ್ರೋಗ್ರಾಂ ಬಗ್ಗೆ ಹೇಳಿದರು.

ಸೂರ್ಯಪ್ರಕಾಶ ಒಪ್ಪಿದನು.

ಈಗ ಐದು ಲಕ್ಷ ಕೈ ಸೇರಿದೆ.

●●●

ರೂಪಕಲಾ ದಂತ್ರಿ...!

ಅವಳ ಪ್ರಜ್ಞೆ ತಪ್ಪಿಸಿ ಎತ್ತಿಕೊಂಡು ಹೋಗುತ್ತಿರುವ ದೃಶ್ಯವನ್ನು ಮೊಬೈಲ್‌ನಲ್ಲಿ ನೋಡುತ್ತಿದ್ದಾರೆ.

ಮತ್ತೊಂದು ದೃಶ್ಯ ಏನು?

ಯಾಕೆ ಅಂತ ಗೊತ್ತಿಲ್ಲ. ಸೂರ್ಯಪ್ರಕಾಶ ಆ ಚೆಲುವೆನ (ಪ್ರಜ್ಞೆ ತಪ್ಪಿರುವ) ರೇಪ್ ಮಾಡಲಿಲ್ಲ.

ಕೊಲೆ ದೃಶ್ಯ...!

ಉದ್ದವಾದ ಚಾಕು ದೀಪದ ಬೆಳಕಲ್ಲಿ ಮಿನುಗುತ್ತಿದೆ. ಅವಳು ಮಂಚದಲ್ಲಿ ಮಲಗಿದ್ದಾಳೆ. ಈಗ ಚಾಕುವಿನಿಂದ ಅವಳ ಎದೆಗೆ ರಭಸದಿಂದ ತಿವಿದನು. ರಕ್ತ ಚಿಲ್ಲನೆ ಸಿಡಿಯಿತು.

ಕೊನೆಯ ದೃಶ್ಯ ಏನು?

ಬೇರೊಂದು ಜಾಗದಲ್ಲಿ ದಗದಗನೆ ಬೆಂಕಿ ಉರಿಯುತ್ತಿದೆ. ಸೂರ್ಯಪ್ರಕಾಶ ಪೆಟ್ರೋಲ್ ಕ್ಯಾನ್ ಹಿಡಿದು ನಿಂತಿದ್ದಾನೆ.

●●●

ನರ್ತಕಿ ಬಾರ್! ಪ್ರಶಾಂತಿ ಸಿಂಗ್ ಎಂಬ ಗಗನಸಖಿಯನ್ನು ಎಲ್ಲಿ, ಯಾವ ರೀತಿ ಹೇಗೆ ಕೊಲೆ ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದರು.

ಇದು ಕೊನೆಯ ಕೊಲೆ.

ಫುಲ್ ಪೇಮೆಂಟ್ ಮಾಡಿದರು.

ಅನುಮಾನಕ್ಕೆ ಅವಕಾಶ ಆಗದ ರೀತಿಯಲ್ಲಿ ಅವಳನ್ನು ಕೊಲೆ ಮಾಡಿ, ಪೆಟ್ರೋಲ್ ಸುರಿದು ಸುಡುವ ದೃಶ್ಯದ ವೀಡಿಯೋ ಕ್ಲಿಪ್ ಕಳಿಸಿದನು.

ಬ್ಲಾಕ್‌ಮೇಲ್ ಲೇಡಿಯರ ನಾಟಕ ತಪ್ಪಿತು ಎಂದು ಖುಷಿಯಾಗಿದ್ದಾರೆ.

●●●

ಸೂರ್ಯಪ್ರಕಾಶನಿಗೆ ಫೋನ್ ಕಾಲ್ ಬಂದಿತು. ''ನಿನಗೆ ಒಟ್ಟು ಕೊಟ್ಟಿರುವ ಇಪ್ಪತ್ತು ಲಕ್ಷ. ಆ ಹಣವನ್ನು ಇವತ್ತು ತಂದು ಕೊಡಬೇಕು. ಇಲ್ಲದಿದ್ದರೆ ನೀನು ಮಾಡಿರುವ ಕೊಲೆಗಳ ಬಗ್ಗೆ ಪೊಲೀಸರಿಗೆ, ನೀನು ಕಳಿಸಿರುವ ವೀಡಿಯೋ ದೃಶ್ಯಗಳನ್ನು ಕಳಿಸುತ್ತೀನಿ. ಜೀವನ ಪೂರ್ತಿ ಜೈಲಲ್ಲಿ ಕೊಳೆಯಬೇಕು.''

''ಓ ಬ್ಲಾಕ್‌ಮೇಲ್ ಮಾಡುತ್ತಿದ್ದೀರ.''

''ನನ್ನ ಹಣ ನನಗೆ ಬೇಕು.''

''ನೀವು ಫೋನ್ ಮಾಡಿರೋದನ್ನು ರೆಕಾರ್ಡ್ ಮಾಡಿದ್ದೀನಿ.''

''ಅದು ನನ್ನ ಸಿಮ್ ಅಲ್ಲ. ಸತ್ತಿರುವ ವ್ಯಕ್ತಿಯ ಮೊಬೈಲ್ ನಿನ್ನ ಹತ್ತಿರ ಇತ್ತು. ಅದನ್ನು ಉಪಯೋಗ ಮಾಡಿದೆ. ಇನ್ನು ಅದು ನನ್ನ ಧ್ವನಿ ಅಂತ ಗುರುತಿಸಲು ಆಗದ ರೀತಿ ಮಾತಾಡಿದ್ದೇನೆ.''

''ಓಕೆ ನೀವು ಈಗಲೇ ಹೋಗಿ ಪೊಲೀಸರಿಗೆ ಕಂಪ್ಲೇಂಟ್ ಕೊಡಿ.''

''ನೀನು ಹಣ ಕೊಡಲ್ವ?''

''ಖಂಡಿತಾ ಇಲ್ಲ.''

''ಹಾಗಾದರೆ ಈಗಲೇ ಪೊಲೀಸರಿಗೆ ಎಲ್ಲಾ ಕಳುಸ್ತೀನಿ.''

''ಅದಕ್ಕೆ ಮೊದಲು ನಾನು ಈಗ ಕಳಿಸಲಿರುವ ವೀಡಿಯೋ ಕ್ಲಿಪ್ ನೋಡಿ.'

ಶಾಕ್... ಗ್ರೇಜ್ ಬ್ಲಾಕ್!

ಸೂರ್ಯ ಪ್ರಕಾಶ ಮತ್ತು ಆ ಮೂವರು ಚೆಲುವೆಯರು ಜೊತೆಯಲ್ಲಿ ತಿರುಗುತ್ತಿದ್ದಾರೆ. ನಗು, ನಗುತ್ತಾ ಮಾತಾಡುತ್ತಿದ್ದಾನೆ.

ನಿಜ ಸಂಗತಿ ಏನು?

ಸೂರ್ಯಪ್ರಕಾಶ ಯಾರನ್ನೂ ಕೊಲೆ ಮಾಡಿರಲಿಲ್ಲ. ಆ ರೀತಿ ದೃಶ್ಯ ಸೃಷ್ಟಿ ಮಾಡಿದ್ದನು. ''ಅವರನ್ನು ಈಗ ಅವರವರ ಮನೆಗಳಿಗೆ ಕಳಿಸುತ್ತಿದ್ದಾನೆ. ''ನನಗೆ ಹಣ ಬೇಕು ನಿಜ. ಆದರೆ ಬೇರೆಯವರ ಪ್ರಾಣ ತೆಗೆದು ಶ್ರೀಮಂತನಾಗುವ ಆಸೆ ಇರಲಿಲ್ಲ. ಗುಡ್‌ಬೈ'' ಎಂದು ಫೋನ್ ಲಿಂಕ್ ಕಟ್ ಮಾಡಿದನು.

ರಾಜೇಂದ್ರ ಕಲ್ಮಾಡಿ ಅವರಿಗೆ ಆಘಾತ ಉಂಟಾಗಿದೆ. ಮುಂದೇನು ಎಂಬ ಸಮಸ್ಯೆ ಪ್ರಶ್ನೆ ರೂಪದಲ್ಲಿ ಕಾಡುತ್ತಿದೆ.

## 8ನೇ ತರಗತಿ ಓದಿದ್ದ ನಕಲಿ ಲೋಕಾಯುಕ್ತ ಅಧಿಕಾರಿ ವಂಚಕ ಚನ್ನಕೇಶವ ರೆಡ್ಡಿ

# ನಗರಸಭೆ ಆಯುಕ್ತೆಗೆ ಕರೆ ಮಾಡಿ ಬ್ಲ್ಯಾಕ್‌ಮೇಲ್ ತಂತ್ರ

# ಬೆದರಿಸಿ ಹಣ ಸುಲಿಗೆಗೆ ಯತ್ನ; 10 ತಿಂಗಳ ನಂತರ ವಂಚಕ ಅಂದರ್!

**ಆತ 25 ವರ್ಷದ ಸ್ಪುರದ್ರೂಪಿ ತರುಣ. ಓದಿದ್ದು ಕೇವಲ 8ನೇ ತರಗತಿ ಮಾತ್ರ. ಆದರೆ ಹಿರಿಯ ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ವಿವಿಧ ಇಲಾಖೆಯ ಸರಕಾರಿ ಅಧಿಕಾರಿಗಳನ್ನು ಬೆದರಿಸಿ, ಬೆವರಿಳಿಸಿ ಹಣ ಕಿತ್ತುಕೊಳ್ಳುವ ದಂಧೆಯಲ್ಲಿ ಎಕ್ಸ್‌ಪರ್ಟ್ ಆಗಿದ್ದ ಐನಾತಿ. ಒಂದು ಸಲ ಬಳಸಿದ ಸಿಮ್ ತಿರುಗಿ ಬಳಸದೇ ಪೊಲೀಸರ ಕೈಗೆ ಸಿಗದೇ ಅಂಡಲೆಯುತ್ತಿದ್ದನು. ಕಳೆದ 10 ತಿಂಗಳ ಹಿಂದೆ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ನಗರಸಭೆ ಆಯುಕ್ತೆಗೆ ಬೆದರಿಸಿ ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಯಲು ಪ್ರಯತ್ನಿಸಿದ್ದನು. ನಗರಸಭೆ ಆಯುಕ್ತೆ ತಕ್ಷಣ ಲೋಕಾಯುಕ್ತ ಎಸ್ಪಿಯವರನ್ನು ಸಂಪರ್ಕಿಸಿ ವಿಷಯ ತಿಳಿಸಿ ನಿರ್ದೇಶನ ಪಡೆದು ಪೊಲೀಸರಿಗೆ ದೂರು ನೀಡಿದ್ದರು. ಎಸ್ಪಿ ಕುಶಾಲ್ ಚೌಕ್ಸೆ, ಹೆಚ್ಚುವರಿ ಎಸ್ಪಿ ರಾಜಾ ಕಾಸಿಂ ಇಮಾಮ್, ಡಿವೈಎಸ್ಪಿ ಶಿವಕುಮಾರ್ ನಿರ್ದೇಶನದಂತೆ ಸಿಪಿಐ ಸತ್ಯನಾರಾಯಣ ನೇತೃತ್ವದಲ್ಲಿ ಪಿಎಸ್ಐ ಗೋಪಾಲ ಮತ್ತು ಸಿಬ್ಬಂದಿಗಳು ಸೇರಿ ವಿಶೇಷ ಪರಿಶ್ರಮ ವಹಿಸಿ ನಕಲಿ ಲೋಕಾಯುಕ್ತ ಅಧಿಕಾರಿಯನ್ನು ಬಂಧಿಸಿ ಹೆಡೆಮುರಿ ಕಟ್ಟಿ ಜೈಲಿಗಟ್ಟಿರುವ ಪ್ರಕರಣ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**



ನಕಲಿ ಲೋಕಾಯುಕ್ತ ಅದಿಕಾರಿ ಚನ್ನಕೇಶವ ರೆಡ್ಡಿ

✍ ಮನ್ನಾಪೂರ

ಇದು ಹೇಳಿ-ಕೇಳಿ ಆನ್‌ಲೈನ್ ಜಮಾನಾ. ಇನ್ನಿಲ್ಲದಂತೆ ದಿನಕ್ಕೊಂದು ಹೊಸ ರೀತಿಯ ತಂತ್ರ-ಕುತಂತ್ರಗಳನ್ನು ಬಳಸಿಕೊಂಡು ಕಂಡ-ಕಂಡವರನ್ನು ವಂಚಿಸುತ್ತಿರುವ ಐನಾತಿ ಸೈಬರ್ ವಂಚಕರ ಕೃತ್ಯಗಳು ಎಗ್ಗಿಲ್ಲದೇ ವರದಿಯಾಗುತ್ತಿದೆ. ಇದರ ನಡುವೆ ಕೇವಲ 8ನೇ ತರಗತಿವರೆಗೆ ಓದಿದ್ದ ಆಂಧ್ರಪ್ರದೇಶ ಮೂಲದ 25 ವರ್ಷದ ಚನ್ನಕೇಶವ ರೆಡ್ಡಿ ಎಂಬ ಐನಾತಿ ವಂಚಕನ ಕಥೆ ಎಂತಹವರನ್ನು ದಂಗು ಬಡಿಸುತ್ತದೆ. ಈತ ಹಿರಿಯ ಲೋಕಾಯುಕ್ತರ ಹೆಸರನ್ನು ಬಳಸಿಕೊಂಡು ವಿವಿಧ ಆಯಕಟ್ಟಿನ ಇಲಾಖೆಯಲ್ಲಿರುವ ಅಧಿಕಾರಿಗಳನ್ನೇ ಟಾರ್ಗೆಟ್ ಮಾಡಿ ಅವರಿಗೆ ಬ್ಲ್ಯಾಕ್‌ಮೇಲ್ ಮಾಡಿ



ದೂರು ನೀಡಿದ ನಗರಸಭೆ ಆಯುಕ್ತೆ ಗೀತಾ ಎಂ.

ಹಣ ಸುಲಿಗೆಯ ಕೆಲಸವನ್ನು ನಿರಂತರವಾಗಿ ವಿವಿಧ ಜಿಲ್ಲೆಗಳಲ್ಲಿ ಮುಂದುವರೆಸಿಕೊಂಡು ಬಂದಿದ್ದನು. ಆದರೆ ಇತ್ತೀಚಿಗೆ ಆತನ ಗ್ರಹಗತಿಗಳು ಕೆಟ್ಟು ಕೆರ ಹಿಡಿದಾಗ ಆತ ಗೌರಿಬಿದನೂರು ನಗರ ಪೊಲೀಸರು ಬೀಸಿದ ಬಲೆಯಲ್ಲಿ ಸಿಕ್ಕು ಜೈಲು ಸೇರಿ ತಂಗಳು ಮುರಿಯುತ್ತ ಜೈಲು ಸೇರಿದ್ದಾನೆ. ಆತನ ಕಥೆ ನೀವು ಓದಬೇಕು.

**ಮಹಾ ಐನಾತಿ ಚನ್ನಕೇಶವ ರೆಡ್ಡಿ...**

ಮೈ ಮುರಿದು ನಡುಬಗ್ಗಿಸಿ ದುಡಿದು ತಿನ್ನಲಾರದ ನಾಲಾಯಕ್ ಐನಾತಿ ಚನ್ನಕೇಶವ ರೆಡ್ಡಿ ಹುಟ್ಟಾ ವಂಚಕನಾಗಿದ್ದನು. ತನ್ನ ವಿಪರೀತ ಮೋಜು-ಮಸ್ತಿಗಾಗಿ ಹೇಗಾದರೂ ಸರಿ ಹಣ ಬೇಕೆಂಬ ಧೋರಣೆ ಈತನದಾಗಿತ್ತು. ಅದಕ್ಕಾಗಿ ಸುಲಭವಾಗಿ ಹಣ ಗಳಿಸುವ ದಂಧೆಯನ್ನು ಶೋಧಿಸತೊಡಗಿದ್ದನು.

ಮೂಲತಃ ಈತನು ಆಂಧ್ರಪ್ರದೇಶ ರಾಜ್ಯದ ಸತ್ಯಸಾಯಿ ಜಿಲ್ಲೆಯ ಚಿರುವುಮುನೆಪ್ಪ ಗಾರಿಪಲ್ಲಿಯ ನಿವಾಸಿಯಾಗಿದ್ದನು. ಈತ ಮನೆಯಲ್ಲಿ ತಂದೆ-ತಾಯಿಗಳ ಮಾತು ಕೇಳದೆ ಉಂಡಾಡಿ ಗುಂಡನಾಗಿ ದುಷ್ಟ ಸ್ನೇಹಿತರ ಸಂಗ ಮಾಡಿಕೊಂಡು ಅಂಡಲೆಯುತ್ತಿದ್ದನು. ಈತ ಹೇಗಾದರೂ ಮಾಡಿ ಹಣ ಗಳಿಸಬೇಕೆಂಬ ದುರಾಸೆಯಿಂದ ತನ್ನ ಕೆಲವು ಸ್ನೇಹಿತರೊಡನೆ ಸೇರಿಕೊಂಡು ಬೆಂಗಳೂರಿಗೆ ಬಂದಿಳಿದನು. ಧನುಷ ರೆಡ್ಡಿ ಎಂಬುವ ಆಂಧ್ರ ಮೂಲದ ಐನಾತಿ ವಂಚಕನ ಸ್ನೇಹದಿಂದ ದುಡ್ಡು ಮಾಡುವುದು ಹೇಗೆ ಎಂದು ಕಲಿತನು.

**ಲೋಕಾಯುಕ್ತರ ಹೆಸರಿನಲ್ಲಿ ಸುಲಿಗೆ...**

ಸುಮಾರು ದಿನಗಳವರೆಗೆ ರಾಜಧಾನಿ ಬೆಂಗಳೂರಿನಲ್ಲಿ ಧನುಷ ರೆಡ್ಡಿ ಎಂಬ ವಂಚಕನ ಜತೆಗೆ ಚನ್ನಕೇಶವ ರೆಡ್ಡಿ ವಂಚನೆ ಮಾಡುವುದನ್ನು ಕರಗತ ಮಾಡಿಕೊಂಡನು. ಇಬ್ಬರು ಸೇರಿಕೊಂಡು ಬೆಂಗಳೂರಿನ ಹಿರಿಯ ಪೊಲೀಸ್ ಅಧಿಕಾರಿಗಳ ಹೆಸರನ್ನು ದುರ್ಬಳಕೆ ಮಾಡಿಕೊಳ್ಳಲು ನಿರ್ಧರಿಸಿದರು. ಆರ್‌ಟಿಓ, ಕಂದಾಯ, ನಗರಸಭೆ, ನೀರಾವರಿ, ಪಿಡಬ್ಲ್ಯುಡಿ ಇಲಾಖೆಯ ಆಯಕಟ್ಟಿನ ಹುದ್ದೆಯಲ್ಲಿರುವ ಅಧಿಕಾರಿಗಳ ಪೂರ್ವಾಪರಗಳನ್ನು ತಿಳಿದುಕೊಂಡು ಸುಲಿಗೆಗೆ ಮುಂದಾದರು. ಮೊದಲೇ ಲೋಕಾಯುಕ್ತರ ಹೆಸರು ಕೇಳಿದರೆ ಅಂಡ ಸುಟ್ಟು ಬೆಕ್ಕಿನಂತಾಗುತ್ತಿದ್ದ ಕೆಲವು ಭ್ರಷ್ಟರು ವಂಚಕರಾದ ಚನ್ನಕೇಶವ ರೆಡ್ಡಿ, ಧನುಷ ರೆಡ್ಡಿಗೆ ಹೇಳಿದಷ್ಟು ಹಣ ನೀಡಲು ಮುಂದೆ ಬರುತ್ತಿದ್ದರು. ಇಂತಹ ಅಧಿಕಾರಿಗಳಿಂದ ಹಣ ಪಡೆದುಕೊಂಡ ವಂಚಕರು ಸುಲಭವಾಗಿ ವಂಚಿಸುವ,



ಎಸ್ಪಿ ಕುಶಾಲ್ ಚೌಕ್ಸೆ

ಬ್ಲ್ಯಾಕ್‌ಮೇಲ್ ತಂತ್ರಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡರು. ಹಿರಿಯ ಲೋಕಾಯುಕ್ತ ಅಧಿಕಾರಿಗಳ ಹೆಸರು ಹೇಳಿಕೊಂಡು ರಾಜ್ಯದ ತುಂಬಾ ವಿವಿಧ ಸರಕಾರಿ ಇಲಾಖೆಯ ಅಧಿಕಾರಿಗಳನ್ನು ಸುಲಿಯಲು ಆರಂಭಿಸಿಬಿಟ್ಟರು.

**ಮಹಾನ್ ಬುದ್ಧಿವಂತ ವಂಚಕರು...**

ಐನಾತಿ ವಂಚಕರಾದ ಚನ್ನಕೇಶವ ರೆಡ್ಡಿ ಮತ್ತು ಧನುಷ ರೆಡ್ಡಿ ಇವರಿಬ್ಬರು ಐನಾತಿಗಳು ಮಹಾನ್ ಬುದ್ಧಿವಂತರಾಗಿದ್ದರು. ಮೊಬೈಲ್ ಮತ್ತು ಆನ್‌ಲೈನ್‌ನಲ್ಲಿ ತುಂಬಾ ಚತುರರು. ಇವರು ತಮಗಿರುವ ಬುದ್ಧಿವಂತಿಕೆಯನ್ನು ನ್ಯಾಯವಾಗಿ ಉಪಯೋಗಿಸಿದ್ದರೆ ಅಪಾರವಾದ ದುಡ್ಡು ಮಾಡಬಹುದಿತ್ತು. ಆದರೆ ಗಳಿಸಿದ ದುಡ್ಡನ್ನೆಲ್ಲಾ ಗುಂಡು, ತುಂಡು... ಹುಡುಗೀರ ಖಯಾಲಿಗಾಗಿ ಖರ್ಚು ಮಾಡುತ್ತಿದ್ದರು. ಐಷಾರಾಮಿ ಜೀವನಕ್ಕೆ ಜೋತುಬಿದ್ದು ಕ್ರಿಮಿನಲ್ ಲೋಕದಲ್ಲಿ ತಮಗರಿವಿಲ್ಲದಂತೆ ಸಿಲುಕಿಕೊಂಡರು.


**ಒಂದು ಸಿಮ್ ಒಂದೇ ಬಾರಿಗೆ...**

ಚನ್ನಕೇಶವ ರೆಡ್ಡಿ ಮತ್ತು ಧನುಷ ರೆಡ್ಡಿ ಎಷ್ಟೊಂದು ಚಾಣಾಕ್ಷರಿದ್ದರು ನೋಡಿ... ಯಾರದೋ ಹೆಸರಿನಲ್ಲಿ ದಾಖಲೆಗಳನ್ನು ನೀಡಿ ವಿವಿಧ ಕಂಪನಿಯ ಸಿಮ್‌ಗಳನ್ನು ಖರೀದಿಸುತ್ತಿದ್ದರು. ಅದನ್ನು ಬೆದರಿಸಿ ಬ್ಲ್ಯಾಕ್‌ಮೇಲ್ ಮಾಡಲು ಒಬ್ಬರಿಗೆ ಸಿಮ್ ಬಳಸುತ್ತಿದ್ದರು.

ಅದು ಇವರು ಸರಕಾರಿ ಅಧಿಕಾರಿಗಳ ಜತೆಗೆ ಕೇವಲ ವಾಟ್ಸಾಫ್ ಕಾಲ್ ಮಾಡಿ ತಮ್ಮ ವ್ಯವಹಾರ ಕುದುರಿಸುತ್ತಿದ್ದರು. ಎಲ್ಲೂ ಕೂಡಾ ತಮ್ಮ ಸುಳಿವು ಸಿಗದಂತೆ ಐನಾತಿ ವಂಚಕರು ಜಾಗ್ರತೆ ವಹಿಸುತ್ತಿದ್ದರು. ಹೀಗಾಗಿ ಐನಾತಿಗಳು ಕಂಡ... ಕಂಡ ಸರಕಾರಿ ಅಧಿಕಾರಿಗಳ ಸುಲಿಗೆ ಮಾಡುತ್ತಿದ್ದರು.

**ನಗರಸಭೆ ಆಯುಕ್ತೆಗೆ ಬ್ಲ್ಯಾಕ್‌ಮೇಲ್...**

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರಸಭೆಯ ಆಯುಕ್ತೆ ಗೀತಾ ಎಂ. ಅವರು ಕಾರ್ಯ ನಿರ್ವಹಿಸುತ್ತಿದ್ದರು. ಕಳೆದ ಹತ್ತು ತಿಂಗಳ ಹಿಂದೆ ವಂಚಕ, ನಕಲಿ ಲೋಕಾಯುಕ್ತ ಅಧಿಕಾರಿ ಎಂದು ಬಿಂಬಿಸಿಕೊಳ್ಳುತ್ತಿದ್ದ ಚನ್ನಕೇಶವ ರೆಡ್ಡಿ ಎಂಬಾತನು ಆಯುಕ್ತೆ ಗೀತಾ ಅವರಿಗೆ ವಾಟ್ಸಾಪ್ ಕಾಲ್ ಮಾಡಿ ತಾನು ಬೆಂಗಳೂರಿನ ಲೋಕಾಯುಕ್ತ ಕೇಂದ್ರ ಕಚೇರಿಯ ಅಧಿಕಾರಿ ಎಂದು ಪರಿಚಯಿಸಿಕೊಂಡು 'ನಿಮ್ಮ ನಗರಸಭೆಯಲ್ಲಿ ಲಕ್ಷಾಂತರ ರೂ.ಗಳ ಅವ್ಯವಹಾರವಾಗಿದ್ದು, ನಿಮ್ಮ ಮೇಲೆ ಲೋಕಾಯುಕ್ತ ಕೇಂದ್ರ ಕಚೇರಿಗೆ ದೂರು ಬಂದಿದೆ. ನಿಮ್ಮ ಕಚೇರಿ ಮೇಲೆ ರೇಡ್ ಮಾಡಲಾಗುತ್ತದೆ. ಇದರಿಂದ ನೀವು ಪಾರಾಗಬೇಕಾದರೆ ನಾವು ಹೇಳಿದಷ್ಟು ಹಣವನ್ನು ಇನ್ನರ್ಧ ಗಂಟೆಯಲ್ಲಿ ನೀಡಬೇಕು' ಎಂದು ದಬಾಯಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದಾನೆ. ಇದರಿಂದ ವಿಚಲಿತರಾಗದ ಆಯುಕ್ತೆ ತಕ್ಷಣ ಚಿಕ್ಕಮಗಳೂರಿನ ಲೋಕಾ ಕಚೇರಿ ಸಂಪರ್ಕಿಸಿ ನಡೆದ ವಿಷಯ ತಿಳಿಸಿ ಅವರ ನಿರ್ದೇಶನ ಪಡೆದುಕೊಂಡಿದ್ದಾರೆ.



ಎಎಸ್ಪಿ ರಾಜಾ ಕಾಶಿಂ ಇಮಾಮ್

**ಪೊಲೀಸರಿಗೆ ದೂರು ನೀಡಿದರು...**

ನಕಲಿ ಲೋಕಾಯುಕ್ತರ ಹೆಸರಿನಲ್ಲಿ ತನಗೆ ಬ್ಲ್ಯಾಕ್‌ಮೇಲ್ ಮಾಡಿ ಹಣಕ್ಕೆ ಬೆದರಿಕೆ ಒಡ್ಡಿದ ಪ್ರಕರಣದಲ್ಲಿ ನಗರಸಭೆ ಆಯುಕ್ತೆ ಗೌರಿಬಿದನೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದರು. ತನಗೆ ಬಂದ ವಾಟ್ಸಾಪ್ ಕರೆ ನಂಬರ್ ಕೂಡಾ ನೀಡಿದಳು. ಪಿಎಸ್ಐ ಗೋಪಾಲ ಅವರು ದೂರು ಪಡೆದುಕೊಂಡು ವಿಷಯದ ಗಂಭೀರತೆಯನ್ನು ಅರಿತುಕೊಂಡು ತಕ್ಷಣ ಸಿಪಿಐ ಸತ್ಯನಾರಾಯಣ, ಡಿವೈಎಸ್ಪಿ ಶಿವಕುಮಾರ್, ಹೆಚ್ಚುವರಿ ಎಸ್ಪಿ ರಾಜಾ ಕಾಶಿಂ ಇಮಾಮ್, ಎಸ್ಪಿ ಕುಶಾಲ್ ಚೌಕ್ಸೆ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕಾರ್ಯಾಚರಣೆಗೆ ಸಿದ್ಧರಾದರು.

**ನಕಲಿ ಲೋಕಾಯುಕ್ತ ಅಧಿಕಾರಿ ಬಂಧನ...**

ಎಸ್ಪಿ ಕುಶಾಲ್ ಚೌಕ್ಸೆ, ಹೆಚ್ಚುವರಿ ಎಸ್ಪಿ ರಾಜಾ ಕಾಶಿಂ ಇಮಾಮ್, ಡಿವೈಎಸ್ಪಿ ಶಿವಕುಮಾರ್ ಅವರ ನಿರ್ದೇಶನದಂತೆ ಸಿಪಿಐ ಸತ್ಯನಾರಾಯಣ ಅವರ ನೇತೃತ್ವದಲ್ಲಿ ಗೌರಿಬಿದನೂರು ನಗರ ಠಾಣೆ ಪಿಎಸ್ಐ ಗೋಪಾಲ ಮತ್ತು ಸಿಬ್ಬಂದಿಗಳು ವಿಶೇಷ ಪರಿಶ್ರಮ ವಹಿಸಿ ತನಿಖೆಗೆ ಇಳಿದರು. ಕಳೆದ ಹತ್ತು ತಿಂಗಳುಗಳ ಕಾಲ ಪೊಲೀಸರಿಗೆ ಸವಾಲಾಗಿದ್ದ ಪ್ರಕರಣವನ್ನು ಕೊನೆಗೂ ಉತ್ಸಾಹಿ ಮತ್ತು ಧಾಡಸಿ ಪಿಎಸ್ಐ ಗೋಪಾಲ ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ಬೇಧಿಸಿದರು.

ಅಂದುಕೊಂಡಂತೆ ಏನೂ ಆಗಿಲ್ಲವೆನ್ನುವಂತೆ ಅಂಡಲೆಯುತ್ತಿದ್ದ ಚನ್ನಕೇಶವ ರೆಡ್ಡಿಯನ್ನು ತಡಮಾಡದೇ ತಮ್ಮ ವಶಕ್ಕೆ ತೆಗೆದುಕೊಂಡರು. ಗೌರಿಬಿದನೂರು ನಗರ ಠಾಣೆಯಲ್ಲಿ ಸಿಪಿಐ ಸತ್ಯನಾರಾಯಣ, ಪಿಎಸ್ಐ ಗೋಪಾಲ ಅವರು ವಂಚಕನನ್ನು ಪೊಲೀಸ್ ಭಾಷೆಯಲ್ಲಿ ವಿಚಾರಿಸಿದಾಗ ಎಲ್ಲ ಕೃತ್ಯವನ್ನು ಗಿಳಿಪಾಠದಂತೆ ಒಪ್ಪಿಕೊಂಡನು. ತನ್ನ ಸಹಚರ ವಂಚಕನು ಪರಾರಿಯಾಗಿದ್ದು, ಆತನ ಬಗ್ಗೆಯೂ ಕೂಡಾ ಮಹತ್ವದ ಮಾಹಿತಿ ನೀಡಿದ್ದಾನೆ. ವಂಚಕ ಚನ್ನಕೇಶವ ರೆಡ್ಡಿ ಇದೀಗ ಜೈಲು ಸೇರಿ ತಂಗಳು ಮುರಿಯುತ್ತಿದ್ದಾನೆ.

# ಪಾತಕ ಪ್ರಪಂಚ

## ಅವಳೇಕೆ ಈ ರೀತಿ...?

ಅವಳು ಚೆಲುವೆಯರಲ್ಲಿ ಚೆಲುವೆ. ಇಪ್ಪತ್ತರ ಪ್ರಾಯದ, ಎತ್ತರವಾದ ನಿಲುವಿನ, ಬಲು ಆಕರ್ಷಕ ಮೈಮಾಟದ, ನಿಂಬೆಹಣ್ಣಿನ ಬಣ್ಣದ ಮೈಕಾಂತಿಯ, ಸೌಂದರ್ಯವೆಲ್ಲಾ ಮುಖದಲ್ಲಿ, ಆ ನಗುವಿನಲ್ಲಿ ತುಂಬಿರುವ ಸೌಂದರ್ಯ ದೇವತೆ.

ಕಾಲೇಜಿನ ಬ್ಯುಟಿಕ್ವೀನ್! ಅವಳನ್ನು ಒಂದು ಸಲ ನೋಡಿದರೆ ಅವಳ ಮೇಲಿಂದ ದೃಷ್ಟಿ ಬದಲಿಸಲು ಆಗುತ್ತಿರಲಿಲ್ಲ. ಅಷ್ಟರಮಟ್ಟಿಗೆ ಅವಳಲ್ಲಿ ಮಾದಕ ಸೌಂದರ್ಯ ತುಂಬಿತ್ತು.

ಅವಳೇ ಶ್ರೀಕಲಾ...! ಅವಳು ಕಾಲೇಜಿಗೆ ಬಂದರೆ ಪಡ್ಡೆ ಯುವಕರು ಅವಳ ಹಿಂದೆ-ಮುಂದೆ ತಿರುಗುತ್ತಾ ಬರುತ್ತಿದ್ದರು ಎಂಬುದು ನಿಜ.

ಅವಳು ವಾಸವಾಗಿರುವ ಮನೆಯ ಮಾಲೀಕರಿಗೆ ಸಹ ಇವಳ ಮೇಲೆ ವಿಪರೀತ ಕ್ರೇಜ್ ಇತ್ತು. ಅವಳೇನಾದರೂ ಎದುರಿಗೆ ಸಿಕ್ಕಿದರೆ, ಏನಾದರೂ ನೆಪ ತೆಗೆದು ಮಾತಾಡುತ್ತಾ, ಅವಳ ದೇಹ ಸೌಂದರ್ಯವನ್ನು ನೋಟದಲ್ಲೇ ಬೆತ್ತಲೆ ಮಾಡುತ್ತಿದ್ದರು. ಅವರು ತಮ್ಮ ಮಹದಾಸೆ ಹೇಳಿಕೊಳ್ಳುವ ಮೊದಲೇ ಜಾಗ ಖಾಲಿ ಮಾಡುತ್ತಿದ್ದಳು. ಇನ್ನು ಕಾಲೇಜಿನ ಪಡ್ಡೆಯುವಕರು ಅವಳನ್ನು ಒಲಿಸಿಕೊಳ್ಳಲು ಸರ್ಕಸ್ ಮಾಡುತ್ತಿದ್ದರು.

ಪ್ರೊಫೆಸರ್ ತಂಗವೇಲನ್. ಪ್ರಾಯ ನಲವತ್ತೈದು. ಉಳಿದವರಿಗಿಂತ ಇವಳ ಮೇಲೆ ವಿಪರೀತ ಚಪಲ, ಕ್ರೇಜ್ ಇತ್ತು.

ಅವಳು ಇಂತಹ ಕ್ರೇಜಿವಾಲಗಳ ಜೊತೆ ನಗು ನಗುತ್ತಾ ಮಾತಾಡುತ್ತಾ ವರನ್ನು ಪರೋಕ್ಷ ರೀತಿಯಲ್ಲಿ ಪ್ರಚೋದನೆ ಮಾಡುತ್ತಿದ್ದಳು.

ಶ್ರೀಕಲಾ ಬದಲಾಗಿದ್ದು ಯಾವಾಗ?

ಆ ಸನ್ನಿವೇಶ ಹೀಗಿದೆ.

ಅವಳು ರಾತ್ರಿ ಊಟ ಮಾಡಿದ ಮೇಲೆ ತನ್ನ ರೂಮಲ್ಲಿ ಇರುವ ಕಂಪ್ಯೂಟರ್ ಸಿಸ್ಟಮ್ 'ಆ್ಯಪ್' ಅಳವಡಿಸಿಕೊಂಡು ತನಗೆ ಇಷ್ಟವಾಗಿರುವ ರೋಮ್ಯಾಂಟಿಕ್ ಫಿಲಂ ನೋಡುತ್ತಿದ್ದಳು.

ಈ ರಾತ್ರಿ ನೋಡಿದ್ದ ಫಿಲಂ ಯಾವುದು?

ಅವಳಲ್ಲ... ಮತ್ತೊಬ್ಬಳು...!

ಅವಳು ಈ ಸಿನಿಮಾದ ದೃಶ್ಯ ನೋಡಿ ಪ್ರಭಾವಿತಳಾದಳು. ಮತ್ತೊಂದು ದಿವಸ ಅದೇ ಸಿನಿಮಾವನ್ನು ನೋಡಿದ್ದಳು. ಆ ಸಿನಿಮಾದ ಕೆಲವು ದೃಶ್ಯಗಳು ಇವಳ ಮನಸ್ಸಿನ ಮೇಲೆ ಪರಿಣಾಮ ಉಂಟು ಮಾಡಿತ್ತು. ನಿದ್ರೆ ಆವರಿಸಿತ್ತು.

ಬೆಳಗಿನ ಆರು ಗಂಟೆ. ಅವಳಿಗೆ ಎಚ್ಚರವಾಯಿತು. ಅವಳ ಮುಖದ ಮೇಲೆ ಮಂದಹಾಸ ಮೂಡಿತು. ಅವಳು ರೆಡಿಯಾದಳು. ವಿಲಕ್ಷಣವಾದ-ವಿಚಿತ್ರವಾದ ಬಯಕೆ ಅವಳನ್ನು ಪ್ರಚೋದನೆ ಮಾಡಿತ್ತು.

●●●

ಪ್ರೊಫೆಸರ್ ತಂಗವೇಲನ್ ಅವಳಿಗೆ ಫೋನ್ ಮಾಡಿ ಹುಟ್ಟುಹಬ್ಬದ ಶುಭಾಶಯ ಹೇಳಿದ್ದರು.

ಅವಳು ನಗುತ್ತಾ ''ಥ್ಯಾಂಕ್ ಯೂ ಸೋ ಮಚ್ ಸಾರ್'' ಎಂದಳು.

''ಶ್ರೀಕಲಾ ನೀನು ಕೋಪ ಮಾಡಿಕೊಳ್ಳದಿದ್ದರೆ ನಿನ್ನ ಬರ್ತ್‌ಡೇನಾ ನಾನು ಸಲಬರೇಟ್ ಮಾಡ್ತೀನಿ.''

''ಅದು ನಿಜವಾಗಿ ನನ್ನ ಅದೃಷ್ಟ ಸಾರ್.''

ಅವರು ಉತ್ಸಾಹದಿಂದ ''ಹಾಗಾದರೆ ಸಂಜೆ ಮನೆಗೆ ಬರ್ತೀಯ. ನಾನು ಬರ್ತ್‌ಡೇ ಕೇಕ್‌ಗೆ ಆರ್ಡರ್ ಮಾಡ್ತೀನಿ'' ಎಂದರು.

ಅವಳು ರಾಗವಾಗಿ 'ಬರೀ ಕೇಕಾ...'' ಎಂದಳು.

''ನೀನು ನಾನ್‌ವೆಜ್ ತಿನ್ತೀಯ?''

''ನಂಗೆ ತುಂಬಾ ಇಷ್ಟ.''

''ಡ್ರಿಂಕ್ಸ್ ತಗೋತೀಯ.''

ಅವಳು ವ್ಯಂಗ್ಯ ಮತ್ತು ಕೋಪದಿಂದ ''ನೀವು ಪ್ರೊಫೆಸರ್ ಆಗಿದ್ದೀರ. ನಿಮ್ಮ ಸ್ಟುಡೆಂಟ್ ಈ ರೀತಿ ಡ್ರಿಂಕ್ಸ್ ಆಫರ್ ಮಾಡೋದು ಸರಿನಾ ಸಾರ್.''

''ಐಯಾಮ್ ಸಾರಿ ಶ್ರೀಕಲಾ.''

''ಓಕೆ ಇಟ್ಸ್ ಆಲ್ ರೈಟ್. ನಾನು ತುಂಬಾ ಗ್ಲಾಮರಸ್ ಆಗಿ ಡ್ರೆಸ್ ಮಾಡಿಕೊಂಡು ಬರ್ತೀನಿ. ನೀವು ಎಲ್ಲಾ ರೆಡಿ ಮಾಡಿ ಸಾರ್.''

''ನೀನು ಎಷ್ಟು ಹೊತ್ತಿಗೆ ಬರ್ತೀಯ?''

''ಸಂಜೆ ಆರು ಗಂಟೆಗೆ ಬಂದು ಎಂಟು ಗಂಟೆತನಕ ಇರ್ತೀನಿ.''

''ಒಂದು ಗಂಟೆ ಜಾಸ್ತಿ ಇರು ಪ್ಲೀಸ್.''

''ಒಂಭತ್ತು ಗಂಟೆ ತನಕನಾ?''

''ಹೌದು ಶ್ರೀಕಲಾ.''

''ಆಗಲಿ ಸಾರ್. ಊಟ ಮಾಡಿದ ಮೇಲೆ ನೀವೇ ನನ್ನ ಕಾರಲ್ಲಿ ಮನೆಗೆ ಡ್ರಾಪ್ ಮಾಡಬೇಕು.''

''ಆಗಲಿ ಶ್ರೀಕಲಾ.''

''ಓಕೆ ಸಾರ್ ಬರ್ತೀನಿ.''

●●●

ಆರು ಗಂಟೆ ಮುಗಿದು ಐವತ್ತು ನಿಮಿಷಗಳಾಗಿವೆ. ಆದರೆ ಶ್ರೀಕಲಾ ಬಂದಿಲ್ಲ.

ಅವರು ಬೇಸರ, ಅಸಹನೆಯಿಂದ ಹತ್ತು ಸಲ ಫೋನ್ ಮಾಡಿದ್ದರು.

ಅವಳು ಫೋನ್ ಲಿಂಕ್ ಕಟ್ ಮಾಡುತ್ತಿದ್ದಳು.

ರಾತ್ರಿ ಏಳೂವರೆ.

ಅವಳೇ ಫೋನ್ ಮಾಡಿದ್ದಳು.

''ಸಾರಿ ಸಾರ್... ನನ್ನ ತಾತ ಬಾತ್‌ರೂಮಲ್ಲಿ ಜಾರಿ ಬಿದ್ದು ಕಾಲು ಫ್ರಾಕ್ಚರ್ ಆಗಿದೆ. ಅವರನ್ನು ನರ್ಸಿಂಗ್ ಹೋಂಗೆ ಕರ್ಕ್ಕೊಂಡು ಹೋಗಿ ಟ್ರೀಟ್‌ಮೆಂಟ್ ಕೊಡಿಸಿದೆ.''

''ಹಾಗಾದರೆ ಈಗ ಬರ್ತೀಯ?''

''ನಾನಿನ್ನೂ ನರ್ಸಿಂಗ್ ಹೋಂನಲ್ಲಿದ್ದೀನಿ.''

ಅವರಿಗೆ ನಿರಾಸೆಯಾಯಿತು.

''ಹಾಗಾದರೆ ಇವತ್ತು ಬರೋಲ್ವ?''

''ನಿಮಗೆ ನಿರಾಸೆ ಆಗಿರೋದಕ್ಕೆ ನಾನು ಸಾರಿ ಹೇಳ್ತೀನಿ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿ ನಗಲಾರಂಭಿಸಿದಳು.

ಅದು ಅವಳ ಮನೆ.

ಬೆಡ್‌ರೂಮಲ್ಲಿ ಅವಳ ಗೆಳತಿಯರು ಇದ್ದಾರೆ. ಅವರಿಗೆ ಎಲ್ಲಾ ಹೇಳಿದ್ದಾಳೆ. ಒಬ್ಬಳು ಗೆಳತಿ ''ಏ... ನೀನು ತಡವಾಗಿಯಾದರೂ ಸಹ ಅವರ ಮನೆಗೆ ಹೋಗಬೇಕಿತ್ತು. ಪಾಪ... ಆ ಮುದಿ ಪ್ರೊಫೆಸರ್‌ಗೆ ಎಲ್ಲಾ ರೆಡಿ ಮಾಡಿದ್ದರು. ನಿನ್ನ ಜೊತೆ ತುಂಬಾ ಹತ್ತಿರದಿಂದ ಎರಡು ಗಂಟೆ ಕಳೆಯಬೇಕು ಮತ್ತು ಏನಾದರೂ ನೆಪ ಮಾಡಿಕೊಂಡು ನಿನ್ನ ಮೈ ಸ್ಪರ್ಶ ಮಾಡಿ ಚಪಲ ತೀರಿಸಿಕೊಳ್ಳಬೇಕು ಅಂತ ತುಂಬಾ ಕನಸು ಕಂಡಿದ್ದರು ಅಂತ ಕಾಣುತ್ತೆ.''

ಶ್ರೀಕಲಾ ನಗುತ್ತಾ ''ಆ ಪ್ರೊಫೆಸರ್ ಎಷ್ಟೊಂದು ಪರದಾಡಿರುತ್ತಾರೆ ಅಂತ ನಾನು ಕಲ್ಪನೆ ಮಾಡಿಕೊಂಡು ಖುಷಿಪಡುತ್ತಿದ್ದೀನಿ'' ಎಂದು ನಗಾಡಿದಳು.

''ಪಾಪ... ಆ ಬಡ ಪ್ರಾಣಿ ಊಟ ಮಾಡದೆ ನಿನ್ನ ಮೇಲಿನ ಆಸೆಯಿಂದ ಒದ್ದಾಡುತ್ತಾ ಅವರು ಕಂಠಪೂರ್ತಿ ಕುಡಿದು ಮಲಗುತ್ತಾರೆ.''

ಶ್ರೀಕಲಾ ಪುನಹ ನಗಾಡಿದಳು.

●●●

ಮರುದಿವಸ ಗ್ಲಾಮರಸ್ ಆಗಿ ಕಾಣುವ ರೀತಿ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ಬಂದಳು.

ಅವಳು ಕಾಲೇಜಿಗೆ ಬರುತ್ತಿರುವಾಗ ಸಮೀಪದಲ್ಲಿ ಕಾರೊಂದು ಬಂದು ನಿಂತಿತು.

ಪ್ರೊಫೆಸರ್ ತಂಗವೇಲನ್.

ಅವಳು ಮೋಹಕವಾಗಿ ನಗುತ್ತಾ ''ಸಾರಿ ಸಾರ್. ಪಾಪ... ನೆನ್ನೆ ನಿಮಗೆ ತುಂಬಾ ಬೇಜಾರಾಗಿರಬೇಕು ಅಲ್ವ?''

''ರಾತ್ರಿ ಪೂರ್ತಿ ನಿದ್ದೆ ಮಾಡಿಲ್ಲ.''

''ನನಗದು ಗೊತ್ತು ಸಾರ್.''

''ಶ್ರೀಕಲಾ ಬಾ ನನ್ನ ಜೊತೆ ಕಾರಲ್ಲಿ ಕೂರು. ಇನ್ನೂ ಅರ್ಧ ಗಂಟೆ ಟೈಂ ಇದೆ. ಒಳ್ಳೆಯ ಹೋಟೆಲ್‌ಗೆ ಹೋಗಿ ತಿಂಡಿ ತಿನ್ನೋಣ.''

''ಸಾರಿ ಸಾರ್.

ಅವರು ನಿರಾಸೆಯಿಂದ ''ಯಾಕೆ?''

''ನಾನು ಈಗಾಗಲೇ ತಿಂಡಿ ತಿಂದಿದ್ದೀನಿ. ನಾನು ನಿಮ್ಮ ಜೊತೆ ಕಾಲೇಜಿಗೆ ಬರೋದನ್ನ ಯಾರಾದರೂ ನೋಡಿದರೆ ಅದೇ ಅಬ್ಬರದ ಪ್ರಚಾರ ಆಗುತ್ತೆ.''

''ನನಗೆ ನಿನ್ನ ಜೊತೆ ಎಲ್ಲಿಗಾದರೂ ಅಂದರೆ ಬ್ಯುಟಿಫುಲ್ ಪ್ಲೇಸ್‌ಗೆ ಹೋಗಿಬರೋಣ. ಆಗ ಬೇರೆಯವರೂ ನೋಡುತ್ತಾರೆ ಅನ್ನೋ ಭಯ ಇರೋಲ್ಲ.''

ಅವಳು ನಗುತ್ತಾ ''ನೀವು ಎಲ್ಲಿಗೆ ಕರೆದರೂ ಬರ್ತೀನಿ ಸಾರ್.''

''ನಿಜವಾಗಿ ಬರ್ತೀಯ?''

''ಖಂಡಿತಾ ಬರ್ತೀನಿ.''

''ಹಾಗಾದರೆ ಊಟಿಗೆ ಹೋಗಿ ಎರಡು ದಿವಸ ಇದ್ದುಬರೋಣ.''

''ಆಗಲಿ... ಆಗಲಿ ಸಾರ್. ಖಂಡಿತಾ... ಖಂಡಿತಾ ನಾನು ಬರ್ತೀನಿ.''

''ಈ ಶನಿವಾರ ಮತ್ತು ಭಾನುವಾರ ಹೋಗಿಬರೋಣ. ಓಕೆ ತಾನೆ?''

''ಹಂಡ್ರೆಡ್ ಪರ್ಸೆಂಟ್ ಓಕೆ.''

●●●

ಶ್ರೀಕಲಾ ಈ ಸಂಗತಿಯನ್ನು ಗೆಳತಿಯರಿಗೆ ಹೇಳಲಿಲ್ಲ. ಅವಳು ಈಗ ಸಿನಿಮಾ ನೋಡುತ್ತಿದ್ದಾಳೆ. ಅದೇ ಸಿನಿಮಾ!

ಆ ದೃಶ್ಯ ಇವಳನ್ನು ಹಿಡಿದಿಟ್ಟಿದೆ.

ಅವಳು ನಗುತ್ತಿದ್ದಾಳೆ.

ಆ ಸಿನಿಮಾದ ದೃಶ್ಯವನ್ನು ಇವಳು ಅದೇ ರೀತಿ ಅಳವಡಿಸಿಕೊಳ್ಳಲು ಪ್ಲಾನ್ ಮಾಡುತ್ತಿದ್ದಾಳೆ.

●●●

ಶುಕ್ರವಾರ ಸಂಜೆ.

ಅವಳು ಶುಕ್ರವಾರ ಕಾಲೇಜಿಗೆ ಬಂದಿರಲಿಲ್ಲ ಮತ್ತು ಅವರ ಫೋನ್ ಕಾಲ್ ಅಟೆಂಡ್ ಮಾಡಲಿಲ್ಲ.

ನಾಳೆ ಬೆಳಿಗ್ಗೆ ಊಟಿಗೆ ಹೋಗುವ ಪ್ರೋಗ್ರಾಂ ಬಗ್ಗೆ ಮಾತಾಡಬೇಕಿತ್ತು. ಆದರೆ... ಆದರೆ ಇವಳು ಅಟೆಂಡ್ ಮಾಡುತ್ತಿಲ್ಲ. ಅವಳ ಮೇಲೆ ಅಪನಂಬಿಕೆ ಉಂಟಾಗುತ್ತಿದೆ. ಅವಳು ಬರ್ತ್‌ಡೇ ಫಂಕ್ಷನ್‌ಗೆ ಕೈ ಕೊಟ್ಟ ರೀತಿಯಲ್ಲಿ ಅವಳು ಈ ಸಲ ಸಹ ಮಾತಾಡುತ್ತಾಳೆ.

ರಾತ್ರಿ ಎಂಟು ಗಂಟೆ. ಪ್ರೊಫೆಸರ್ ಬೇಸರ, ಅಸಹನೆ, ಕೋಪದಿಂದ ಚಡಪಡಿಸುತ್ತಿರುವಾಗ ಫೋನ್ ಕಾಲ್ ಬಂದಿತು. ಶ್ರೀಕಲಾ ಫೋನ್ ಮಾಡಿರೋದ್ರಿಂದ ಅವರಿಗೆ ಆತುರ, ಆತಂಕ ಉಂಟಾಗಿದೆ. ಅವರೀಗ ''ಶ್ರೀಕಲಾ ನಾಳೆ ಊಟಿಗೆ ಬರ್ತೀಯ ತಾನೇ?''

''ಸಾರಿ ಸಾರ್... ಊಟಿಗೆ ಬರೋಕ್ಕೆ ಆಗೋಲ್ಲ. ಅದು... ಅದು ನಮ್ಮ ಮನೆಯವರಿಗೆ ಅನುಮಾನ ಬರುತ್ತೆ. ಆ ರೀತಿ ನಿಮ್ಮ ಜೊತೆ ಎರಡು-ಮೂರು ದಿವಸ ಬೇರೆ ದೂರದ ಊರುಗಳಿಗೆ ಬರಲು ಆಗೋಲ್ಲ.''

ಅವರಿಗೆ ತುಂಬಾ ಬೇಜಾರಾಗಿದೆ. ನಿರಾಸೆ ತೀವ್ರವಾಗಿದೆ. ''ಶ್ರೀಕಲಾ... ಯಾಕೆ ಈ ರೀತಿ ಆಸೆ ತೋರಿಸಿ ಆಟ ಆಡಿಸುತ್ತಿದ್ದೀಯ.''

''ನಾನು ಆಟ ಆಡಿಸುತ್ತಿಲ್ಲ. ಸಂಸಾರಸ್ಥರ ಮನೆಯ ಹೆಣ್ಣುಮಗಳು ನಾನು. ಆ ರೀತಿ ಬರಲು ಆಗೋಲ್ಲ. ಊಟಿಗೆ ಯಾಕೆ ಹೋಗ್ಬೇಕು. ಒಂದು ದಿವಸ ಪೂರ್ತಿ... ಐ... ಮೀನ್... ಸಂಜೆ ಆರು ಗಂಟೆಯಿಂದ ರಾತ್ರಿ ಪೂರ್ತಿ ನಿಮ್ಮ ಜೊತೆ ಇರ್ತೀನಿ.''

ಅವರ ಮೈ ಪುಳಕಗೊಂಡಿತು.

ರೋಮಾಂಚನ ಉಂಟಾಗುತ್ತಿದೆ.

''ಏ... ಶ್ರೀಕಲಾ... ಇದು... ಇದು ನಿಜ ತಾನೇ... ನೀನು ನಿಜವಾಗಿ... ನಿಜವಾಗಿ ನನ್ನ ಜೊತೆ ನೈಟ್ ಪೂರ್ತಿ ಇರ್ತೀಯ.''

''ಪ್ರಾಮೀಸ್ ಇರ್ತೀನಿ.''

''ಹತ್ತಿರದ ಯಾವ ಊರಿಗೆ...'' ಎಂದು ಹೇಳುತ್ತಿರುವಾಗಲೇ ಅವಳು ''ಪ್ರೊಫೆಸರ್ ಸಾರ್... ನಾನು ಹೇಳಿದ ಜಾಗಕ್ಕೆ ನೀವು ಬರಬೇಕು. ಅಲ್ಲೇ ಬರ್ತ್‌ಡೇಗೆ ನಾನೇ ರೆಡಿ ಮಾಡಿರುತ್ತೀನಿ. ಮನೆ ವಿಳಾಸನ ಸ್ಕೆಚ್ ಹಾಕಿ ಕಳುಸ್ತೀನಿ. ನೀವು ರಾತ್ರಿ ಏಳು ಗಂಟೆಗೆ ಬಂದರೆ ಸಾಕು. ನಾನು ಆರು ಗಂಟೆಗೆ ಹೋಗಿ ಎಲ್ಲಾ ರೆಡಿ ಮಾಡಿರುತ್ತೀನಿ'' ಎಂದಳು.

''ಎಲ್ಲಾ ಅಂದ್ರೇನು?''

''ಬರ್ತ್‌ಡೇ ಅರೇಂಜ್‌ಮೆಂಟ್, ನಿಮಗೆ ಡ್ರಿಂಕ್ಸ್, ನಾನ್ ವೆಜ್ ಊಟ ಎಲ್ಲಾ... ಎಲ್ಲಾ ರೆಡಿ ಮಾಡಬೇಕಲ್ಲ.''

''ನಿನಗೆ ಏನು ಗಿಫ್ಟ್ ತರಲಿ?''

''ಹತ್ತು ಸಾವಿರ ಕ್ಯಾಶ್ ಬೇಕು.''

''ಬರೀ ಹತ್ತು ಸಾವಿರನಾ.''

''ಎಲ್ಲಾ ಖರ್ಚು ಸೇರಿ ಅಷ್ಟು ಆಗುತ್ತೆ. ಅವರ ವಿನಹ ನಿಮ್ಮಿಂದ ಒಂದು ರೂಪಾಯಿ ಸಹ ನಿರೀಕ್ಷೆ ಮಾಡೋಲ್ಲ.''

''ಅರೆ... ಯಾಕೆ ಶ್ರೀಕಲಾ.''

''ಯಾಕೆ ಅಂತ ನಾಳೆ ಗೊತ್ತಾಗುತ್ತೆ. ನೀವು ಕೊಡಲಿರುವ ಹತ್ತು ಸಾವಿರ ರೂಪಾಯಿ ಯಾತಕ್ಕೆ ಖರ್ಚಾಗಿದೆ ಅಂತ ಲೆಕ್ಕ ಕೊಡ್ತೀನಿ.''

ಅವರು ''ಛೇ... ಛೇ... ಅದೆಲ್ಲಾ ಯಾಕೆ? ಲಕ್ಷ ರೂಪಾಯಿ ಬೇಕಾದರೂ ನಿನಗೆ ಕೊಡ್ತೀನಿ'' ಎಂದು ಉತ್ಸಾಹದಿಂದ ಹೇಳಿದರು.

''ಲಕ್ಷ ರೂಪಾಯಿ ನನಗ್ಯಾಕೆ ಕೊಡ್ತೀರ?''

''ಯಾಕೆ ಅಂದ್ರೆ ಅದು... ಅದು...''

''ನನಗೆ ಗೊತ್ತಿದೆ. ನಿಮಗೆ ಏನು ಬೇಕೋ ಅದು ನಿಮಗೆ ಸಿಗುತ್ತೆ.''

''ಅಂದರೆ... ಅಂದರೆ...''

''ಬಿಡಿಸಿ ಹೇಳುವ ಅಗತ್ಯ ಇಲ್ಲ.''

●●●

ರಾತ್ರಿ ಏಳು ಗಂಟೆ. ಪ್ರೊಫೆಸರ್ ತಂಗವೇಲನ್ ಟ್ರಿಮ್ ಆಗಿ ಡ್ರೆಸ್ ಮಾಡಿಕೊಂಡು ಕಾರಲ್ಲಿ ಅವಳು ಹೇಳಿದ್ದ ಆ ಮನೆಗೆ ಬಂದರು. ನಗರದ ಹೊರವಲಯದಲ್ಲಿರುವ (ಮಲ್ಲಿಕಪುರ) ಎಂಬ ಗ್ರಾಮದ ಹೊರವಲಯದಲ್ಲಿರುವ (ಹೊಸಬಡಾವಣೆ) ಕೆಲವೇ ಮನೆಗಳಲ್ಲಿ ಒಂದನ್ನು ಶ್ರೀಕಲಾ ಬಾಡಿಗೆಗೆ ಪಡೆದಿದ್ದಳು. ಮನೇಲಿ ನಂಬಿಕೆ ಬರುವಂತೆ ಸುಳ್ಳು ಹೇಳಿ ಈ ರಾತ್ರಿ ಮನೆಗೆ ಬರೋದು ತಡವಾಗುತ್ತೆ ಎಂದಿದ್ದಳು.

ಪ್ರೊಫೆಸರ್ ತುಂಬಾ ಉದ್ವೇಗಗೊಂಡಿದ್ದಾರೆ. ಇನ್ನು ಕೆಲವೇ ನಿಮಿಷಗಳಲ್ಲಿ ಚೆಲುವೆ ಶ್ರೀಕಲಾಳ ಸೌಂದರ್ಯವನ್ನು ರಾತ್ರಿ ಪೂರ್ತಿ ಅನುಭವಿಸಬೇಕೆಂಬ ಉದ್ವೇಗ ಉಂಟಾಗಿದೆ. ಕಾಲಿಂಗ್ ಬಝರ್ ಅನ್ನು ಪ್ರೆಸ್ ಮಾಡಿದರು.

ಕ್ಷಣಗಳು ಉರುಳುತ್ತಿವೆ.

ಬಾಗಿಲು ತೆರೆದುಕೊಂಡಿತು.

ಎದುರಿಗೆ ನಿಂತಿರುವ ಮೋಹಕ ಸೌಂದರ್ಯದ ಚೆಲುವೆ ಶ್ರೀಕಲಾಳನ್ನು ಕಂಡು ರೋಮಾಂಚನವಾಯಿತು. ಅವಳು ನಗುತ್ತಾ ''ಪ್ರೊಫೆಸರ್ ಸಾರ್‌ಗೆ ಹೃದಯ ಪೂರ್ವಕ ಸ್ವಾಗತ'' ಎಂದು ತನ್ನ ಬಲು ಸುಂದರವಾದ ಕೈ ಅನ್ನು ಮುಂದೆ ಚಾಚಿದಳು. ಅವರ ಕೈ ಹಿಡಿದಳು. ಮೈ ಝುಂ ಎಂದಿತು. ಬಲು ಮೃದುವಾಗಿದೆ. ಬೆಚ್ಚನೆಯ ಅನುಭವ ಆಗುತ್ತಿದೆ. ಅವಳು ಕೈ ಹಿಡಿದುಕೊಂಡೇ ಒಳಗೆ ಕರೆದುಕೊಂಡು ಬಂದಳು. ಡಬ್ಬಲ್ ಬೆಡ್‌ರೂಮಿನ ಮನೆ ಬಲು ಸೊಗಸಾಗಿದೆ.

ಆ ದೃಶ್ಯ ಕಂಡಿತು. ಫ್ರಂಟ್ ಹಾಲ್ ಟೇಬಲ್ ಮೇಲೆ

☞ 14

13 ☞

ಇದೆ ಬರ್ತ್‌ಡೇ ಕೇಕ್...! ಡೈನಿಂಗ್ ಟೇಬಲ್ ಮೇಲೆ ಡ್ರಿಂಕ್ಸ್, ನಾನ್‌ವೆಜ್ ಐಟಂಗಳ ಹಾಟ್‌ಬಾಕ್ಸ್ ರೆಡಿ ಯಾಗಿದೆ.

ಅವಳು ನಗುತ್ತಾ "ಸಾರ್... ಈಗ ಮೊದಲು ಕೇಕ್ ಕಟ್ ಮಾಡಿಸಿ" ಎಂದಳು.

ಅವರು ಪುನಹ ಅವಳ ಕೈ ಹಿಡಿದು ಎಳೆದು ತಬ್ಬಿಕೊಂಡು ಕೇಕ್ ಕಟ್ ಮಾಡಿಸಿ ಹ್ಯಾಪಿ ಬರ್ತ್‌ಡೇ ಹೇಳಿದರು. ಕೇಕ್ ತಿನ್ನಿಸಿದರು. ಅವಳೂ ಸಹ ತಿನ್ನಿಸಿದಳು. ರಸಿಕ ಪ್ರೊಫೆಸರ್ ಸರ್ರನೆ ಅವಳ ಬೆರಳುಗಳನ್ನು ಬಾಯೊಳಗೆ ಎಳೆದುಕೊಂಡಳು. ನಾಲಿಗೆ ಸ್ಪರ್ಶ ಮಾಡಿದರು. ಮೃದುವಾಗಿ ಕಚ್ಚಿದರು. ಅವಳು ಸರ್ರನೆ ತನ್ನ ಕೈ ಎಳೆದುಕೊಂಡು ದೂರ ಸರಿದಳು. ಎಂಜಲಿನಿಂದ ಅಂಟಾಗಿರುವ ಬೆರಳನ್ನು ಸೆರಗಿನ ತುದಿಯಿಂದ ಒರೆಸಿ ಕೊಂಡಳು. ಅವರು ಈಗ ಹತ್ತಿರ ಬಂದರು. ಅವಳ ಮುದ್ದಾದ ಮುಖ ಮತ್ತು ರಸ ತುಂಬಿರುವ ಜೇನು ತುಟಿಗಳ ಕಡೆ ಈಗ ಆಸೆಯಿಂದ ನೋಡಿದರು.

ಅವಳು ನಗುತ್ತಿದ್ದಾಳೆ.

ಹತ್ತಿರ ಬಂದು ಅವಳ ಕೈ ಹಿಡಿದು "ಪ್ಲೀಸ್ ಶ್ರೀಕಲಾ..." ಎಂದು ಅವಳ ತುಟಿಗಳ ಮೇಲೆ ಬೆರಳಾಡಿಸಿದರು. ಅವಳು ಅವರ ಕೈ ದೂರ ತಳ್ಳಿದಳು. ಅವರಿಗೆ ನಿರಾಸೆಯಾಯಿತು.

ಅವಳೀಗ ದೂರ ಸರಿದು ಡೈನಿಂಗ್ ಟೇಬಲ್ ಹತ್ತಿರ ಹೋಗಿ ಎರಡು ಬ್ರಾಂಡ್‌ನ ಸ್ಪೆಷಲ್ ವಿಸ್ಕಿಯನ್ನು ಕಾಕ್‌ಟೈಲ್ ಮಾಡಿದಳು. ಅದಕ್ಕೆ ತಂಪು ಪಾನೀಯ ಬೆರೆಸಿ ಅವರ ಮುಂದೆ ಹಿಡಿದು "ಮೊದಲು ಗುಂಡು-ತುಂಡಿನ ಪಾರ್ಟಿ ಆಗಲಿ. ಆಮೇಲೆ..." ಎಂದು ತುಂಬಾ ಸೆಕ್ಸಿಯಾಗಿ ನಗಾಡಿದಳು.

ಅವರು ಪರವಶವಾದರು. ಅವಳು ಕೊಟ್ಟ ಗ್ಲಾಸನ್ನು ಪಡೆದು "ಏ ಶ್ರೀಕಲಾ ನೀನು... ನೀನು ವಿಸ್ಕಿ ಕುಡಿಯೋಲ್ವ" ಎಂದು ಕೇಳಿದರು.

'ನಾವಿಬ್ಬರೂ ಕುಡಿದರೆ ಆ ಆಟದಲ್ಲಿ ಮಜಾ ಇರೋಲ್ಲ. ನಾನು ಆಮೇಲೆ ಎರಡು ಪೆಗ್ ತಗೋತೀನಿ. ಈಗ ನೀವು ಕುಡಿದು ಸುಖ ಅನುಭವಿಸಿ" ಎಂದಳು.

ಅವರು ಕುಡಿಯುತ್ತಿದ್ದಾರೆ. ಅವಳು ಅವರ ಜೊತೆ ಕುಳಿತಿದ್ದಾಳೆ. ಅವಳ ಕೈ ಹಿಡಿದು ಬೆರಳುಗಳನ್ನು ಸವರುತ್ತಾ ಕುಡಿಯುತ್ತಿದ್ದಾರೆ. ಅವಳೇ ಪುನಹ ಗ್ಲಾಸಿಗೆ ವಿಸ್ಕಿಯನ್ನು ಬಗ್ಗಿಸಿದಳು. ಈಗಾಗಲೇ ಅವರಿಗೆ ಸ್ವಲ್ಪ ಅಮಲು ತಲೆಗೆ ಹತ್ತಿದೆ. ಆದರೆ ಅವಳು ಪೆಗ್ಗುಗಳ ಸಂಖ್ಯೆ ಜಾಸ್ತಿ ಮಾಡಿದಳು.

ಅವರು ಅಮಲಿನಲ್ಲಿ ಅವಳನ್ನು ತಬ್ಬಿಕೊಳ್ಳಲು ಪ್ರಯತ್ನ ಮಾಡಿದರು. ಆದರೆ ಅವಳು ನಗು, ನಗುತ್ತಲೇ ಅವರ ಆಲಿಂಗನಕ್ಕೆ ಸಿಗದಂತೆ ಜಾರಿಕೊಂಡಳು. ಅವರು ಎದ್ದು ನಿಂತರು. ತೇಲುಗಣ್ಣು ಮಾಡುತ್ತಿದ್ದಾರೆ. ನಿಂತಲ್ಲೇ ತೂರಾಡು ತ್ತಿದ್ದಾರೆ. ಅವಳು ಅವರನ್ನು ತಬ್ಬಿಕೊಂಡು ರೂಮಿಗೆ ಕರೆದು ಕೊಂಡು ಬಂದು ಮಂಚದ ಮೇಲೆ ಕೂರಿಸಿದರು. ಅವರು ಅವಳನ್ನು ಎಳೆದುಕೊಳ್ಳಲು ಪ್ರಯತ್ನ ಮಾಡುತ್ತಿರುವಾಗಲೇ ಲೈಟ್ ಆಫ್ ಆಯಿತು.

ಕತ್ತಲೋ... ಕತ್ತಲು. ಇವರಿಗೆ ವಿಪರೀತ ಅಮಲೇರಿದೆ. ಅವಳನ್ನು ಎಳೆದುಕೊಂಡರು. ಅವಳನ್ನು ತಬ್ಬಿಕೊಂಡು ಮುದ್ದಾಡುತ್ತಿದ್ದಾರೆ. ವಿದ್ಯುತ್ ದೀಪ ಬೆಳಗಿತು. ಅಮಲಿನ ಜೊತೆ ಕಾಮ ಕೆರಳಿರೋದ್ರಿಂದ ಮತ್ತು ಎದುರುಗಿನ ಎಲ್ಲಾ ದೃಶ್ಯವೂ ಮಂಜು, ಮಂಜಾಗಿ ಕಾಣುತ್ತಿರುವುದರಿಂದ, ತಮ್ಮ ತುಂಬಾ ದಿನಗಳ ಆಸೆಯನ್ನು ಪೂರೈಸಿಕೊಳ್ಳುತ್ತಿದ್ದಾರೆ. ಬರಗೆಟ್ಟವರಂತೆ, ಕಾಮು ಸನ್ನಿ ಹಿಡಿದವರಂತೆ ಅವಳ ಅಂಗ-ಅಂಗಗಳನ್ನು ಮುದ್ದಾಡಿ, ತಡಕಾಡುತ್ತಾ ಮನಸೋ ಇಚ್ಛೆ ಮಜಾ ಮಾಡಿ ಸ್ವರ್ಗ ಸುಖ ಅನುಭವಿಸುತ್ತಿದ್ದಾರೆ.

ಮೊದಲ ಮಿಲನೋತ್ಸವ ಮುಗಿದಿದೆ. ಅವರಿಗೆ ಇನ್ನೂ ಅಮಲು ಇಳಿದಿರಲಿಲ್ಲ. ಅವಳೀಗ ವಿಸ್ಕಿ ಗ್ಲಾಸನ್ನು ಅವರ ತುಟಿಗಳ ಹತ್ತಿರ ಹಿಡಿದಳು. ಆ ಕ್ಷಣದಲ್ಲಿ ಅವರು ಗ್ಲಾಸನ್ನು ಪಡೆದುಕೊಂಡು ಚಿಕನ್ ತಿನ್ನಿಸುತ್ತಿದ್ದಾಳೆ. ಪುನಹ ಅಮಲೇರಿತು. ಅವಳು ಅವರ ಮೈ ಸವರಿದಳು. ಪುನರ್ ಮಿಲನ ಆಯಿತು. ಅವರಿಬ್ಬರು ಬೆಳಗಿನ ಜಾವದತನಕ ಮಿಲನೋತ್ಸವ ನಡೆಸಿದರು.

ಬೆಳಗಿನ ಎಂಟು ಗಂಟೆ. ಪ್ರೊಫೆಸರ್ ತಂಗವೇಲನ್‌ಗೆ ಎಚ್ಚರವಾಯಿತು. ರಾತ್ರಿ ವಿಪರೀತ ಕುಡಿದಿದ್ದರಿಂದ ತಲೆ ಸಿಡಿಯುತ್ತಿರುವ ರೀತಿ ಫೀಲಿಂಗ್ ಆಗುತ್ತಿದೆ. ಅವರು ಹೊರಳುತ್ತಾ ಎದ್ದು ಕುಳಿತಾಗ ಕಂಡು ಬಂದಿದ್ದೇನು?

ರಾತ್ರಿ ಅವಳು... ಶ್ರೀಕಲಾ ಉಟ್ಟಿದ್ದ ಸೀರೆ, ರವಿಕೆ, ಒಳ ಉಡುಗಳು ಮಂಚದ ಮೇಲೆ ಹರಡಿಕೊಂಡಿರುವ ರೀತಿ ಬಿದ್ದಿದೆ. ಅವರು ಆ ಒಳ ಉಡುಪುಗಳನ್ನು ಎತ್ತಿಕೊಂಡು ನಗಾಡಿದರು. 'ಏ ಶ್ರೀಕಲಾ... ನೀನು ಮಹಾ ಸೌಂದರ್ಯವತಿ ಎಂಬ ಅಹಂಕಾರದಿಂದ ನನ್ನನ್ನು ತುಂಬಾ ಗೋಳಾಡಿಸಿಬಿಟ್ಟೆ. ಆದರೆ ರಾತ್ರಿ ಪೂರ್ತಿ ನಿನ್ನ ಸೌಂದರ್ಯವನ್ನು ಅನುಭವಿಸಿ ಸ್ವರ್ಗ ಕಂಡಿದ್ದೇನೆ' ಎಂದುಕೊಳ್ಳುತ್ತಾ "ಎಲ್ಲಿ... ಎಲ್ಲಿ... ಶ್ರೀಕಲಾ ಎಲ್ಲಿ" ಎಂದು ಎದ್ದು ತೂರಾಡುತ್ತಲೇ ಎಲ್ಲಾ ಕಡೆ ನೋಡಿದರು. ಬಟ್ಟೆಗಳು ಇಲ್ಲೇ ಇರುವಾಗ ಅವಳು ಹೇಗೆ ಮನೆಗೆ ಹೋದಳು?

ಈ ಮನೇಲಿ ಬೇರೆ ಯಾರೂ ಇಲ್ವ? ಶ್ರೀಕಲಾ ಬೇರೊಂದು ಸೆಟ್ ಬಟ್ಟೆಗಳನ್ನು ತಂದಿದ್ಲಾ? ನನಗೆ ಹೇಳದೆ ಯಾಕೆ ಒಬ್ಬಳೇ ಹೊರಟು ಹೋದ್ಲು? ಏನಾದರೂ ಆಗಲಿ, ಇನ್ನೊಂದು ಸಲ, ಹಗಲಿನ ವೇಳೆ, ಗುಂಡು ಹಾಕದೆ ಅವಳ ಸೌಂದರ್ಯವನ್ನು ನಗ್ನ ಶೃಂಗಾರತೆಯಿಂದ ನೋಡುತ್ತಾ ಅನುಭವಿಸಬೇಕು ಎಂದುಕೊಂಡರು.

●●●

ಆ ದಿವಸ ಕಾಲೇಜಿಗೆ ಹೋಗಲಿಲ್ಲ. ಹಿಂದಿನ ದಿನ ಅನುಭವಿಸಿದ್ದ ಸುಖದ ಗುಂಗಿನಲ್ಲಿ ಮೈಮೇಲೆತ್ತಿದ್ದರು.

ಮಧ್ಯಾಹ್ನ ಕುಡಿದರು.

ರಾತ್ರಿ ಸಹ ಕುಡಿದು ಮಲಗಿದರು.

●●●

ಮತ್ತೊಂದು ದಿನ ಕಳೆದಿದೆ. ಪ್ರೊಫೆಸರ್ ತಂಗವೇಲನ್ ಕಾಲೇಜಿಗೆ ಬಂದಿದ್ದಾರೆ. ಕಾಲೇಜಿನ ಕಾರಿಡಾರ್‌ನಲ್ಲಿ ಅವಳು ಎದುರಾದಳು. ಆಕರ್ಷಕವಾಗಿ ಕಾಣುತ್ತಿರುವ ಅವಳ ಜೊತೆ ಯಲ್ಲಿ ಗೆಳತಿಯರು ಇರಲಿಲ್ಲ. ಅವರೀಗ ಸ್ವಲ್ಪ ಹತ್ತಿರ ಬಂದು ಅವಳ ಮುಖ ನೋಡಿ ನಗಾಡಿದರು. ವಳೂ ಸಹ ನಕ್ಕಳು.

ಆ ನಗುವಿನಲ್ಲಿ ವ್ಯಂಗ್ಯ ಮತ್ತು ಅಪಹಾಸ್ಯದ ಛಾಯೆ ತುಂಬಿದೆ. ದೂರದಲ್ಲಿ ಲೆಕ್ಚರರ್ಸ್ ಮತ್ತು ವಿದ್ಯಾರ್ಥಿಗಳು ಬರುತ್ತಿರೋದನ್ನ ಕಂಡು ಅವರಿಬ್ಬರು ದೂರಾದರು.

ಮಧ್ಯಾಹ್ನ ಲಂಚ್ ಬ್ರೇಕ್ ಸಮಯದಲ್ಲಿ ಶ್ರೀಕಲಾಳಿಗೆ ಫೋನ್ ಮಾಡಿದರು. ಅವಳು ಅಟೆಂಡ್ ಮಾಡಿ ನಗುತ್ತಾ "ನೀವು ಫೋನ್ ಮಾಡಿರೋದು ನಂಗೆ ತುಂಬಾ ಖುಷಿಯಾಗಿದೆ."

"ಶ್ರೀಕಲಾ ನೀನು ಎಲ್ಲಿದ್ದೀಯ?"

"ಕಾಲೇಜಿನ ಕ್ಯಾಂಟೀನ್‌ನಲ್ಲಿ."

"ಹತ್ತಿರದಲ್ಲಿ ಯಾರೂ ಇಲ್ಲಾ ತಾನೆ?"

ಅವಳು ನಗುತ್ತಾ "ಇಲ್ಲ ಸಾರ್" ಎಂದಳು.

"ಇವತ್ತು ಸಂಜೆ ಯಾವುದಾದರೂ ಸಿನಿಮಾಕ್ಕೆ ಹೋಗಿ, ಸ್ಟಾರ್ ಹೋಟೆಲ್‌ನಲ್ಲಿ ಊಟ ಮಾಡಿ ಒಂದೆರಡು ಗಂಟೆ ಜಾಲಿಯಾಗಿದ್ದು ಬರೋಣ. ನೀನು ಬರುತ್ತೀಯ ತಾನೆ?"

ಅವಳು ವ್ಯಂಗ್ಯವಾಗಿ ನಗುತ್ತಾ "ಓ... ಧಾರಾಳವಾಗಿ ಬರ್ತೀನಿ" ಎಂದಳು.

ಅವರು ಉತ್ಸಾಹದಿಂದ "ನನಗೊಂದು ಆಸೆ ಇದೆ ಶ್ರೀಕಲಾ" ಎಂದರು.

"ರಾತ್ರಿ ಎಲ್ಲಾ ಆಸೆ ತೀರಿಸಿಕೊಂಡಿದ್ದೀರಲ್ಲ ಸಾರ್."

"ಸುಖದ ಅನುಭವ ಆಗಿದೆ. ನೀನು ವಿಪರೀತ ಕುಡಿಸಿದ್ದೆ. ನಿನ್ನ ಸೌಂದರ್ಯನ ಬೆಳಕಿನಲ್ಲಿ ನೋಡುತ್ತಾ ಅನುಭವಿಸಬೇಕು."

"ಅದಕ್ಕೆ ಮೊದಲು ರಾತ್ರಿ ಮಿಲನೋತ್ಸವ ವೀಡಿಯೋ ರೆಕಾರ್ಡ್ ಮಾಡಿ ಕಳಿಸಿದ್ದೇನೆ. ನೀವು ಏಕಾಂತದಲ್ಲಿ ಅದನ್ನು ನೋಡಿ ಆಮೇಲೆ ಎಂಜಾಯ್ ಮಾಡುವ ಪ್ರೋಗ್ರಾಂ ಬಗ್ಗೆ ಮಾತಾಡೋಣ."

ಅವರು ಗಾಬರಿಯಿಂದ "ಅದನ್ನೆಲ್ಲಾ ಯಾಕೆ ವೀಡಿಯೋ ಕವರೇಜ್ ಮಾಡಿದೆ. ಅದು... ಅದನ್ನ ಆಕಸ್ಮಿಕವಾಗಿ ಯಾರಾದರೂ ನೋಡಿದರೆ ನಿನ್ನ ಭವಿಷ್ಯ ಮತ್ತು ನನ್ನ ಗೌರವ ಹಾಳಾಗುತ್ತದೆ."

"ಪರಿಣಾಮದ ಬಗ್ಗೆ ಆಮೇಲೆ ತಲೆಕೆಡಿಸಿ ಕೊಂಡರಾಯಿತು. ನೀವು ವೀಡಿಯೋ ನೋಡಿ."

"ಆಗ ಲೈಟ್ ಆಫ್ ಮಾಡಿದ್ದೆ ಅಲ್ವ? ವೀಡಿಯೋ ಕವರೇಜ್ ಹೇಗೆ ಸಾಧ್ಯ ಆಯ್ತು?"

"ಎರಡು ನಿಮಿಷಗಳ ನಂತರ ಲೈಟ್ ಆನ್ ಆಯ್ತು?'

ಅವರು ಗಾಬರಿ, ಗೊಂದಲದಿಂದ "ನಾನು ನಿನ್ನನ್ನು ಬಿಡದೆ ತಬ್ಬಿಕೊಂಡು ಉರುಳಾಡುತ್ತಿದ್ದೆ. ಲೈಟ್ ಆನ್ ಮಾಡಲು ಹೇಗೆ ಸಾಧ್ಯ ಆಯ್ತು?"

"ಇದು ಗೊತ್ತಾಗಲೇಬೇಕಾ?"

"ಹೌದು... ಗೊತ್ತಾಗಬೇಕು."

"ಹಾಗಾದರೆ ಈ ವೀಡಿಯೋ ದೃಶ್ಯ ನೋಡಿದರೆ ಎಲ್ಲಾ ಅರ್ಥ ಆಗುತ್ತೆ" ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದಳು.

●●●

ರಾತ್ರಿ ಒಂಬತ್ತು ಗಂಟೆ! ಪ್ರೊಫೆಸರ್ ತಂಗವೇಲನ್ ಕುಡಿಯುತ್ತಾ ಸಿಗರೇಟ್ ಸೇದುತ್ತಿದ್ದಾರೆ. ಅವರಿಗೇನೋ ಅನುಮಾನ ಬರುತ್ತಿದೆ. ಅನುಮಾನಕ್ಕೆ ಸ್ಪಷ್ಟವಾದ ರೂಪ ಇರಲಿಲ್ಲ. ಮೊಬೈಲ್ ಮೆಸೇಜ್ ಲೈಟ್ ಬ್ಲಿಂಕ್ ಆಯಿತು. ಶ್ರೀಕಲಾ ವೀಡಿಯೋ ಕ್ಲಿಪ್ ಅನ್ನು ವಾಟ್ಸಾಪ್ ಮಾಡಿದ್ದಾಳೆ. ಅವರು ಓಪನ್ ಮಾಡಿ ನೋಡುತ್ತಿದ್ದಾರೆ. ಕ್ಷಣಗಳು ಉರುಳುತ್ತಿವೆ.

ಮೊಬೈಲ್ ಅನ್ನು ಎಸೆದರು. ಅದು ಗೋಡೆಗೆ ಬಡಿದು ಗ್ಲಾಸ್ ಸಿಡಿಯಿತು. ಸೀಸೆಯನ್ನು ಎತ್ತಿಕೊಂಡು ಡ್ರೈ ವಿಸ್ಕಿಯನ್ನು ಕುಡಿದರು. ಮಂಚದ ಮೇಲೆ ಬೋರಲಾಗಿ ಬಿದ್ದಿದ್ದಾರೆ.

●●●

ಪ್ರೊಫೆಸರ್ ತಂಗವೇಲನ್ ರಜಾ ಹಾಕಿದ್ದಾರೆ. ಒಂದು ವಾರ ರಜಾ ಹಾಕಿ ತಮ್ಮ ಊರಿಗೆ ಹೋಗಿದ್ದಾರೆ ಎಂಬ ಸುದ್ದಿ ಇವಳಿಗೂ ತಿಳಿಯಿತು. ಅವಳು ವ್ಯಂಗ್ಯವಾಗಿ ನಗಾಡಿದಳು. ಇವಳ್ಯಾಕೆ ನಗುತ್ತಿದ್ದಾಳೆ? ಪ್ರೊಫೆಸರ್ ರಜಾ ಹಾಕಿ ಊರಿಗೆ ಹೋದರೆ ಇವಳು ನಗಬೇಕೆ? ಇವಳಿಗೆ ತಾನೇ ಸೌಂದರ್ಯವತಿ ಎಂಬ ಅಹಂಕಾರ ತಲೆಗೇರಿದೆ ಎಂದುಕೊಂಡರು.

●●●

ಎರಡು ವಾರಗಳಿಂದ ಸೂರ್ಯತೇಜ ಎಂಬ ಕಾಲೇಜಿನ ವಿದ್ಯಾರ್ಥಿ ಇವಳ ಬಗ್ಗೆ ತಲೆಕೆಡಿಸಿಕೊಂಡು ಫೋನ್ ಮಾಡುತ್ತಿರುತ್ತಾರೆ ಮತ್ತು ಅವಳನ್ನು ಭೇಟಿ ಮಾಡಲು, ಅವಳ ಮನೆಯ ಹತ್ತಿರ ಮತ್ತು ತಿರುಗಾಡುವ ಜಾಗದಲ್ಲಿ ನಿಂತು ಕಾಯುತ್ತಿರುತ್ತಾನೆ.

ಅವಳು ಇವನ ಕಡೆ ನೋಡಿ ಮುಖ ಗಂಟು ಮಾಡಿಕೊಳ್ಳುತ್ತಾಳೆ. ಒಂದು ಸಲ ಎಚ್ಚರಿಕೆ ನೀಡಿದ್ದಳು. ಆದರೂ ಅವನು ಬದಲಾಗಲಿಲ್ಲ. ರಾತ್ರಿ ವೇಳೆ ಫೋನ್ ಮಾಡಿ ಅವಳ ನಿದ್ದೆ, ನೆಮ್ಮದಿ ಹಾಳು ಮಾಡುತ್ತಿದ್ದನು.

ಅಂತಿಮವಾಗಿ ಅವನು ಹೇಳಿದ್ದೇನು?

ಆತ್ಮಹತ್ಯೆ ಬೆದರಿಕೆ...!

ಶ್ರೀಕಲಾ ನಿನಗೆ ಗೊತ್ತಿದೆ. ನಾನು ಒಂದು ವರ್ಷದಿಂದ ನಿನಗಾಗಿ ಹಂಬಲಿಸುತ್ತಿದ್ದೇನೆ. ನನಗೆ ನೀನು ಬೇಕು. ನೀನು ಪ್ರೀತಿ-ಪ್ರೇಮ-ಕಾಮ ಎಲ್ಲಾ ನನಗೆ ಬೇಕು. ನೀನು ನನ್ನವಳಾಗಬೇಕು. ನಾಳೆ ರಾತ್ರಿ ನಮ್ಮಿಬ್ಬರ ಮಿಲನ ಆಗಬೇಕು. ಇಲ್ಲದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ತೀನಿ. ಅದಕ್ಕೆ ಮೊದಲು ನಾನು ಪತ್ರ ಬರೆದಿಡುತ್ತೇನೆ. ಶ್ರೀಕಲಾಳ ಜೊತೆ ನನಗೆ ಸೆಕ್ಸ್ ಸಂಬಂಧ ಇತ್ತು. ಇತ್ತೀಚೆಗೆ ಅವಳು ನನ್ನಿಂದ ದೂರಾಗಿ ಬೇರೆ ಯುವಕರ ಜೊತೆ ತಿರುಗುತ್ತಿದ್ದಾಳೆ. ಆದ್ದರಿಂದ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಅಂತ ಬರೀತೀನಿ. ಎಲ್ಲರಿಗೂ ಈ ನಂಬಿಕೆ ಸಾಮಾನ್ಯವಾಗಿದೆ.

ಆ ನಂಬಿಕೆ ಏನು ಗೊತ್ತೆ? ಸಾಯಲು ಸಿದ್ದನಾಗಿರುವ ವ್ಯಕ್ತಿ ಸುಳ್ಳು ಬರೆಯಲಾರ ಎಂದು ನಂಬಿದ್ದಾರೆ. ಇದರ ಪರಿಣಾಮ ನಿನ್ನ ಬದುಕಿನ ಭವಿಷ್ಯದ ಮೇಲೆ ಕಳಂಕ ತರುತ್ತದೆ. ಇನ್ನು ಒಂದು ಗಂಟೆಯೊಳಗೆ ಫೋನ್ ಮಾಡಿ ಪ್ರೋಗ್ರಾಂ ಫಿಕ್ಸ್ ಮಾಡಬೇಕು.

ಒಂದು ಗಂಟೆ ಕಳೆಯಿತು! ಅವಳು ಫೋನ್ ಮಾಡಿ ಎಲ್ಲಿಗೆ ಬರಬೇಕು ಎಂದು ಹೇಳಿದಳು. "ಏ... ನೀನು ಬರುವಾಗ ಹತ್ತು ಸಾವಿರ ರೂಪಾಯಿ ತರಬೇಕು."

"ಆಗಲಿ ತರ್ತೀನಿ."

●●●

'ಸೂರ್ಯತೇಜ' ಎಂಬ ಯುವಕ ಒಂದು ವಾರ ಕಾಲೇಜಿಗೆ ಬರಲಿಲ್ಲ.

ಅವನಿಗೆ ಶ್ರೀಕಲಾ ವೀಡಿಯೋ ಕ್ಲಿಪ್ ಕಳಿಸಿದ್ದಾಳೆ.

ಅದನ್ನು ನೋಡಿ ಕೋಪ, ಆವೇಶ ಮತ್ತು ಆಕ್ರೋಶಗೊಂಡಿದ್ದಾನೆ!

ಅವಳಿಗೆ ಫೋನ್ ಮಾಡಿದ್ದನು.

"ಏ ಶ್ರೀಕಲಾ... ನಿನಗೊಂದು ಗತಿ ಕಾಣಿಸದಿದ್ದರೆ ನಾನು ಸೂರ್ಯತೇಜ ಅಲ್ಲ."

ಅವಳು ಉದಾಸೀನದಿಂದ ನಗಾಡಿದಳು.

ಒಂದು ದಿನ ಆಕಸ್ಮಿಕವಾಗಿ ಪ್ರೊಫೆಸರ್ ತಂಗವೇಲನ್ ಫೋನ್ ಮಾಡಿದ್ದರು. "ಶ್ರೀಕಲಾ ನೀನು ತಪ್ಪು ಮಾಡಿದ್ದೀಯ. ಆ ತಪ್ಪಿಗೆ ಶಿಕ್ಷೆ ಆಗಲೇಬೇಕು. ನಾನು ವಿಲಕ್ಷಣ ರೀತಿಯಲ್ಲಿ ನಿನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತೀನಿ" ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದ್ದರು.

●●●

ಪೊಲೀಸರಿಗೆ ಅನಾಮಿಕನಿಂದ ಫೋನ್ ಕಾಲ್ ಬಂದಾಗ ರಾತ್ರಿ ಎಂಟು ಗಂಟೆ ಆಗಿತ್ತು. ಭಯಾನಕ ಸುದ್ದಿ! ಮನಮೋಹಕ ಚೆಲುವೆ ಶ್ರೀಕಲಾಳ ಮುಖದ ತುಂಬಾ ಬೀಳುವ ರೀತಿ ಯಾರೋ ಆಸಿಡ್ ಎರಚಿದ್ದಾರೆ.

ಆಸಿಡ್ ಪ್ರಕರಣ ನಡೆದದ್ದು ರಾತ್ರಿ ಎಂಟು ಗಂಟೆ ಸಮಯದಲ್ಲಿ. ಅವಳು ಮನೆ ಮುಂಭಾಗದಲ್ಲಿ ಇರುವ ಗಾರ್ಡನ್‌ನಲ್ಲಿ ನಿಂತು ತಂಗಾಳಿಯ ಸುಖಾನುಭವ ಮಾಡಿ ಕೊಳ್ಳುತ್ತಿದ್ದಾಗ, ಯಾರೋ ಗೇಟನ್ನು ತಳ್ಳಿಕೊಂಡು ಮುಖ, ಮೈಮೇಲೆ ಅಧಿಕ ಪ್ರಮಾಣದಲ್ಲಿ ಆಸಿಡ್ ಎರಚಿದ್ದರು. ಅವಳು ಸಾಯಲಿ ಎಂಬ ಉದ್ದೇಶದಿಂದ, ಅಧಿಕ ಪ್ರಮಾಣ ದಲ್ಲಿ ಸ್ನಾನ ಮಾಡಿರುವ ರೀತಿ ಸುರಿದಿದ್ದರು. ಮಗಳು ಕಿರುಚಿ ದ್ದನ್ನ ಕೇಳಿ ಒಳಗಿದ್ದ ಮನೆಯವರು ಹೊರಗೆ ಬಂದಿದ್ದರು.

ದುರಂತ ನಡೆದು ಹೋಗಿತ್ತು. ಪೊಲೀಸರು ಕೂಡಲೇ ಅಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡಿದ್ದರು. ಗಾರ್ಡನ್ ಮೂಲೆಯಲ್ಲಿ ಆಸಿಡ್ ತುಂಬಿಸಿದ್ದ ಕಬ್ಬಿಣದ ಕ್ಯಾನ್ ಮತ್ತು ಗಿಡಗಳ ನಡುವೆ ಬಿದ್ದಿದ್ದ ಮೊಬೈಲ್ ಫೋನ್!

ಸುದ್ದಿ ಸುದ್ದಿಮಾಧ್ಯಮಗಳಲ್ಲಿ ಪ್ರಸಾರ ಆಗುತ್ತಿದೆ.

ಇಬ್ಬರಿಗೆ ಶಾಕ್ ಆಗಿದೆ. ಪ್ರೊಫೆಸರ್ ತಂಗವೇಲನ್. ಸ್ಟುಡೆಂಟ್ ಸೂರ್ಯತೇಜ. ಇವಳ ಮೇಲೆ ಆಸಿಡ್ ಎರಚುವ ಉದ್ದೇಶ ಇರಲಿಲ್ಲ. ಅವಳಿಗೆ ಬೇರೆ ರೀತಿ ಬುದ್ಧಿಕಲಿಸಲು ಕ್ರೈಂ ಪ್ಲಾನ್ ಮಾಡಿದ್ದರು. ಅಷ್ಟರಲ್ಲಿ ಈ ದುರಂತ ನಡೆದಿತ್ತು. ಕೋಪ-ದ್ವೇಷ ಯಾಕೆ?

ಪ್ರೊಫೆಸರ್ ತಂಗವೇಲನ್, ಸೂರ್ಯತೇಜನಿಗೆ ಅವರ ಆಸೆ ತೀರಿಸುವುದಾಗಿ ಹೇಳಿ, ಅಮಲೇರುವಂತೆ ಕುಡಿಸಿದ್ದಳು. ತುಂಬಾ ಕುರೂಪಿ ಆಗಿರುವ ಕಾಲ್‌ಗರ್ಲ್ ಒಬ್ಬಳಿಗೆ ಹಣ ಕೊಟ್ಟು ಬುಕ್ ಮಾಡಿದಳು. ಈ ರಾಸಕ್ರೀಡೆ ನಡೆಯುವಾಗ ವೀಡಿಯೋ ಕವರೇಜ್ ಮಾಡಿಸಿದ್ದಳು. ತಾನು ಉಟ್ಟಿದ್ದ ಸೀರೆ, ಒಳ ಉಡುಪುಗಳನ್ನು ಸಡಿಲಿಸಿ ಅವರ ಪಕ್ಕದಲ್ಲಿ ಹಾಕುತ್ತಿದ್ದಳು. ಶ್ರೀಕಲಾಳನ್ನು ಅನುಭವಿಸಿದ್ದೇನೆ ಎಂಬ ನಂಬಿಕೆ ಬರಲಿ ಅಂತ ಆ ರೀತಿ ಮಾಡಿದ್ದಳು. ಒಂದು ದಿನ ಕಳೆದ ಮೇಲೆ ವೀಡಿಯೋ ಕ್ಲಿಪ್ ವಾಟ್ಸಾಪ್ ಮಾಡಿ ನಗುತ್ತಿದ್ದಳು. ಇವರಿಬ್ಬರು ಆಕ್ರೋಶ ಗೊಂಡಿದ್ದರು. ಅವಳಿಗೆ ಬುದ್ಧಿಕಲಿಸಲು ಪ್ಲಾನ್ ಮಾಡಿದ್ದರು. ಇವರಿಬ್ಬರೂ ಅಲ್ಲ. ಅಂದ ಮೇಲೆ ಮತ್ತೊಬ್ಬ ಯಾರು? ಡೆಡ್‌ಬಾಡಿ ಇದ್ದ ಜಾಗದಲ್ಲಿದ್ದ ಮೊಬೈಲ್‌ನಿಂದ ಪತ್ತೆ ಮಾಡಿದ್ದರು. ಗಂಡಸರ್ಯಾರೂ ಅಲ್ಲ!

ಇವಳ ಸೌಂದರ್ಯವನ್ನು ಹಲವಾರು ತಿಂಗಳುಗಳಿಂದ ಅಸೂಯೆ ಮತ್ತು ದ್ವೇಷದಿಂದ,, ಅಂತರ್ಯದಲ್ಲಿ ವಿಷಜ್ವಾಲೆ ತುಂಬಿಕೊಂಡಿದ್ದ ಆತ್ಮೀಯ ಗೆಳತಿ ಪ್ರಿಯಾಂಕ ಶರ್ಮಾ...!

ಆಸಿಡ್ ಕ್ಯಾನ್ ಮೇಲೆ ಮೂಡಿದ್ದ ಬೆರಳು ಗುರುತು ಪ್ರಿಯಾಂಕಳದ್ದು ಎಂಬುದು ಖಚಿತವಾಯಿತು. ಅಂದು ಕೊಂಡಂತೆ ಆಗದೆ ಅವಳ ಬದುಕಿನ ದುರಂತ ಬೇರೆ ರೀತಿ ಆಗಿದೆ.

# ಕಟ್ಟಿಕೊಂಡವಳನ್ನ ಬಿಟ್ಟು ಇನ್‌ಸ್ಟಾಗ್ರಾಮ್ ಸುಂದ್ರಿ ಜೊತೆ ಹೋಗಿ ಹೆಣವಾದ!



ವ್ಯಕ್ತಿಯೋರ್ವ ಕಟ್ಟಿಕೊಂಡವಳನ್ನ ಬಿಟ್ಟು ಇಟ್ಟುಕೊಂಡವಳ ಜೊತೆ ಹೋಗಿ ಹೆಣವಾದ್ದಾನೆ. ಹೌದು.. ಶಾಸ್ತ್ರೋಕ್ತವಾಗಿ ಮದುವೆಯಾದ ಪತ್ನಿಯನ್ನ ಬಿಟ್ಟು ಇನ್‌ಸ್ಟಾಗ್ರಾಮಲ್ಲಿ ಪರಿಚಯವಾದ ಯುವತಿ ಜೊತೆ ಹೋದವನು ಕೊಲೆಯಾಗಿದ್ದಾನೆ. ಅಕ್ರಮ ಸಂಬಂಧ ಬೆಳೆಸಿಕೊಂಡವ ಬರ್ಬರವಾಗಿ ಹತ್ಯೆಯಾಗಿದ್ದಾನೆ. ರಕ್ತದ ಮಡುವಿನಲ್ಲಿ ಮೃತದೇಹ ಪತ್ತೆಯಾಗಿದ್ದು, ಕೃತ್ಯ ನಡೆದ ನಂತರ ಇನ್‌ಸ್ಟಾಗ್ರಾಮ್ ಯುವತಿ ನಾಪತ್ತೆಯಾಗಿದ್ದು, ಇದೀಗ ಆಕೆಯ ಸುತ್ತ ಅನುಮಾನದ ಹುತ್ತ ಬೆಳೆದಿದೆ.

ಮದುವೆಯಾಗಿದ್ದರೂ ಹೆಂಡ್ತಿಯನ್ನು ಬಿಟ್ಟು ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ಸುಂದರಿ ಹಿಂದೆ ಹೋಗಿ ದುರಂತ ಅಂತ್ಯಕಂಡಿದ್ದಾನೆ. ದೊರೆಸ್ವಾಮಿ ಅಲಿಯಾಸ್ ಸೂರ್ಯ ಮೃತ ವ್ಯಕ್ತಿ. ಈತ ಮೈಸೂರು ತಾಲ್ಲೂಕಿನ ಅನುಗನಹಳ್ಳಿಯ ನಿವಾಸಿಯಾಗಿದ್ದು, ಆರೇಳು ವರ್ಷಗಳ ಹಿಂದ ಮೈಸೂರಿನ ಹಿನಕಲ್‌ನ ನಿವಾಸಿ ದೀಪಿಕಾಳ ಮದುವೆಯಾಗಿದ್ದಾನೆ. ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆದರೂ ಸಹ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ಶ್ವೇತಾ ಎನ್ನುವ ಸುಂದರಿಯ ಬಲೆಗೆ ಬಿದ್ದು ಇದೀಗ ಕೊಲೆಯಾಗಿದ್ದಾನೆ.

ಮಾರ್ಚ್ 14ರಂದು ರಾತ್ರಿ ಕೂಡ ಅನುಗನಹಳ್ಳಿಯ ತೋಟದ ಮನೆಯಲ್ಲಿ ಶ್ವೇತಾ ಹಾಗೂ ಸೂರ್ಯ ಜೊತೆಯಲ್ಲೆ ಇದ್ದರು ಆದ್ರೆ, ಬೆಳಗಾಗುವಷ್ಟರಲ್ಲಿ ರೌಡಿ ಶೀಟರ್ ಸೂರ್ಯ ಕೊಲೆಯಾಗಿದ್ದಾನೆ. ಆದ್ರೆ, ಶ್ವೇತಾ ಮಾತ್ರ ಪರಾರಿಯಾಗಿದ್ದಾಳೆ. ಇನ್ನು ಕೊಲೆಯಾಗಿರೋ ಸ್ಥಳದಲ್ಲಿ ಹೋಟೆಲ್‌ನಿಂದ ತಂದ ಆಹಾರ ಪದಾರ್ಥಗಳು ಬಿದ್ದಿವೆ. ಇನ್ನು ಪ್ರೇಯಸಿ ಶ್ವೇತಾಳಿಗೆ ಸಂಬಂಧಿಸಿದ ವಸ್ತುಗಳು ಪತ್ತೆಯಾಗಿವೆ. ಹೀಗಾಗಿ ಈ ಕೃತ್ಯದ ಹಿಂದೆ ಶ್ವೇತಾಳ ಕೈವಾಡ ಇದೆ ಎನ್ನುವ ಅನುಮಾನ ವ್ಯಕ್ತವಾಗಿದೆ.

**ಮನೆ ಬಿಟ್ಟು ಹೋಗಿದ್ದ ಹೆಂಡ್ತಿ-ತಾಯಿ**

ಸೂರ್ಯ ಹಾಗೂ ದೀಪಿಕಾ ಅನ್ಯೋನ್ಯ ಜೀವನ ಸಾಗಿಸುತ್ತಿದ್ದ ಟೈಮಲ್ಲಿ ಸೋಷಿಯಲ್ ಮೀಡಿಯಾ ಮೂಲಕ ಪರಿಚಿತಳಾದ ಶ್ವೇತಾ ಎಂಬಾಕೆ ಕುಟುಂಬದಲ್ಲಿ ಬಿರುಗಾಳಿ ಎಬ್ಬಿಸಿದ್ದಾಳೆ. ಅವಳ ಜೊತೆ ಸಂಬಂಧದಲ್ಲಿದ್ದ ಸೂರ್ಯ, ಶ್ವೇತಾಳನ್ನ ಆಗಾಗ ಮನೆಗೂ ಕರೆದಯಕೊಂಡು ಬರುತ್ತಿದ್ದನಂತೆ. ಇಬ್ಬರು ಜೊತೆ ಇರುವ ಖಾಸಗಿ ಫೋಟೋಗಳನ್ನ ಸ್ಟೇಟಸ್‌ಗೆ ಹಾಕಿದ್ದ. ಈ ವಿಷಯ ಗೊತ್ತಾದ ಮೇಲೆ ಸೂರ್ಯ ಪತ್ನಿ ದೀಪಿಕಾ, ತಾಯಿ ಪುಷ್ಪ ಮನೆ ಬಿಟ್ಟು ತವರುಮನೆ ಸೇರಿದ್ದಾರೆ.

**ಆಸ್ತಿಗಾಗಿ ಸೂರ್ಯನಿಗೆ ಶ್ವೇತಾ ಟಾರ್ಚರ್**

ಸೂರ್ಯನಿಗೆ ದಿನಗಳೆದಂತೆ ಶ್ವೇತಾ ಹಣ, ಆಸ್ತಿಗಾಗಿ ಪೀಡಿಸುತ್ತಿದ್ದಾಳೆ. ಹೀಗಾಗಿ ಆಸ್ತಿ ಮಾರಾಟ ಮಾಡೋಕೆ ಸೂರ್ಯ ಮನೆಯವರಿಗೆ ಕಿರುಕುಳ ನೀಡಿದ್ದಾನೆ. ಆದ್ರೆ ಮನೆಯವರು ಆಸ್ತಿ ಮಾರಾಟಕ್ಕೆ ಒಪ್ಪಿಗೆ ನೀಡಿಲ್ಲ, ಆದರೂ ಶ್ವೇತಾ ಆಸ್ತಿ ಮಾರಾಟ ಮಾಡಿ ಹಣ ತೆಗೆದುಕೊಂಡು ಬಾ ಬೆಂಗಳೂರಲ್ಲಿ ಸೆಟಲ್ ಆಗೋಣ ಎಂದು ಟಾರ್ಚರ್ ಕೊಡುತ್ತಿದ್ದಳು. ಈ ಬಗ್ಗೆ ಸೂರ್ಯ ಸಹ ಮನೆಯವರ ಬಳಿ ಹೇಳಿಕೊಂಡಿದ್ದನಂತೆ. ಆಗಾಗ ಕುಟುಂಬಸ್ಥರಿಗೆ ಫೋನ್ ಮಾಡಿ, ವಾಯ್ಸ್ ಮೆಸೇಜ್ ಕಳುಹಿಸಿ ಕಷ್ಟ ಹೇಳಿಕೊಳ್ಳುತ್ತಿದ್ದ.

ಆದ್ರೆ ಸೂರ್ಯ ಏನು ಹೇಳಿದ್ರು ಕುಟುಂಬಸ್ಥರು ತಲೆಕೆಡಿಸಿಕೊಂಡಿರಲಿಲ್ಲ, ಯಾಕಂದ್ರೆ, ಸೂರ್ಯ ಮನೆಯವರಿಗೂ ಪ್ರತಿನಿತ್ಯ ದುಡ್ಡು ಕೊಡಿ, ಜಮೀನು ಮಾರಾಟ ಮಾಡಿ ಎಂದು ಟಾರ್ಚರ್ ಕೊಟ್ಟಿದ್ದಾನೆ. ಅಷ್ಟೇ ಅಲ್ಲದೇ ತನ್ನ ಸ್ವಂತ ಅಕ್ಕ, ಅಮ್ಮ ಎಲ್ಲರಿಗೂ ಚಾಕು ತೋರಿಸಿ ಸಾಯಿಸೋ ಬೆದರಿಕೆ ಹಾಕಿದ್ದ. ಈ ಭಯದಿಂದ ಸೂರ್ಯ ವಿರುದ್ಧ ಜಯಪುರ ಪೊಲೀಸ್ ಠಾಣೆಯಲ್ಲಿ ಕುಟುಂಬಸ್ಥರು ಕೂಡ ದೂರು ನೀಡಿದ್ದರು. ಕೊನೆಗೆ ಆಸ್ತಿ ಹಣಕ್ಕಾಗಿ ಪೀಡಿಸಿದ್ದ ಸೂರ್ಯನ ಕಾಟ ತಾಳಲಾರದೆ ಅಕ್ಕ ಸುವರ್ಣ ತವರುಮನೆಗೆ ಬರುವುದನ್ನೇ ಬಿಟ್ಟಿದ್ದರಂತೆ.



ಸೂರ್ಯನ ಟಾರ್ಚರ್‌ನಿಂದ ನೊಂದಿದ್ದ ಕುಟುಂಬಸ್ಥರು ಯಾವುದೇ ವಿಚಾರಕ್ಕೂ ಪ್ರತಿಕ್ರಿಯೆ ನೀಡುತ್ತಿರಲಿಲ್ಲ, ಕುಟುಂಬಸ್ಥರು ಪ್ರತಿಕ್ರಿಯಿಸದಿದ್ದರೂ ಸಹ ಮಾತ್ರ ಸೂರ್ಯ ಮೆಸೇಜ್ ಮಾಡುತ್ತಿದ್ದ, ಅದಕ್ಕೆ ಸಾಕ್ಷಿ ಎಂಬಂತೆ ಶ್ವೇತಾಳಿಂದ ಆಗುತ್ತಿದ್ದ ಟಾರ್ಚರ್ ಬಗ್ಗೆ ಸೂರ್ಯ ಕಳ್ಸಿರೋ ಆಡಿಯೋ ಕೂಡ ಲಭ್ಯವಾಗಿದೆ. ನಾನೂ ಏನು ಮಾಡಿಕೊಂಡರು ಶ್ವೇತಾ ಕಾರಣ. ನಾನು ಮಾತ್ರೆ ತೆಗೆದುಕೊಳ್ಳುತ್ತದ್ದೇನೆ. ಶ್ವೇತಾಳ ಕಾಲ್ ಡೀಟೇಲ್ಸ್ ತೆಗೆಸಿದರೆ ಅವಳ ವಿಳಾಸ ಗೊತ್ತಾಗುತ್ತೆ ಎಂದು ಕೆಲದಿನಗಳ ಹಿಂದೆ ಆಡಿಯೋ ಮೆಸೇಜ್ ಕಳುಹಿಸಿದ್ದ. ಇದರಿಂದ ಸೂರ್ಯನ ತಾಯಿ ಪುಷ್ಪ, ಕೊಲೆಯನ್ನ ಶ್ವೇತಾಳೆ ಮಾಡಿದ್ದಾಳೆ ಎಂದು ಆರೋಪ ಮಾಡಿದ್ದಾರೆ.

ಒಟ್ಟಾರೆ, ಇಂತಹ ಭೀಕರ ಕೊಲೆ ಮಾಡೋಕೆ ಕೇವಲ ಶ್ವೇತಾಳಿಂದ ಮಾತ್ರ ಸಾಧ್ಯವಿಲ್ಲ, ಕೃತ್ಯಕ್ಕೆ ಶ್ವೇತಾ ಕೆಲವರು ಸಾಥ್ ಕೊಟ್ಟಿರುವ ಶಂಕೆ ಇದೆ. ಇದು ಆಸ್ತಿಗಾಗಿ ನಡೆದಿರುವ ಕೊಲೆಯಾ...? ಅಥವಾ ಇನ್ಯಾವುದಾದರೂ ಕಾರಣಕ್ಕೆ ನಡೆದಿರಬಹುದಾ...? ಎಂಬ ಪ್ರಶ್ನೆ ಪೊಲೀಸರನ್ನ ಕಾಡುತ್ತಿದ್ದು, ಶ್ವೇತಾ ಸಿಕ್ಕ ಬಳಿಕವೇ ಸಂಪೂರ್ಣ ಮಾಹಿತಿ ತಿಳಿಯಲಿದೆ. ☯

# ಕಾನೂನುಬಾಹಿರವಾಗಿ ನಡೆಸುತ್ತಿದ್ದ ನಕಲಿ ವೈದ್ಯ! ಕ್ಲಿನಿಕ್ ಸೀಜ್ ಮಾಡಿದ ಆರೋಗ್ಯ ಅಧಿಕಾರಿಗಳು!!




ಶಿವಗಂಗಾ ಕ್ಲಿನಿಕ್ ಹೊರಚಿತ್ರ



ಶಿವಗಂಗಾ ಕ್ಲಿನಿಕವ ಒಳಚಿತ್ರ

ವೈದ್ಯೋ ನಾರಾಯಣೋ ಹರಿ' ಎಂಬ ಉಕ್ತಯಂತೆ ವೈದ್ಯನಾದವನು ದೇವರಿಗೆ ಸಮಾನವಾದವನು. ಆತನು ರೋಗಿಯ ರೋಗವನ್ನು ಪರಿಹರಿಸುವಾತ ಮುಚ್ಚುಮರೆ ಮಾಡದೇ ರೋಗಿಯು ತನ್ನ ಅಂತರಂಗವನ್ನು ಬಿಚ್ಚಿಡುವುದು ಕೇವಲ ವೈದ್ಯನ ಮುಂದೊಂದೇ. ಹೀಗಾಗಿ ಆತನು ಕೇವಲ ರೋಗ ಪರಿಹಾರಕನಾಗಿರದೇ ರೋಗಿಯ ಸಹಚಿಂತಕನೂ ಆಗಿರುತ್ತಾನೆಂದು ಹೇಳಬಹುದು. ಇದೊಂದು ವೈದ್ಯರ ವೈದ್ಯಕೀಯ ಜೀವನದ ಒಂದು ಪವಿತ್ರ ಕೆಲಸ .

ಆದರೆ ಇಂತಹ ವೈದ್ಯಕೀಯ ಕ್ಷೇತ್ರಕ್ಕೆ ಮಸಿ ಬಳಿಯಲೆಂದು ಕೆಲವು ನಕಲಿ ವೈದ್ಯರು ರಾಜ್ಯದಲ್ಲಿ ನಾಯಿಕೊಡೆಗಳಂತೆ ಹಬ್ಬಿಕೊಂಡಿದ್ದು ಕಂಡು ಬರುತ್ತಿದ್ದು, ಈ ನಕಲಿ ವೈದ್ಯರು ಕೆಲವೊಂದು ಆಸ್ಪತ್ರೆಗಳಲ್ಲಿ ಕಂಪೌಂಡರ್ ಕೆಲಸ ಮಾಡಿ ನಂತರ ತಾವು ವೈದ್ಯರೆಂದು ಹೇಳಿಕೊಂಡು ಸ್ವಂತ ಕ್ಲಿನಿಕ್‌ಗಳನ್ನು ಪ್ರಾರಂಭಿಸಿ ಮುಗ್ಧ ಜನರನ್ನು ಯಾಮಾರಿಸುತ್ತಿದ್ದಾರೆ. ಇಂತಹದೇ ಒಂದು ಪ್ರಕರಣ ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ಹೊಸುರ ಗ್ರಾಮದಲ್ಲಿ ಜರುಗಿದರ ಬಗ್ಗೆ ಈ ವರದಿ.

ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ಹೊಸೂರ ಗ್ರಾಮದಲ್ಲಿ ಸುಮಾರು 19 ವರ್ಷಗಳಿಂದ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದ ನಕಲಿ ವೈದ್ಯನ ವಿರುದ್ಧ ತಾಲೂಕು ಆರೋಗ್ಯ ಅಧಿಕಾರಿಗಳು ಡಾ|| ಜಿ.ಎಸ್. ಗಲಗಲಿ ನೇತೃತ್ವದ ಒಂದು ತಂಡ ದಿನಾಂಕ 2/3/2025ರಂದು ದಾಳಿ ನಡಿಸಿ ಒಂದು ನಕಲಿ ಕ್ಲಿನಿಕ್ ಅನ್ನು ಸೀಜ್ ಮಾಡಿ ಬಂದ್ ಮಾಡಿದ್ದಾರೆ. ಹೊಸುರ ಗ್ರಾಮದಲ್ಲಿ ಕ್ಲಿನಿಕ್ ತೆರೆದು ವೈದ್ಯಕೀಯ ಸೇವೆ ಸಲ್ಲಿಸುತ್ತಲಿದ್ದ ಶಿವಾನಂದ ಮುಳ್ಳೂರ ಎಂಬ ನಕಲಿ ವೈದ್ಯ ಈತ ಮಹಾಲಿಂಗಪೂರ ಪಟ್ಟಣದವನಾಗಿದ್ದು, ಸುಮಾರು 19 ವರ್ಷಗಳಿಂದ ನಕಲಿ ವೈದ್ಯನಾಗಿ ಸೇವೆ ಸಲ್ಲಿಸುತ್ತಿದ್ದು ಈಗ ಹೊಸುರ ಗ್ರಾಮದಲ್ಲಿ ಒಂದು ಸಣ್ಣ ಕ್ಲಿನಿಕ್ ತೆರೆದು ನಡೆಸುತ್ತಿದ್ದ.

ಈ ಹಿಂದೆ ಒಂದು ಬಾರಿ ಇದೇ ಅಧಿಕಾರಿಗಳು ಈತನ ಕ್ಲಿನಿಕ್ ಅನ್ನು ಸೀಜ್ ಮಾಡಿ ಎಚ್ಚರಿಕೆ ನೀಡಿದ್ದರು. ಮತ್ತೇ ಸ್ಥಳಿಯ ಕಾಣದ ಕೈಗಳ ಮುಖಾಂತರ ಮತ್ತೇ ಕ್ಲಿನಿಕ್ ಪ್ರಾರಂಭಿಸಿದ ವಿಷಯ ಆರೋಗ್ಯಾಧಿಕಾರಿಗಳಿಗೆ ಗೊತ್ತಾಗುತ್ತಿದ್ದಂತೆ ಎಚ್ಚೆತ್ತು ಅಧಿಕಾರಿಗಳು ಮತ್ತೇ ಸೀಜ್ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ತಾಲೂಕು ಆರೋಗ್ಯ ಅಧಿಕಾರಿಗಳಾದಂತಹ ಜಿ.ಎಸ್. ಗಲಗಲಿ ಅಪ್ಪಾಜಿ ಹೂಗಾರ್ ರವಿ ಪೊತ್‌ರಾಜ್ ಇದ್ದರು. ತಾಲೂಕಿನಾದ್ಯಂತ ಈ ನಕಲಿ ವೈದ್ಯರು ಇರುವುದು ಕಂಡುಬಂದಿದ್ದು ಅಂತಹವರ ವಿರುದ್ಧವೂ ನಿಗಾವಹಿಸಿ ಆರೋಗ್ಯ ಅಧಿಕಾರಿಗಳು ಅವರ ವಿರುದ್ಧ ಕ್ರಮ ಜರುಗಿಸಬೇಕೆಂಬುದು ಸಾರ್ವಜನಿಕರ ದ್ವನಿಯಾಗಿದೆ



ಸಚಿವ ಗುಂಡೂರಾವ್

ಆರೋಗ್ಯ ಸಚಿವರೇ... ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಾದ ದಿನೇಶ್ ಗುಂಡೂರಾವ್ ಸಾಹೇಬರೆ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಈ ನಕಲಿ ವೈದ್ಯರ ಹಾವಳಿ ತಪ್ಪಿಸಲು ಸೂಕ್ತ ಮಾರ್ಗದರ್ಶನ ನೀಡಿ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಬೇಕು ಹಾಗೂ ಈ ನಕಲಿ ವೈದ್ಯರು ರಾಜ್ಯದಲ್ಲಿ ನಾಯಿಕೊಡೆಗಳಂತೆ ಹಬ್ಬಿಕೊಂಡಿದ್ದು, ಇಂತಹವರ ವಿರುದ್ಧ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ತಮ್ಮ ಇಲಾಖೆ ಅಧಿಕಾರಿಗಳು ಹಾಗೂ ತಮ್ಮ ಕರ್ತವ್ಯವಾಗಿದೆ. ಇಂತಹ ನಕಲಿ ವೈದ್ಯರನ್ನು ಕಡಿವಾಣ ಹಾಕಬೇಕೆಂಬೆಂಬುದು ಸಾರ್ವಜನಿಕರ ಕೂಗಾಗಿದೆ.

-ಮಂಜುನಾಥ ಈಶ್ವರ ಕರೋಳಿ



ಶಿವಗಂಗಾ ಕ್ಲಿನಿಕ್ ಸೀಜ್ ಮಾಡಿದ ಆರೋಗ್ಯಾಧಿಕಾರಿಗಳು

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 23.3.2025

# ಹುಡುಗಿಯರ ಎದೆ ಹಾಗೂ ಆ ಭಾಗ ನನಗಿಷ್ಟ; ವರ್ಮಾ ಮಾತಿಗೆ ನಾಚಿದ ಹುಡುಗಿ!



ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ತಮ್ಮ ವಿವಾದಾತ್ಮಕ ಹೇಳಿಕೆಗಳಿಂದ ಸುದ್ದಿ ಆಗುತ್ತಿರುತ್ತಾರೆ. ಯಾವುದೇ ವಿಚಾರದ ಬಗ್ಗೆ ಆರ್ ಜಿವಿ ತಮ್ಮದೇ ಶೈಲಿಯಲ್ಲಿ ಮಾತನಾಡುತ್ತಾರೆ. ರೇಣುಕಾಸ್ವಾಮಿ ಪ್ರಕರಣದ ಬಗ್ಗೆ ಕೂಡ ವರ್ಮಾ ಮಾತನಾಡಿದ್ದರು. ದರ್ಶನ್ ಮಾಡಿದ್ದು ಶ್ವಾನದ ಮೇಲೆ ಆನೆ ದಾಳಿ ಮಾಡಿದಂತೆ, ಸಣ್ಣ ವಿಚಾರಕ್ಕೆ ದರ್ಶನ್ ಅಂತ ನಿರ್ಧಾರ ತೆಗೆದುಕೊಳ್ಳಬಾರದಿತ್ತು ಎಂದಿದ್ದರು.

ಆಂಧ್ರ, ಸಿಎಂ ಚಂದ್ರಬಾಬು ನಾಯ್ಡು, ಡಿಸಿಎಂ ಪವನ್ ಕಲ್ಯಾಣ್ ಸೇರಿ ಕೆಲ ರಾಜಕೀಯ ಮುಖಂಡರ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ವರ್ಮಾ ಹಂಚಿಕೊಂಡಿದ್ದ ಪೋಸ್ಟ್ ವಿವಾದ ಸೃಷ್ಟಿಸಿತ್ತು. ದೂರು ದಾಖಲಾಗಿದೆ ನಿರ್ದೇಶಕ ಪೊಲೀಸ್ ವಿಚಾರಣೆ ಎದುರಿಸುವಂತಾಗಿತ್ತು. ಇದೀಗ ಹೆಣ್ಣು ಮಕ್ಕಳ ಖಾಸಗಿ ಭಾಗದ ಬಗ್ಗೆ ಮಾತನಾಡಿ ಮತ್ತೊಮ್ಮೆ ಆರ್ ಜಿವಿ ಸುದ್ದಿಯಲ್ಲಿದ್ದಾರೆ.



ಸಿಕ್ಕಾಪಟ್ಟೆ ಬೋಲ್ಡ್ ಆಗಿ ಮಾತನಾಡುವ ರಾಮಗೋಪಾಲ್ ವರ್ಮಾ ಬೋಲ್ಡ್ ಪ್ರಶ್ನೆ ಎದುರಾದರೆ ಸುಮ್ಮನಿರುತ್ತಾರೆಯೇ? ಹುಡುಗಿಯೊಬ್ಬಳ ಪ್ರಶ್ನೆಗೆ ವರ್ಮಾ ನೇರಾನೇರ ಉತ್ತರ ವೈರಲ್ ಆಗ್ತಿದೆ. ಹುಡುಗಿಯೊಬ್ಬಳು ಹೋಗಿ ಆರ್ ಜಿವಿ ಜೊತೆ ಮಾತನಾಡಿ ಫೋಟೊ ಕ್ಲಿಕ್ಕಿಸಿಕೊಂಡಿದ್ದಾಳೆ. ಬಳಿಕ ಸರ್, ನೀವು ಸಾಕಷ್ಟು ಹುಡುಗಿಯರನ್ನು ನೋಡಿದ್ದೀರಾ, ನಿಮಗೆ ಹುಡುಗಿಯರ ದೇಹದ ಯಾವ ಭಾಗ ಇಷ್ಟ ಎಂದು ಕೇಳಿದ್ದಾಳೆ.

ಹುಡುಗಿಯ ಪ್ರಶ್ನೆಗೆ ಉತ್ತರಿಸಿರುವ ಆರ್‌ಜಿವಿ ತಪ್ಪು ತಿಳಿದುಕೊಳ್ಳಲ್ಲ ಅಂದ್ರೆ ಹೇಳ್ತೀನಿ, ನಿಜ ಹೇಳಬೇಕು ಅಂದ್ರೆ ಹುಡುಗಿಯರ ಎದೆ ಹಾಗೂ ನಿತಂಬ ಅಂದರೆ ನನಗಿಷ್ಟ ಎಂದು ಖುಲ್ಲಂ ಖುಲ್ಲಾ ಹೇಳಿ ಶಾಕ್ ಕೊಟ್ಟಿದ್ದಾರೆ. ವರ್ಮಾ ಹೀಗೆ ಹೇಳುತ್ತಿದ್ದಂತೆ ಆ ಹುಡುಗಿ ನಾಚಿ ನೀರಾಗಿರುವುದನ್ನು ವೀಡಿಯೋದಲ್ಲಿ ನೋಡಬಹುದು.

ಅಂದಹಾಗೆ ಆ ಹುಡುಗಿಯ ಹೆಸರು ಪ್ರತ್ಯೂಷ. ಸೋಶಿಯಲ್ ಮೀಡಿಯಾದಲ್ಲಿ ತಮ್ಮ ರೀಲ್ಸ್ ಮೂಲಕ ಗಮನ ಸೆಳೆದಿದ್ದಾಳೆ. ರಾಮಗೋಪಾಲ್ ವರ್ಮಾ ಅವರನ್ನು ಭೇಟಿ ಮಾಡಿದ್ದು ಅವರ ಜೊತೆ ಮಾತನಾಡಿ ಸಾಕಷ್ಟು ವಿಚಾರಗಳನ್ನು ಕಲಿತಿದ್ದು ನಿಜಕ್ಕೂ ವಿಶೇಷ ಎಂದು ಆಕೆ ಸೋಶಿಯಲ್ ಮೀಡಿಯಾದಲ್ಲಿ ಬರೆದು ವೀಡಿಯೋ ಹಂಚಿಕೊಂಡಿದ್ದಾರೆ.

ಒಂದು ಕಾಲದಲ್ಲಿ ಅದ್ಭುತ ಸಿನಿಮಾಗಳನ್ನು ಕಟ್ಟಿಕೊಟ್ಟಿದ್ದ ರಾಮಗೋಪಾಲ್ ವರ್ಮಾ ಇತ್ತೀಚೆಗೆ ಸೈಲೆಂಟ್ ಆಗಿಬಿಟ್ಟಿದ್ದಾರೆ. ವಿವಾದಾತ್ಮಕ ಹೇಳಿಕೆಗಳಿಂದ ಸುದ್ದಿ ಆಗುತ್ತಿದ್ದಾರೆ. ಹೊಸ ಹೊಸ ನಾಯಕಿಯರನ್ನು ಪರಿಚಯಿಸಿ ಸಿಕ್ಕಾಪಟ್ಟೆ ಬೋಲ್ಡ್ ಹಾಡುಗಳು, ದೃಶ್ಯಗಳು ಇರುವ ಸಿನಿಮಾಗಳನ್ನು ಸುತ್ತಿಕೊಡುತ್ತಿದ್ದಾರೆ. ☯

# ನಿರ್ದೇಶಕ ಎ.ಟಿ. ರಘು ಇನ್ನಿಲ್ಲ

ರೆಬೆಲ್ ಸ್ಟಾರ್ ಅಂಬರೀಶ್ ಅಭಿನಯದ 27 ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ ನಿರ್ದೇಶಕ ಎ.ಟಿ. ರಘು ಅವರು ನಿಧನರಾಗಿದ್ದಾರೆ, ಕಳೆದ 55 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಬರಹಗಾರರಾಗಿ, ಸಹನಿರ್ದೇಶಕರಾಗಿ, ನಿರ್ದೇಶಕರಾಗಿ, ನಿರ್ಮಾಪಕರಾಗಿ ಮತ್ತು ಕಲಾವಿದರಾಗಿಯೂ ಸಹ ಸೇವೆ ಸಲ್ಲಿಸಿದ್ದ ಹಿರಿಯ ನಿರ್ದೇಶಕ ಎ.ಟಿ. ರಘು ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ರೆಬೆಲ್ ಸ್ಟಾರ್ ಅಂಬರೀಶ್ ಅಭಿನಯದ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿದ ಹೆಗ್ಗಳಿಕೆ ಇವರದ್ದು. ಇವರು ತಮ್ಮ ವೃತ್ತಿ ಬದುಕಿನಲ್ಲಿ ಆಕ್ಷನ್ ಹಿನ್ನೆಲೆಯ ಚಲನಚಿತ್ರಗಳನ್ನೇ ಹೆಚ್ಚಾಗಿ ನಿರ್ದೇಶನ ಮಾಡಿದ್ದರು. ಆದರೆ, ಇವರ ಕೊನೆಯ ದಿನಗಳು ಅಷ್ಟೊಂದು ಚೆನ್ನಾಗಿರಲಿಲ್ಲ, ನಿರ್ದೇಶಕ ಎ.ಟಿ. ರಘು ಅವರಿಗೆ 76 ವರ್ಷ ವಯಸ್ಸಾಗಿತ್ತು. ಕಳೆದ ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮೂತ್ರಪಿಂಡ ವೈಫಲ್ಯದಿಂದಾಗಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದರು. ಅಲ್ಲದೆ, ಎರಡು ಕಾಲು, ಕಣ್ಣು, ಹೃದಯದ ಶಸ್ತ್ರಚಿಕಿತ್ಸೆಗೂ ಸಹ ಒಳಗಾಗಿದ್ದರು. ತುಂಬಾ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಚಿತ್ರರಂಗದವರಲ್ಲಿ ಆರ್ಥಿಕ ನೆರವನ್ನು ಸಹ ಕೇಳಿದ್ದರು. ಎ.ಟಿ. ರಘು ಅವರು 1965ರಲ್ಲಿ ಚಿಕ್ಕ ಪಾತ್ರ ನಿರ್ವಹಿಸುವ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರು, ಆನಂತರ ಸಹ ನಿರ್ದೇಶಕನಾಗಿ, ಬರಹಗಾರನಾಗಿ, ನಿರ್ದೇಶಕನಾಗಿ ಸುಮಾರು 40ಕ್ಕೂ ಅಧಿಕ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದಾರೆ. 1994ರಲ್ಲಿ ಅವರು ನಿರ್ದೇಶಿಸಿದ 'ಮಂಡ್ಯದ ಗಂಡು' ದೊಡ್ಡ ಹೆಸರು ಮಾಡಿತ್ತು. ಆ ಚಿತ್ರ ರೆಬೆಲ್‌ಸ್ಟಾರ ಅಂಬರೀಶ್ ಅವರ ವೃತ್ತಿಬದುಕಿಗೆ ದೊಡ್ಡ ಹೆಸರು ತಂದುಕೊಟ್ಟಿತ್ತು. ☯



# ನೀ ಬರುವೆ ಅಂತ.... ಇದು ಬ್ಯಾಡ್ ಪ್ರೇಮಗೀತೆ

ಎಸ್.ಆರ್. ವೆಂಕಟೇಶ್ ಗೌಡ ನಿರ್ಮಿಸಿರುವ ಹಾಗೂ ನಕುಲ್ ಗೌಡ ನಾಯಕನಾಗಿ ನಟಿಸಿರುವ ಬಹು ನಿರೀಕ್ಷಿತ ಬ್ಯಾಡ್ ಚಿತ್ರಕ್ಕಾಗಿ ಸಾಹಿತಿ ಕವಿರಾಜ್ ಅವರು ಬರೆದಿರುವ ನೀ ಬರುವೆ ಅಂತ ನಾ ಕಾದು ಕುಂತ ಎಂಬ ಸುಂದರ ಪ್ರೇಮಗೀತೆ ಇತ್ತೀಚೆಗೆ ಜಂಕಾರ್ ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದೆ. ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಹಾಡನ್ನು ಸರಿಗಮಪ ಖ್ಯಾತಿಯ ಪೃಥ್ವಿ ಭಟ್ ಅವರು ಸುಶ್ರಾವ್ಯವಾಗಿ ಹಾಡಿದ್ದಾರೆ. ಈ ಹಾಡು ಜನಮನ ಸೂರೆಗೊಳ್ಳುತ್ತಿದ್ದು ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ನಾಯಕ ನಕುಲ್‌ಗೌಡ ಹಾಗೂ ನಾಯಕಿ ಮಾನ್ವಿತ ಹರೀಶ್ ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ನಾಯಕನ ಬರುವಿಕೆಗಾಗಿ ಕಾದು ಕುಳಿತಿರುವ ನಾಯಕಿ, ಕಾಯುವಿಕೆಯ ಆ ಸಮಯದಲ್ಲಿ ಏನೆಲ್ಲವನ್ನು ಕಲ್ಪಿಸಿಕೊಳ್ಳುತ್ತಾಳೆ ಎಂಬುದನ್ನು ಈ ಹಾಡಿನ ಮೂಲಕ ತೋರಿಸಲಾಗಿದೆ ಎಂದು ತಿಳಿಸಿರುವ ನಿರ್ದೇಶಕ ಪಿ.ಸಿ.ಶೇಖರ್, ಕಾಮ, ಕ್ರೋಧ, ಲೋಭ,ಮೋಹ ಮೊದಲಾದ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳಲ್ಲಿ ಆರು ಜನ ಕಲಾವಿದರು ಅಭಿನಯಿಸಿರುವುದು ಈ ಚಿತ್ರದ ವಿಶೇಷ ಎನ್ನುತ್ತಾರೆ.



ಈಗಾಗಲೇ ಬ್ಯಾಡ್ ಚಿತ್ರದ ಚಿತ್ರೀಕರಣ ಹಾಗೂ ಚಿತ್ರೀಕರಣ ನಂತರದ ಚಟುವಟಿಕೆಗಳು ಮುಕ್ತಾಯವಾಗಿದೆ. ಟೀಸರ್ ಮೂಲಕ ಸದ್ದು ಮಾಡುತ್ತಿರುವ ಈ ಚಿತ್ರದ ಹಾಡುಗಳು ಸಹ ಜನಪ್ರಿಯವಾಗುತ್ತಿದೆ. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನವಿರುವ ಬ್ಯಾಡ್ ಚಿತ್ರಕ್ಕೆ ನಿರ್ದೇಶಕ ಪಿ.ಸಿ.ಶೇಖರ್ ಅವರೆ ಸಂಕಲನ ಕಾರ್ಯ ನಿರ್ವಹಿಸಿದ್ದಾರೆ. ಜಿ.ರಾಜಶೇಖರ್ ಅವರ ಕಲಾ ನಿರ್ದೇಶನ ಹಾಗೂ ಶಕ್ತಿ ಶೇಖರ್ ಅವರ ಛಾಯಾಗ್ರಹಣವಿರುವ ಬ್ಯಾಡ್ ಚಿತ್ರಕ್ಕೆ ಸಚಿನ್ ಜಗದೀಶ್ವರ್ ಎಸ್ ಬಿ. ಅವರು ಸಂಭಾಷಣೆಗಳನ್ನು ಬರೆದಿದ್ದಾರೆ. ☯



# ಮಾಜಿ ಪ್ರಿಯಕರನ ಬಗ್ಗೆ ಮೌನ ಮುರಿದ ನಟಿ ಎರಿಕಾ!

ಸಿನಿಮಾ ತಾರೆಯರ ವೈಯಕ್ತಿಕ ಜೀವನದಲ್ಲಿ ಪ್ರೀತಿ, ಬ್ರೇಕಪ್, ಮದುವೆ, ವಿಚ್ಛೇದನ ಸಾಮಾನ್ಯ ಎಂಬಂತಾಗಿದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ದಿನಕ್ಕೊಂದು ಪ್ರೀತಿ-ಗಲಾಟೆ ಸುದ್ದಿಗಳು ಸದ್ದು ಮಾಡುತ್ತಿರುತ್ತವೆ. ಆದರೆ, ಕನ್ನಡದ 'ನಿನ್ನಿಂದಲೇ', 'ಬುಗುರಿ' ಸೇರಿ ತೆಲುಗು, ತಮಿಳು, ಹಿಂದಿಯಲ್ಲೂ ನಟಿಸಿರುವ ಎರಿಕಾ ಫರ್ನಾಂಡಿಸ್, ತಮ್ಮ ಖಾಸಗಿ ಜೀವನದ ಬಗ್ಗೆ ಮೊದಲಿನಿಂದಲೂ ಮೌನವಹಿಸಿದ್ದರು. ಕೆಲ ವರ್ಷಗಳಿಂದ ಹಿಂದಿ ಕಿರುತೆರೆಯಲ್ಲಿ ಬಿಜಿಯಾಗಿದ್ದು, ಮುಂಬೈನಲ್ಲಿ ಸೆಟಲ್ ಆಗಿರುವ ಅವರು, ಇದೇ ಮೊದಲ ಬಾರಿಗೆ ತಮ್ಮ ಲವ್ ಮತ್ತು ಬ್ರೇಕಪ್ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ. 'ನನ್ನ ಜೀವನದಲ್ಲಿ ಎದುರಿಸಿದ ಆಘಾತಗಳು ಮತ್ತು ಆದ ಅನುಭವಗಳೇ ನನ್ನನ್ನು ಇಂದಿನ ವ್ಯಕ್ತಿಯಾಗಿಸಿವೆ. ಪೊಲೀಸರ ಬಳಿ ಹೋದರೆ, ಅದೇ ದೊಡ್ಡ ಸುದ್ದಿಯಾಗುತ್ತದೆ. ಜತೆಗೆ ನನಗೆ ನ್ಯಾಯ ಸಿಗುತ್ತದೆ ಎಂಬ ನಂಬಿಕೆಯೂ ಇಲ್ಲ. ಹೀಗಾಗಿ ನಾನು ಹಿಂದಿನ ರಿಲೇಷನ್‌ಶಿಪ್‌ನಲ್ಲಿ ಎದುರಿಸಿದ ದೌರ್ಜನ್ಯದ ಬಗ್ಗೆ ಎಲ್ಲಿಯೂ ಮಾತನಾಡಿರಲಿಲ್ಲ. ಬದಲಾಗಿ ಅದನ್ನು ನಾನೇ ಎದುರಿಸಿದೆ, ಅನುಭವಿಸಿದೆ ಕೊನೆಗೆ ಅದರಿಂದ ಹೊರಬಂದೆ. ಆದರೆ, ಅದರಿಂದ ಹೊರಬಂದ ಬಳಿಕವೂ ಆ ಗಾಯದ ಕಲೆ ಮಾತ್ರ ನನ್ನಲ್ಲಿ ಹಾಗೇ ಉಳಿದಿದೆ' ಎಂದು ಮಾಜಿ ಪ್ರಿಯಕರನ ಹೆಸರು ಹೇಳದೆಯೇ, ತಾವು ಎದುರಿಸಿದ ಕಷ್ಟಗಳ ಬಗ್ಗೆ ಹೇಳಿಕೊಂಡಿದ್ದಾರೆ ನಟಿ ಎರಿಕಾ ಫರ್ನಾಂಡಿಸ್. ಸದ್ಯ ಎರಿಕಾಗೆ ಸಮಸ್ಯೆ ಮಾಡಿದ ಆ ಮಾಜಿ ಪ್ರಿಯಕರ ಯಾರು ಎಂಬುದರ ಬಗ್ಗೆ ಜಾಲತಾಣದಲ್ಲಿ ಚರ್ಚೆ ನಡೆದಿದೆ. ☯

Vol. 40 No. 42 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com